بِسۡمِ اللّٰہِ الرَّحۡمٰنِ الرَّحِیۡمِ نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ವರ್ಷ: 03

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 04

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

27 ಜನವರಿ 2022, 27 ಸುಲಹ್ 1401 ತಬ್‌ಲೀಗ್ ಹಿಜರಿ ಶಮ್‌ಸಿ,
23 ಜಮಾದಿ ಉಸ್ಸಾನಿ 1443 ಹಿಜರಿ ಖಮರಿ.

### ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰھُمَّ اَیِّدْ اِمَامَنَا بِرُوْحِ الْقُدُسِ
وَبَارِکْ لَنَا فِیْ عُمُرِہٖ وَاَمْرِہٖ

### ಅಲ್ಲಾಹನ ಉಪದೇಶ

وَاِنۡ یَّمۡسَسۡکَ اللّٰہُ بِضُرٍّ فَلَا کَاشِفَ لَہٗۤ اِلَّا ہُوَ ؕ وَاِنۡ یَّمۡسَسۡکَ بِخَیۡرٍ فَہُوَ عَلٰی کُلِّ شَیۡءٍ قَدِیۡرٌ ○ (سورۃ الانعام:18)

**(ಅಲ್‌ಅನ್‌ಆಂ : 18)**

**ಅಂದರೆ: ಅಲ್ಲಾಹನು ನಿನಗೆ ಏನಾದರೂ ಕೇಡನ್ನುಂಟು ಮಾಡಿದರೆ ಅವನ ಹೊರತು ಅದನ್ನು ನಿವಾರಿಸುವ ಬೇರಾರೂ ಇಲ್ಲ. ಅವನು ನಿನಗೆ ಸೌಭಾಗ್ಯವನ್ನು ದಯಪಾಲಿಸಿದರೆ ತಾನು ಬಯಸಿದ ಎಲ್ಲವನ್ನೂ ಮಾಡಲು ಅವನು ಸಮರ್ಥನು (ಎಂದು ತಿಳಿದುಕೋ).**

# ಅಹ್ಮದಿಯಾ ಜಮಾಅತಿನ ಕೇಂದ್ರ ಖಾದಿಯಾನ್ ದಾರುಲ್ ಅಮಾನ್‌ನಲ್ಲಿ 126ನೇ ವಾರ್ಷಿಕ ಸಮ್ಮೇಳನ ಅನುಗ್ರಹಪೂರ್ಣವಾದ ಯಶಸ್ವಿ ಆಯೋಜನೆ.

ಕೋವಿಡ್ ಮಹಾಮಾರಿಯು ಹೃದಯಗಳಲ್ಲಿರುವ ದ್ವೇಷ ದೂರ ಮಾಡಲಿಲ್ಲ? ಅಲ್ಲಾಹನ ಈ ಮುನ್ನೆಚ್ಚರಿಕೆಯಿಂದ ಮನುಷ್ಯನು ಯಾವುದೇ ಪಾಠವನ್ನು ಕಲಿಯುತ್ತಿಲ್ಲ. ಇದೆ ವರ್ತನೆ ಮುಂದುವರಿದರೆ ಅದರ ಭಯಂಕರವಾದ ಪರಿಣಾಮಗಳನ್ನು ಕಾಣಬಹುದು.

**ಇಂದು ನಾನು ಇಸ್ಲಾಮಿನ ಶಾಂತಿ ಶಿಕ್ಷಣಗಳ ಕುರಿತು ಕೆಲವು ನಿದರ್ಶನಗಳನ್ನು ಪ್ರಸ್ತುತಪಡಿಸುವೆನು. ಅದರಂತೆ ನಡೆದುಕೊಂಡರೆ ಲೋಕವು ಶಾಂತಿ ಮತ್ತು ಸಮಾಧಾನಗಳ ತಾಣವಾಗಬಹುದು.**

* ಇಸ್ಲಾಮ್ ಅನ್ಯಧರ್ಮಿಯರ ಸ್ಥಾಪಕರಿಗೆ ತಪ್ಪು ಆರೋಪಗಳನ್ನು, ನಿಂದನೆ ಮಾಡುವುದರಿಂದ ತಡೆಯುತ್ತದೆ.

* ಇಸ್ಲಾಮ್ ಎಲ್ಲಾ ಧರ್ಮಗಳನ್ನು ಸುಳ್ಳು ಎಂದು ಹೇಳುವುದಿಲ್ಲ. ಇಸ್ಲಾಂ ಹೇಳುವುದು ಪ್ರತಿ ಸಮುದಾಯದಲ್ಲೂ ಪ್ರವಾದಿಗಳು ಆಗಮಿಸಿರುವರು. ಪವಿತ್ರ ಖುರ್‌ಆನ್‌ನ ವಚನ **“ವ ಇಮ್ಮಿನ್ ಉಮ್ಮತಿನ್ ಇಲ್ಲಾ ಖಲಾ ಫೀಹಾ ನಝೀರ್”** ಪ್ರಕಾಶದಲ್ಲಿ ಒಬ್ಬ ಮುಸಲ್ಮಾನನು ಹಝ್‌ರತ್ ಈಸಾ(ಅ) ರನ್ನು, ಹಝ್‌ರತ್ ಮೂಸಾ(ಅ) ರನ್ನು ಅಥವಾ ಹಿಂದೂ ಅವತಾರಪುರುಷರನ್ನು ಗೌರವ ದೃಷ್ಟಿಯಿಂದ ನೋಡಲು ಬಾಧ್ಯಸ್ಥನಾಗಿರುತ್ತಾನೆ.

* ಇಸ್ಲಾಮ್ ಹೇಳುವುದು ಎಲ್ಲ ಧರ್ಮಗಳ ಅನುಯಾಯಿಗಳನ್ನು ಗೌರವಿಸಬೇಕು ಮತ್ತು ಎಲ್ಲ ಧರ್ಮಗಳ ಸ್ಥಾಪಕರನ್ನು ಗೌರವಿಸಬೇಕು.

* ಇಸ್ಲಾಮಿನ ಕುರಿತು ಒಂದು ತಪ್ಪು ಕಲ್ಪನೆ ಸೃಷ್ಟಿಸಲಾಗಿದೆ. ಇಸ್ಲಾಮ್ ಉಗ್ರವಾದದ ಧರ್ಮವಾಗಿದೆ. ಮತ್ತು ಪ್ರಾರಂಭದಲ್ಲಿ ದೌರ್ಜನ್ಯದಿಂದ ಮುಸಲ್ಮಾನರನ್ನಾಗಿ ಮಾಡಲಾಗಿದೆ. ನಿಜ ಹೇಳಬೇಕಾದರೆ ಇಸ್ಲಾಮ್ ಅದನ್ನು ಅಲ್ಲಗಳೆಯುತ್ತದೆ. ಈ ಲೋಕದಲ್ಲಿ ಇಸ್ಲಾಮ್ ಧರ್ಮವನ್ನು ಸ್ವೀಕರಿಸದ ಯಾರನ್ನೂ ಸಹ ಇಸ್ಲಾಮ್ ಶಿಕ್ಷಿಸಲಿಲ್ಲ. ಇಂದು ಸಹ ಮುಸಲ್ಮಾನರ ನಡತೆ ಇಸ್ಲಾಮಿನ ಶಿಕ್ಷಣದನ್ವಯ ಆದರೆ ಲೋಕದ ದೃಷ್ಟಿ ಇಸ್ಲಾಮ್‌ನತ್ತ ತಿರುಗಬಹುದು.

ಜಲ್ಸದ ಅನುಗ್ರಹಗಳನ್ನು ಭಾಗಿದಾರರು ಜೊತೆಯಲ್ಲಿ ಕೊಂಡು ಹೋಗುವವರಾಗಬೇಕು. ಲೋಕದ ಎಲ್ಲ ಕಡೆಯಿಂದಲು ಈ ಜಲ್ಸದ ಕಾರ್ಯಕ್ರಮಗಳನ್ನು ಆಲಿಸುವವರು. ಒಂದು ಉತ್ಸಾಹ ತಮ್ಮೊಳಗೆ ಸೃಷ್ಟಿಸಿಕೊಳ್ಳಬೇಕು ಮತ್ತು ತಮ್ಮ ಕ್ಷೇತ್ರಗಳಲ್ಲಿ ಇಸ್ಲಾಮಿನ ಪವಿತ್ರವಾದ ಶಿಕ್ಷಣಗಳ ಪ್ರಕಾಶದಲ್ಲಿ ಒಂದು ಕ್ರಾಂತಿಯನ್ನು ಹುಟ್ಟು ಹಾಕುವವರಾಗಬೇಕು.

**ಮುಸ್ಲಿಮ್ ಟೆಲಿವಿಷನ್ ಅಹ್ಮದಿಯಾ ಇಂಟರ್ ನ್ಯಾಷನಲ್ ಮೂಲಕ ಸಯ್ಯದ್‌ನಾ ಹಝ್‌ರತ್ ಅಮೀರುಲ್ ಮೂಮಿನೀನ್ ಖಲಿಫತುಲ್ ಮಸೀಹ್ ಖಾಮಿಸ್ (ಅಬಿಅ) ರವರು ಸಮ್ಮೇಳನವನ್ನುದ್ದೇಶಿಸಿ ಮಾಡಿದ ಅನುಗ್ರಹಪೂರ್ಣ ಸಂಬೋಧನೆ**

* ಕೋವಿಡ್ ಪರಿಸ್ಥಿತಿಗಳಿಂದಾಗಿ ಹುಝೂರ್ ಅನ್ವರ್(ಅತಬಿಅ) ಅವರ ಮಾರ್ಗದರ್ಶನದ ಮೇರೆಗೆ ಮತ್ತು ಸರಕಾರದ ಕೋವಿಡ್ ನಿಯಮಗಳನ್ವಯ ಸೀಮಿತ ನೆಲೆಯಲ್ಲಿ ಸಮ್ಮೇಳ ಆಯೋಜಿಸಲಾಗಿತ್ತು. * ಆದರೆ Live Streaming ಮೂಲಕ ಸಮ್ಮೇಳನದ ವಿಶಾಲವಾದ ನೆಲೆಯಲ್ಲಿ ಪ್ರಯೋಜನ ಪಡೆಯಲಾಯಿತು. * Live Streaming ಮೂಲಕ ಒಂದು ಲಕ್ಷ ಆರು ಸಾವಿರದ ಆರುನೂರ ನಲವತ್ತಾರು ಜನರು ಸಮ್ಮೇಳನದ ಕಾರ್ಯಕ್ರಮಗಳನ್ನು ನೋಡಿ, ಆಲಿಸಿ ಆನಂದಪಟ್ಟರು. * ಎಂಟು ದೇಶಗಳ ಜನರು ಪ್ರತಿನಿಧಿಸಿದ್ದರು. * ನಮಾಝ್ ತಹಜ್ಜುದ್ ಖುರ್‌ಆನ್ ಪಾಠ ಮತ್ತು ದೇವಸ್ಮರಣೆಯಿಂದ ವಾತಾವರಣ ತುಂಬಿತ್ತು. * ಉಲಮಾಅಗಳ (ಮತಪಂಡಿತರ) ಅರ್ಥಪೂರ್ಣ ಭಾಷಣಗಳು, ಆರು ಅನ್ಯದೇಶಿಯ ಭಾಷೆಗಳಲ್ಲಿ ಜಲ್ಸ ಕಾರ್ಯಕ್ರಮಗಳ ಅನುವಾದ, ಜಮಾಅತ್ ಬಾಂಧವರ ಹೆಚ್ಚಿನ ಜ್ಞಾನಾರ್ಜನೆಗಾಗಿ, ತರಬೇತಿ ಆಧಾರವಾಗಿ Documentary ಮತ್ತು ವಿವಿಧ ಮಾಹಿತಿಗಾಗಿ ವಸ್ತು ಪ್ರದರ್ಶನಗಳ ಆಯೋಜನೆ. * ವಿವಾಹಗಳ ಘೋಷಣೆ, ಪ್ರಿಂಟ್ ಮತ್ತು ಎಲೆಕ್ಟ್ರಾನಿಕ್ ಮೀಡಿಯಾದವರಿಂದ ಜಲ್ಸ ಸಮಾಚಾರಗಳ ಪ್ರಸಾರ. * ಹೀಗೆ ಶಾಂತಿಪೂರ್ಣ ಹಾಗೂ ಆಹ್ಲಾದಕರ ಪರಿಸರದಲ್ಲಿ ಜಲ್ಸದ ಎಲ್ಲ ಕಾರ್ಯಕ್ರಮಗಳು ಅಂತ್ಯಗೊಂಡವು.

***ವರದಿ: ಮನ್ಸೂರ್ ಅಹ್ಮದ್ ಮಸ್ರೂರ್ (ಮುನ್‌ತಝಿಮ್ ರಿಪೋರ್ಟಿಂಗ್)***

**(ಭಾಗ-1)**

ಅಲ್‌ಹಮ್ದುಲಿಲ್ಲಾಹ್ ಜಲ್ಸ ಸಾಲಾನಾ ಖಾದಿಯಾನ್ “ಬುಸ್ತಾನ್ ಅಹ್ಮದ್” ವಿಶಾಲವಾದ ಆವರಣದಲ್ಲಿ ದಿನಾಂಕ: 24, 25, 26 ಡಿಸೆಂಬರ್ 2021, ಶುಕ್ರವಾರ, ಶನಿವಾರ, ಭಾನುವಾರ ಆಯೋಜನೆಗೊಂಡು ಶಾಂತಿಪೂರ್ಣ ರೀತಿಯಲ್ಲಿ ಅಂತ್ಯಗೊಂಡಿತು. ಕೋವಿಡ್ ಪರಿಸ್ಥಿತಿಗಳಿಂದಾಗಿ ಹುಝೂರ್ ಅನ್ವರ್(ಅಬಿಅ) ರವರ ಮಾರ್ಗದರ್ಶನ ಹಾಗೂ ಸಲಹೆಗಳ ಪ್ರಕಾಶದಲ್ಲಿ ಖಾದಿಯಾನ್‌ಗೆ ಬಂದು ಜಲ್ಸ ಆಲಿಸುವವರ ಸಂಖ್ಯೆ ಸೀಮಿತ ಗೊಳಿಸಲಾಗಿತ್ತು. Live Streaming ಮೂಲಕ ಸಂಪೂರ್ಣ ಭಾರತದಲ್ಲಿ ಅಹ್ಮದಿಯರು ಈ ಜಲ್ಸದಿಂದ ಪ್ರಯೋಜನ ಪಡೆದರು. ಅಲ್ಲದೇ ವಿದೇಶೀಯರು ಸಹ ಜಲ್ಸ ಸಾಲಾನ ಖಾದಿಯಾನ್ ನೋಡಿದರು ಮತ್ತು ಆಲಿಸಿದರು. ಹೀಗೆ ಅಲ್ಲಾಹನು ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ನಮಗಾಗಿ ಹೊಸ ಹೊಸ ರೀತಿಯ ಪ್ರಚಾರ ಮತ್ತು ತರಬೇತಿ ಸಾಧನಗಳನ್ನು ಒದಗಿಸಿಕೊಟ್ಟನು. ಎರಡು ವರ್ಷಗಳ ನಂತರ ಹುಝೂರ್ ಅನ್ವರ್ (ಅಬಿಅ) ರವರ ವಿಶೇಷ ಮಾರ್ಗದರ್ಶನ ಮತ್ತು ಪ್ರಾರ್ಥನೆಗಳಿಂದಾಗಿ ಜಲ್ಸದ ಆಯೋಜನೆ ಸಾಧ್ಯವಾಯಿತು. ಅದು ಡಿಸೆಂಬರ್ ತಿಂಗಳಲ್ಲಿ ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ಮತ್ತೊಮ್ಮೆ ಸಂತೋಷ ಸಂಭ್ರಮದ ವಾತಾವರಣ

*(ಪುಟ 12 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಮಕ್ಕದ ಖುರೈಶಿಗಳು ಪ್ರವಾದಿ(ಸ) ಅವರನ್ನು ಹಿಂಸೆ ನೀಡಲು ತೀರ್ಮಾನಿಸಿದಾಗ ಹಝ್ರ್‌ರತ್ ಅಬೂಬಕರ್ ಸಿದ್ದೀಖ್(ರ) ಈ ಕಷ್ಟತೆಯ ಕಾಲದಲ್ಲೂ ಹಝ್ರ್‌ರತ್ ಪೈಗಂಬರ್(ಸ)ರೊಂದಿಗೆ ಇದ್ದರು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರ್‌ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಅಫ್ಘಾನಿಸ್ತಾನ ಹಾಗೂ ಪಾಕಿಸ್ತಾನದ ಅಹ್ಮದಿಯರಿಗಾಗಿ ವಿಶೇಶ ದುಆವಿನ ಕೋರಿಕೆ ಅವರಿಗೆ ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರನ್ನು ಅರಿಯುವ ಸೌಭಾಗ್ಯ ಲಭಿಸಲಿ, ಎಲ್ಲ ಕುಕೃತ್ಯಗಳನ್ನು ಕೊನೆಗೊಳಿಸಲಿ ಮತ್ತು ಲೋಕವು ತನ್ನ ಸೃಷ್ಟಿಕರ್ತನ ನೈಜತೆಯನ್ನು ಅರಿಯಲಿ**

**ಐದು ದಿವಂಗತರಾದ ಘಾನದ ಮಾಜಿ ಉಮೂರೆ ಆಮ್ಮ ಸೆಕ್ರಟರಿ ಮತ್ತು ಜಲ್ಸ ಸಾಲಾನ ಆಫೀಸರ್ ಆಗಿದ್ದ ಸನ್ಮಾನ್ಯ ಅಲ್‌ಹಾಜ್ ಅಬ್ದುರ್ರಹ್ಮಾನ್ ಐನ್ನೈನ್ ಸಾಹಿಬ್, ಜೋರ್ದಾನಿನ ಸನ್ಮಾನ್ಯ ಅಧ್‌ಯಾಬ್ ಅಲಿ ಮುಹಮ್ಮದ್ ಅಲ್‌ಜಬಾಲಿ ಸಾಹಿಬ್, ಕೆನಡದಲ್ಲಿ ನೆಲೆಸಿದ್ದ ನಿವೃತ್ತ ಮುರಬ್ಬಿ ಸನ್ಮಾನ್ಯ ದೀನ್ ಮುಹಮ್ಮದ್ ಸಾಹಿಬ್, ಜಲ್ಸ ಸಾಲಾನ ಆಫೀಸಿನ ಉದ್ಯೋಗಿಯಾಗಿದ್ದ ಸನ್ಮಾನ್ಯ ಮಿಯಾ ರಫೀಖ್ ಅಹ್ಮದ್ ಸಾಹಿಬ್ ಮತ್ತು ಅಮೇರಿಕದ ಮಾಜಿ ಜಮಾಅತ್ ಅಮೀರ್ ಆದ ಸನ್ಮಾನ್ಯ ಇಹ್ಸಾನುಲ್ಲಾಹ್ ಝ಼ಫರ್ ಸಾಹಿಬ್‌ರ ಪತ್ನಿಯಾದ ಖಾನಿತ ಝ಼ಫರ್ ಸಾಹಿಬ್‌ರವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝ್ ಜನಾಝ್ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **17–12–2021** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರ್‌ರತ್ ಅಬೂಬಕರ್(ರ)ರಿಗೆ ಸಂಬಂಧಿಸಿ ಗುಲಾಮರನ್ನು ಸ್ವತಂತ್ರಗೊಳಿಸಿದ ಬಗ್ಗೆ ಪ್ರಸ್ತಾಪ ನಡೆಯುತ್ತಿತ್ತು. ಅವುಗಳಲ್ಲಿ ಇನ್ನೂ ಕೆಲವು ಘಟನೆಗಳಿವೆ. ನಹ್‌ದಿಯ ಮತ್ತು ಅವರ ಮಗಳನ್ನು ಹಝ್ರ್‌ರತ್ ಅಬೂಬಕರ್(ರ) ಸ್ವತಂತ್ರಗೊಳಿಸಿದ್ದರು. ಇವರಿಬ್ಬರೂ ಬನೂ ಅಬ್ದುದ್ದಾರ್‌ನ ಒಬ್ಬಳು ಮಹಿಳೆಯ ದಾಸಿಯರಾಗಿದ್ದರು. ಹಝ್ರ್‌ರತ್ ಅಬೂಬಕರ್(ರ) ಅವರಿಬ್ಬರ ಬಳಿಯಿಂದ ದಾಟಿ ಹೋಗುತ್ತಿದ್ದರು. ಆ ಸಮಯದಲ್ಲಿ ಅವರ ಮಾಲಿಕೆ ಅವರಿಬ್ಬರನ್ನೂ ಗೋದಿಯನ್ನು ಹುಡಿ ಮಾಡಲು ಕಳುಹಿಸಿದ್ದಳು. ನಾನು ನಿಮ್ಮನ್ನು ಖಂಡಿತ ಸ್ವತಂತ್ರಗೊಳಿಸುವುದಿಲ್ಲವೆಂದು ಅವಳು ಹೇಳುತ್ತಿದ್ದಳು. ನಿನ್ನ ಶಪಥವನ್ನು ಮುರಿ ಎಂದು ಅವಳೊಡನೆ ಹಝ್ರ್‌ರತ್ ಅಬೂಬಕರ್(ರ) ಹೇಳಿದರು. ಅವಳು ಹೇಳಿದಳು: ಹೋಗಿರಿ, ನೀವೇ ಇವರನ್ನು ಕೆಡಿಸಿದ್ದೀರಿ. ನಿಮಗೆ ಅಷ್ಟು ಚಿಂತೆಯಿದ್ದರೆ ನೀವೇ ಇವರಿಬ್ಬರನ್ನು ಸ್ವತಂತ್ರಗೊಳಿಸು. ಇವರಿಬ್ಬರ ಬದಲಾಗಿ ಎಷ್ಟು ಬೆಲೆ ಕೊಡಬೇಕು ಎಂದು ಹಝ್ರ್‌ರತ್ ಅಬೂಬಕರ್(ರ) ಕೇಳಿದರು. ಇಷ್ಟು ಬೇಕು ಎಂದು ಅವಳು ಹೇಳಿದಳು. ಹಝ್ರ್‌ರತ್ ಅಬೂಬಕರ್(ರ) ಹೇಳಿದರು: ನಾನು ಇವರಿಬ್ಬರನ್ನೂ ಖರೀದಿ ಮಾಡಿದ್ದೇನೆ. ಈಗ ಇವರಿಬ್ಬರೂ ಸ್ವತಂತ್ರರು. ಅನಂತರ ಹಝ್ರ್‌ರತ್ ಅಬೂಬಕರ್(ರ) ಅವರಿಬ್ಬರೊಡನೆ ಹೇಳಿದರು: ಹುಡಿ ಮಾಡಲು ನೀವು ಕೊಂಡುಹೋಗುತ್ತಿದ್ದ ಗೋದಿಯನ್ನು ಅವಳಿಗೆ ಮರಳಿಸು. ಅವರಿಬ್ಬರು ಹೇಳಿದರು: ನಾವು ನಮಗೆ ಒಪ್ಪಿಸಲಾದ ಈ ಗೋದಿಯನ್ನು ಹಿಟ್ಟು ಮಾಡಿ ಕೊಡಲೇ? ಹಝ್ರ್‌ರತ್ ಅಬೂಬಕರ್(ರ) ಹೇಳಿದರು: ಸರಿ, ನೀವಿಬ್ಬರೂ ಹಾಗೆ ಮಾಡಲು ಬಯಸುವುದಾದರೆ ಮಾಡಿರಿ.

ಒಮ್ಮೆ ಹಝ್ರ್‌ರತ್ ಅಬೂಬಕರ್(ರ) ಬನೂ ಮುಅಮ್ಮಿಲಿನ ಒಬ್ಬಳು ದಾಸಿಯ ಬಳಿಯಿಂದ ದಾಟಿಹೋಗುತ್ತಿದ್ದರು. ಬನೂ ಮುಅಮ್ಮಲ್ ಎಂಬುದು ಬನೂ ಅದ್ದಿ ಬಿನ್ ಕಅ್‌ಬಿನ ಒಂದು ಗೋತ್ರವಾಗಿತ್ತು. ಆ ದಾಸಿ ಮುಸ್ಲಿಮಳಾಗಿದ್ದಳು. ಉಮರ್ ಬಿನ್ ಖ಼ತ್ತಾಬ್ ಮುಸ್ಲಿಮ್‌ರಾಗುವುದಕ್ಕೆ ಮುಂಚಿತವಾಗಿ ಆ ದಾಸಿಗೆ ಕಷ್ಟತೆ ನೀಡುತ್ತಿದ್ದರು. ಇಸ್ಲಾಂ ಉಪೇಕ್ಷಿಸಬೇಕೆಂದು ಹೇಳುತ್ತಿದ್ದರು. ಅವಳನ್ನು ಹೊಡೆಯುತ್ತಿದ್ದರು. ಆಯಾಸಗೊಳ್ಳುವಾಗ ಅವರು ಹೀಗೆ ಹೇಳುತ್ತಿದ್ದರು: ನಾನು ದನದ ಕಾರಣದಿಂದ ಬಿಟ್ಟಿದ್ದೇನೆ. ಆಗ ಅವಳು ಹೀಗೆ ಹೇಳುತ್ತಿದ್ದಳು: ನಿನ್ನೊಂದಿಗೂ ಅಲ್ಲಾಹನು ಹೀಗೆಯೇ ಮಾಡುವನು. ಅವಳನ್ನು ಕೂಡ ಹಝ್ರ್‌ರತ್ ಅಬೂಬಕರ್(ರ) ಸ್ವತಂತ್ರಗೊಳಿಸಿದರು. ಹಝ್ರ್‌ರತ್ ಅಬೂಬಕರ್(ರ)ರ ತಂದೆ ಒಮ್ಮೆ ಅವರಿಗೆ ಹೀಗೆ ಸಲಹೆ ನೀಡಿದರು: ನೀನು ಶಕ್ತಶಾಲಿ ಪುರುಷರನ್ನು ಸ್ವತಂತ್ರಗೊಳಿಸು. ಹಾಗಾದರೆ, ಅವರು ನಿನ್ನ ಸಂರಕ್ಷಣೆ ಮಾಡುವರು. ಆಗ ಹಝ್ರ್‌ರತ್ ಅಬೂಬಕರ್(ರ) ಹೀಗೆ ಉತ್ತರಿಸಿದರು: ನಾನು ಕೇವಲ ಅಲ್ಲಾಹನ ಸಂಪ್ರೀತಿಯನ್ನು ಬಯಸುತ್ತೇನೆ. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ–236, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಈ ಕೆಳಗಿನ ವಚನಗಳು ಹಝ್ರ್‌ರತ್ ಅಬೂಬಕರ್‌ರ(ರ) ಬಗ್ಗೆ ವಿವರಿಸಲು ಅವತೀರ್ಣವಾಗಿವೆ ಎಂದು ಅಲ್ಲಾಮ ಖುರ್ತುಬಿ ಮತ್ತು ಅಲ್ಲಾಮ ಆಲೂಸಿ ಹಾಗು ಕೆಲವು ಇತರ ವ್ಯಾಖ್ಯಾನಗಾರರು ಹೇಳುತ್ತಾರೆ. ಆ ವಚನಗಳು ಮತ್ತು ಅವುಗಳ ಅರ್ಥ ಹೀಗಿವೆ: **ಫಅಮ್ಮಾ ಮನ್ ಅಅ್‌ತಾ ವತ್ತಖಾ. ವಸದ್ದಖ ಬಿಲ್‌ಹುಸ್‌ನಾ. ಫಸನುಯಸ್ಸಿರುಹೂ ಲಿಲ್‌ಯುಸ್‌ರಾ. ವಅಮ್ಮಾ ಮನ್‌ಬಖಿ಼ಲ ವಸ್‌ತಗ್‌ನಾ. ವಕಧ್ದಬ ಬಿಲ್‌ಹುಸ್ನಾ. ಫಸನುಯಸ್ಸಿರುಹೂ ಲಿಲ್‌ಉಸ್‌ರಾ. ವಮಾ ಯುಗ್‌ನೀ ಅನ್‌ಹು ಮಾಲುಹು ಇದಾ ತರದ್ದಾ. ಇನ್ನ ಅಲೈನಾ ಲಲ್‌ಹುದಾ. ವ ಇನ್ನ ಲನಾ ಲಲ್‌ಆಖಿ಼ರತು ವಲ್‌ಊಲಾ. ಫಅನ್‌ಝ಼ರ್‌ತುಕುಂ ನಾರನ್ ತಲಝ್ಝಾ. ಲಾ ಯಸ್‌ಲಾಹಾ ಇಲ್ಲಲ್ ಅಶ್‌ಖಾ. ಅಲ್ಲದೀ ಕಧ್ದಬ ವತವಲ್ಲಾ. ವಸಯುಜನ್ನಬುಹಲ್‌ಅತ್‌ಖಾ. ಅಲ್ಲಧೀ ಯೂತೀ ಮಾಲಹೂ ಯತಝ಼ಕ್ಕಾ. ವಮಾ ಲಿಅಹದಿನ್ ಇಂದಹೂ ಮಿನ್‌ನಿಅ್‌ಮತಿ ತುಜ್‌ಜ಼ಾ ಇಲ್ಲಬ್‌ತಿಗ಼ಾಅ ವಜ್‌ಹು ರಬ್ಬುಹುಲ್‌ಅಅ್‌ಲಾ. ವಲಸೌಫ ಯರ್‌ಝ಼ಾ.** ಎಂದರೆ, "ಆದ್ದರಿಂದ ಯಾರು ಅಲ್ಲಾಹನ ಮಾರ್ಗದಲ್ಲಿ ನೀಡುತ್ತಾನೋ ಮತ್ತು ಭಯಭಕ್ತಿ ತೋರಿಸುತ್ತಾನೋ ಹಾಗೂ ಋಜುವಾದುದನ್ನು ಸತ್ಯವೆಂದು ಒಪ್ಪುತ್ತಾನೋ, ಅವನಗೆ ಖಂಡಿತವಾಗಿಯೂ ನಾವು ಸೌಲಭ್ಯಗಳನ್ನು ಒದಗಿಸುವೆವು. ಆದರೆ ಯಾರು ಜಿಪುಣತೆ ತೋರಿಸುತ್ತಾನೋ ಮತ್ತು ತಿರಸ್ಕಾರ ಭಾವದಿಂದ ನಿರ್ಲಕ್ಷಿಸುತ್ತಾನೋ ಹಾಗೂ ಋಜುವಾದುದನ್ನು ಸುಳ್ಳಾಗಿಸುತ್ತಾನೋ, ಅವನಿಗೆ ನಾವು ಕಷ್ಟವನ್ನು ಕೊಡುವೆವು. ಅವನು ನಾಶಹೊಂದುವಾಗ ಅವನ ಸಂಪತ್ತು ಅವನಗೆ ಉಪಯುಕ್ತವಾಗಲಾರದು. ನಿಶ್ಚಯವಾಗಿಯೂ ಮಾರ್ಗದರ್ಶನ ನಮ್ಮ ಹೊಣೆಯಾಗಿದೆ. ಇಹಲೋಕ ಮತ್ತು ಪರಲೋಕದ ಒಡೆತನ ನಮಗಿದೆ. ಆದ್ದರಿಂದ ಪ್ರಜ್ವಲಿಸುವ ನರಕಾಗ್ನಿಯ ಬಗ್ಗೆ ನಾನು ನಿಮಗೆ ಮುನ್ನೆಚ್ಚರಿಕೆ ನೀಡುತ್ತೇನೆ. ಅತಿ ದುಷ್ಟನು ಹೊರತು ಅದನ್ನು ಪ್ರವೇಶಿಸುವುದಿಲ್ಲ. ಅವನಾದರೋ ಸತ್ಯವನ್ನು ಸುಳ್ಳಾಗಿಸಿದವನು ಮತ್ತು ಬೆನ್ನು ತಿರುಗಿಸಿ ಹೋದವನು. ಆದರೆ ಧರ್ಮನಿಷ್ಠನು ಅದರಿಂದ ದೂರವಿರಿಸಲ್ಪಡುವನು. ಅವನಾದರೋ ಪರಿಶುದ್ಧನಾಗಲು ತನ್ನ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ವ್ಯಯಿಸುವವನು. ಅವನ ಮೇಲೆ ಯಾರಿಗೂ ಪ್ರತಿಫಲದ ಋಣಭಾರವಿರುವ ಯಾವುದೇ ಉಪಕಾರವಿಲ್ಲ. ಅವನಾದರೋ ಸರ್ವೋನ್ನತನಾದ ತನ್ನ ಪ್ರಭುವಿನ ಪ್ರೀತಿಯನ್ನು ಮಾತ್ರ ಬಯಸುತ್ತಾನೆ. ಖಚಿಡಿತವಾಗಿಯೂ ಅಲ್ಲಾಹನು ಅವನಲ್ಲಿ ಸಂಪ್ರೀತನಾಗುವನು. (ಸಯ್ಯದುನಾ ಅಬೂಬಕರ್(ರ), ಶಖ್ಸಿಯ್ಯತ್ ಔರ್ ಕಾರ್ನಾಮೆ, ಉರ್ದು ಅನುವಾದ, ಪುಟ–74) (ಅಲ್‌ಜಾಮಿ ಅಲ್‌ಅಹ್ಕಾಮ್ ಅಲ್‌ಖುರ್‌ಆನುಲ್ ಇಮಾಮುಲ್ ಖುರ್ತಬಿ, ಸಂಪುಟ–2, ಪುಟ–3330, ಸೂರತುಲ್ ಲೈಲ್ ದಾರ್ ಇಬ್ನೆ ಹಝ್ಮ್ ಬೈರೂತ್ 2004)

ಹಝ್ರ್‌ರತ್ ಅಬೂಬಕರ್(ರ) ಸ್ವತಂತ್ರಗೊಳಿಸಿದ ಗುಲಾಮರಲ್ಲಿ ಒಬ್ಬರು ಖ಼ಬ್ಬಾಬ್ ಬಿನ್ ಅರತ್ ಸಹ ಇದ್ದರು. ಅವರ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಖ಼ಬ್ಬಾಬ್ ಎಂಬ ಸಹಾಬಿ ಒಂದು ಕಾಲದಲ್ಲಿ ಗುಲಾಮರಾಗಿದ್ದರು. ಅವರು ಸ್ನಾನ ಮಾಡಲು ತನ್ನ ಅಂಗಿಯನ್ನು ಕಳಚಿದಾಗ ಅವರ ಸಮೀಪ ಒಬ್ಬ ವ್ಯಕ್ತಿ ನಿಂತಿದ್ದನು. ಅವರ ಬೆನ್ನು ಬಹಳ ಒರಟಾಗಿರುವುದನ್ನು ಮತ್ತು ಎಮ್ಮೆಯ ಚರ್ಮದ ಹಾಗೆ ಬಿರುಸಾಗಿರುವುದನ್ನು ಆ ವ್ಯಕ್ತಿ ನೋಡಿದನು. ಅದನ್ನು ನೋಡಿ ಅವನು ಆಶ್ಚರ್ಯಚಕಿತನಾದನು. ನಿಮಗೆ ಇಂತಹ ರೋಗ ಯಾವಾಗ ಬಂತು ಮತ್ತು ನಿಮ್ಮ ಚರ್ಮ ಜಾನುವಾರುಗಳ ಚರ್ಮದ ಹಾಗೆ ಗ್ಚಡುಸಾಗಲು ಕಾರಣವೇನೆಂದು ಕೇಳಿದನು. ಅದನ್ನು ಕೇಳಿದಾಗ ಹಝ್ರ್‌ರತ್ ಖ಼ಬ್ಬಾಬ್(ರ) ನಕ್ಕರು ಮತ್ತು ಹೀಗೆ ಹೇಳಿದರು: ಇದು ರೋಗವೇನಲ್ಲ. ಇಸ್ಲಾಂ ಸ್ವೀಕರಿಸಿದಾಗ ನಮಗೆ ಶಿಕ್ಷೆ ನೀಡಲು ನಮ್ಮ ಮಾಲಿಕನು ತೀರ್ಮಾನಿಸಿದನು.

ಅವನು ನಮ್ಮನ್ನು ಸುಡುಬಿಸಿಲಲ್ಲಿ ಮಲಗಿಸಿ ಹೊಡೆಯುತ್ತಿದ್ದನು ಮತ್ತು ನಾವು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರನ್ನು ನಂಬುವುದಿಲ್ಲವೆಂದು ಹೇಳಲು ಒತ್ತಾಯ ಪಡಿಸುತ್ತಿದ್ದನು. ಆದರೆ ನಾವು ಶಹಾದತ್ ಕಲಿಮ ಉಚ್ಚರಿಸುತ್ತಿದ್ದೆವು. ಆಗ ಅವನು ನಮ್ಮನ್ನು ಪುನಃ ಹೊಡೆಯುತ್ತಿದ್ದನು ಹಾಗೂ ಅತ್ಯಂತ ಒರಟು ಮತ್ತು ಬಿರುಸಾದ ಕಲ್ಲುಗಳ ಮೇಲಿಂದ ನಮ್ಮನ್ನು ಎಳೆಯುತ್ತಿದ್ದನು. ನಾವು ಇಸ್ಲಾಂ ಧರ್ಮವನ್ನು ನಿರಾಕರಿಸದ ಕಾರಣದಿಂದ ಜನರು ನಮ್ಮನ್ನು ಹೊಡೆಯುತ್ತಿದ್ದರು. ಹೊಡೆದ ನಂತರ ಆಯಾಸಗೊಳ್ಳುವಾಗ ನಮ್ಮ ಕಾಲುಗಳಿಗೆ ಹಗ್ಗವನ್ನು ಕಟ್ಟಿ ಬಿರುಸಾದ ಜಲ್ಲಿಕಲ್ಲುಗಳ ಮೇಲಿಂದ ಎಳೆಯುತ್ತಿದ್ದರು. ನೀನು ನೋಡಿದೆಲ್ಲವೂ ಅದೇ ಹೊಡೆತ ಮತ್ತು ಎಳೆತದ ಪರಿಣಾಮವಾಗಿದೆ. ಹೀಗೆ ವರ್ಷಗಟ್ಟಲೆ ಅವರನ್ನು ಪೀಡಿಸಲಾಯಿತು. ಕೊನೆಗೆ ಹಝ್ರತ್ ಅಬೂಬಕರ್(ರ)ರಿಗೆ ಇದನ್ನು ಸಹಿಸಲು ಸಾಧ್ಯವಾಗಲಿಲ್ಲ. ತನ್ನ ಸೊತ್ತಿನ ಬಹುಪಾಲು ಮಾರಾಟ ಮಾಡಿ ಅವರನ್ನೆಲ್ಲ ಸ್ವತಂತ್ರಗೊಳಿಸಿದರು.

(ಖುತ್ಬಾತೆ ಮಹ್ಮೂದ್, ಸಂಪುಟ–22, ಪುಟ–546–547, ಖುತ್ಬ ಜುಮುಅ 31–10–1941)

ಬೇರೊಂದು ಸಂದರ್ಭದಲ್ಲಿ, ಹಝ್ರತ್ ಅಬೂಬಕರ್(ರ) ಗುಲಾಮರನ್ನು ಸ್ವತಂತ್ರಗೊಳಿಸುವುದರ ಕುರಿತು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರನ್ನು ನಂಬಿದ ಗುಲಾಮರು ವಿವಿಧ ಸಮುದಾಯಗಳಿಗೆ ಸೇರಿದವರಾಗಿದ್ದರು. ಅವರಲ್ಲಿ ಅಬೀಸಿನಿಯದ ಬಿಲಾಲ್(ರ) ಇದ್ದರು, ರೋಮಿನ ಸುಹೈಬ್(ರ) ಇದ್ದರು, ಅವರಲ್ಲಿ ಕ್ರೈಸ್ತರಾದ ಜುಬೈರ್ ಮತ್ತು ಸುಹೈಬರ್‌ರಂಥವರು ಇದ್ದರು. ಬಹುದೇವಾರಾಧಕರಾದ ಬಿಲಾಲ್(ರ) ಮತ್ತು ಅಮ್ಮಾರ್(ರ) ಕೂಡ ಇದ್ದರು. ಬಿಲಾಲ್(ರ)ರನ್ನು ಅವರ ಮಾಲಿಕನು ಉರಿಬಿಸಿಲಿನಲ್ಲಿ ಮಲಗಿಸಿ ದೇಹದ ಮೇಲೆ ಬಂಡೆಕಲ್ಲನ್ನು ಇರಿಸುತ್ತಿದ್ದನು ಅಥವಾ ಯುವಕರನ್ನು ಅವರ ಎದೆಯ ಮೇಲೆ ಜಿಗಿಯಲಿಕ್ಕಾಗಿ ನಿಶ್ಚಯಿಸುತ್ತಿದ್ದನು. ಹಝ್ರತ್ ಅಬೂಬಕರ್(ರ) ಈ ದೌರ್ಜನ್ಯಗಳನ್ನು ಕಂಡಾಗ ಅವರನ್ನು ಖರೀದಿ ಮಾಡಿ ಅವರನ್ನು ಸ್ವತಂತ್ರಗೊಳಿಸಿದರು. (ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–193–194)

ಅಬಿಸೀನಿಯಗೆ ಹೋಗಲು ಒಮ್ಮೆ ಹಝ್ರತ್ ಅಬೂಬಕರ್(ರ) ನಿರ್ಧರಿಸಿದ್ದರು. ಮುಸ್ಲಿಮರು ವರ್ಧಿಸಿದಾಗ ಖುರೈಶಿನ ಸತ್ಯನಿಷೇಧಿಗಳು ತಮ್ಮ ತಮ್ಮ ಗೋತ್ರಗಳಿಗೆ ಸೇರಿದವರಲ್ಲಿ ಇಸ್ಲಾಂ ಸ್ವೀಕರಿಸಿದವರಿಗೆ ಕಠಿಣವಾದ ಕಷ್ಟತೆಗಳನ್ನು ನೀಡಲು ಶುರುಮಾಡಿದರು. ಅವರನ್ನು ಅವರ ಹೊಸ ಧರ್ಮದಿಂದ ಹಿಂತಿರುಗಿಸುವುದಾಗಿತ್ತು ಅವರ ಉದ್ದೇಶ. ಆಗ ಸತ್ಯವಿಶ್ವಾಸಿಗಳೊಡನೆ ಹಝ್ರತ್ ಪೈಗಂಬರ್(ಸ) ಹೇಳಿದರು: ನೀವು ಭೂಮಿಯಲ್ಲಿ ವ್ಯಾಪಿಸಿರಿ. ಖಂಡಿತವಾಗಿಯೂ ಅಲ್ಲಾಹನು ನಿಮ್ಮನ್ನು ಒಟ್ಟುಗೂಡಿಸುವನು. ನಾವು ಎಲ್ಲಿಗೆ ಹೋಗಬೇಕೆಂದು ಸತ್ಯವಿಶ್ವಾಸಿಗಳು ಕೇಳಿದರು. ತನ್ನ ಕೈಬೆರಳನ್ನು ಅಬಿಸೀನಿಯದ ಕಡೆಗೆ ಬೊಟ್ಟುಮಾಡುತ್ತಾ ಹಝ್ರತ್ ಪೈಗಂಬರ್(ಸ) ಅಲ್ಲಿಗೆ ಹೋಗಲು ಹೇಳಿದರು. ಇದು ರಜಬ್ 5 ನಬವಿಯ ಘಟನೆಯಾಗಿದೆ. ಹಝ್ರತ್ ಪೈಗಂಬರ್(ಸ)ರ ನಿರ್ದೇಶನ ಪ್ರಕಾರ 11 ಪುರುಷರು ಮತ್ತು 4 ಮಹಿಳೆಯರು ಅಬಿಸೀನಿಯದ ಕಡೆಗೆ ವಲಸೆ ಹೋದರು. (ಶರಹ್ ಅಝ್ಝುರ್ಖಾನಿ ಅಲಲ್ ಮವಾಹಿಬ್ ಲಿದ್ದನಿ, ಸಂಪುಟ–1, ಪುಟ–503–504, ದಾರುಲ್ ಕುತುಬ್ ಇಲ್ಮಿಯ ಬೈರೂತ್ 1996)

ಮುಸ್ಲಿಮರು ಅಬಿಸೀನಿಯದ ಕಡೆಗೆ ವಲಸೆ ಹೋದ ನಂತರ ಹಝ್ರತ್ ಅಬೂಬಕರ್(ರ)ರಿಗೂ ಕಷ್ಟತೆಗಳನ್ನು ನೀಡಲಾಯಿತು. ಆಗ ಅವರು ಸಹ ವಲಸೆ ಹೋಗಲು ನಿರ್ಧರಿಸಿದರು. ಈ ಕುರಿತು ಬುಖಾರಿಯಲ್ಲಿ ವರದಿಯಾಗಿದೆ. ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ: ಮುಸ್ಲಿಮರಿಗೆ ಕಷ್ಟತೆಗಳನ್ನು ತಲುಪಿಸಲಾದಾಗ ಹಝ್ರತ್ ಅಬೂಬಕರ್(ರ) ವಲಸೆ ಮಾಡುವ ಉದ್ದೇಶದಿಂದ ಅಬಿಸೀನಿಯದ ಕಡೆಗೆ ಹೊರಟರು. ಅವರು ಬರ್ಕುಲ್ ಗಮಾದ್ ಎಂಬ ಪ್ರದೇಶಕ್ಕೆ ತಲುಪಿದಾಗ ಅವರನ್ನು ಖಾರಃ ಗೋತ್ರದ ಸರದಾರ ಇಬ್ನು ದಗ್‌ನ ಎಂಬವನು ಭೇಟಿಯಾದನು. ಎಲ್ಲಿಗೆ ಹೋಗುತ್ತಿದ್ದೀರಿ ಎಂದು ಹಝ್ರತ್ ಅಬೂಬಕರ್(ರ)ರೊಡನೆ ಕೇಳಿದರು. ಹಝ್ರತ್ ಅಬೂಬಕರ್(ರ) ಹೇಳಿದರು: ನನ್ನ ಸಮುದಾಯ ನನ್ನನ್ನು ಹೊರಗೆ ಹಾಕಿದೆ. ಆದ್ದರಿಂದ ಭೂಮಿಯಲ್ಲಿ ನಡೆದಾಡಿ ನನ್ನ ಪ್ರಭುವಿನ ಆರಾಧನೆ ಮಾಡಲು ನಾನು ಬಯಸುತ್ತೇನೆ. ಇಬ್ನು ದಗ್‌ನ ಹೇಳಿದನು: ನಿಮ್ಮಂತಹ ವ್ಯಕ್ತಿಯನ್ನು ಸ್ವದೇಶದಿಂದ ಹೊರಗೆ ಹಾಕಲೂ ಸಾಧ್ಯವಿಲ್ಲ ಮತ್ತು ಅವರು ಸ್ವದೇಶದಿಂದ ಹೊರಹೋಗಲೂ ಬಾರದು. ನೀವಂತು ಕಣ್ಮರೆಯಾದ ನೈತಿಕಗುಣಗಳನ್ನು ಅನುಷ್ಠಾನಕ್ಕೆ ತಂದ, ರಕ್ತಸಂಬಂಧಗಳನ್ನು ಜೋಡಿಸುವ, ಆಯಾಸಗೊಂಡವರ ಭಾರವೆತ್ತುವ, ಅತಿಥಿ ಸತ್ಕಾರ ಮಾಡುವ ಕಷ್ಟತೆಗಳು ಬರುವಾಗ ಸಹಾಯ ಮಾಡುವ ವ್ಯಕ್ತಿ ಆಗಿರುವಿರಿ. ಬೇರೊಂದೆಡೆ ಹೀಗೆ ತರ್ಜುಮೆ ಮಾಡಲಾಗಿದೆ: ಕಂಗಾಲಾದವರಿಗೆ ಸಂಪಾದಿಸಿ ಕೊಡುತ್ತೀರಿ, ಸಂಬಂಧಿಕರೊಂದಿಗೆ ಉತ್ತಮವಾಗಿ ವರ್ತಿಸುತ್ತೀರಿ, ನಿರ್ಗತಿಕರಿಗೆ ನೆರವು ನೀಡುತ್ತೀರಿ, ಅತಿಥಿ ಸತ್ಕಾರ ಮಾಡುತ್ತೀರಿ, ಬಡವರನ್ನು ಕಷ್ಟತೆಗಳಲ್ಲಿ ಸಹಾಯ ಮಾಡುತ್ತೀರಿ. ನಿಮಗೆ ನಾನು ಅಭಯ ನೀಡುತ್ತೇನೆ. ಮರಳಿ ಹೋಗಿರಿ ಮತ್ತು ಸ್ವದೇಶದಲ್ಲೇ ನಿಮ್ಮ ಪ್ರಭುವಿನ ಆರಾಧನೆ ಮಾಡಿರಿ. ಹೀಗೆ ಇಬ್ನು ದಗ್‌ನ ಕೂಡ ಹಝ್ರತ್ ಅಬೂಬಕರ್‌ರೊಂದಿಗೆ ಹೊರಟರು. ಮಕ್ಕಾ ತಲುಪಿ ಅವನು ಸತ್ಯನಿಷೇಧಿಗಳಾದ ಖುರೈಶಿಗಳ ಸರದಾರರೊಡನೆ ಹೇಳಿದನು: ಅಬೂಬಕರ್‌ರಂತಹ ವ್ಯಕ್ತಿಯನ್ನು ಸ್ವದೇಶದಿಂದ ಹೊರಗೆ ಹಾಕಲೂ ಸಾಧ್ಯವಿಲ್ಲ ಮತ್ತು ಅವರು ಸ್ವದೇಶದಿಂದ ಹೊರಹೋಗಲೂ ಸಾಧ್ಯವಲ್ಲ. ಕಣ್ಮರೆಯಾದ ನೈತಿಕಗುಣಗಳನ್ನು ಅನುಷ್ಠಾನಕ್ಕೆ ತಂದ, ರಕ್ತಸಂಬಂಧಗಳನ್ನು ಜೋಡಿಸುವ, ಆಯಾಸಗೊಂಡವರ ಭಾರವೆತ್ತುವ ಮತ್ತು ಅತಿಥಿ ಸತ್ಕಾರ ಮಾಡುವ ವ್ಯಕ್ತಿಯನ್ನು ನೀವು ಹೊರಗೆ ಹಾಕುತ್ತಿದ್ದೀರಾ? ಖುರೈಶಿಯರು ಇಬ್ನು ದಗ್‌ನರ ಅಭಯವನ್ನು ಅಂಗೀಕರಿಸಿದರು ಮತ್ತು ಹಝ್ರತ್ ಅಬೂಬಕರ್‌ರಿಗೆ ಸುರಕ್ಷೆ ನೀಡಿದರು ಹಾಗೂ ಇಬ್ನು ದಗ್ನರೊಡನೆ ಹೇಳಿದರು: ತನ್ನ ಪ್ರಭುವಿನ ಆರಾಧನೆಯನ್ನು ತನ್ನ ಮನೆಯಲ್ಲೇ ಮಾಡಲು, ಅಲ್ಲೇ ನಮಾಝ್ ನಿರ್ವಹಿಸಲು ಮತ್ತು ಇಷ್ಟಬಂದದ್ದನ್ನು ಮಾಡಲು ಅಬೂಬಕರ್‌ರೊಡನೆ ಹೇಳು. ಆದರೆ ನಮಗೆ ತನ್ನ ಆರಾಧನೆ ಮತ್ತು ಖುರ್‌ಆನ್ ಪಾರಾಯಣದಿಂದ ತೊಂದರೆ ಕೊಡಬಾರದು. ಉಚ್ಚಸ್ವರದಲ್ಲಿ ಓದಬಾರದು. ಏಕೆಂದರೆ ಇದರಿಂದ ನಮ್ಮ ಮಹಿಳೆಯರು ಮತ್ತು ಮಕ್ಕಳು ದಾರಿಗೆಟ್ಟು ಹೋಗುವರು ಎಂಬ ಭಯ ನಮಗಿದೆ. ಅದರ ನಂತರ ಹಝ್ರತ್ ಅಬೂಬಕರ್(ರ) ತನ್ನ ಮನೆಯಲ್ಲೇ ನಮಾಝ್ ಮತ್ತು ಪವಿತ್ರ ಖುರ್‌ಆನ್ ಪಾರಾಯಣ ಮಾಡುತ್ತಿದ್ದರು. ಬೇರೆಲ್ಲೂ ನಮಾಝ್ ಮತ್ತು ಪವಿತ್ರ ಖುರ್‌ಆನ್ ಉಚ್ಚ ಸ್ವರದಲ್ಲಿ ಓದುತ್ತಿರಲಿಲ್ಲ. ಕೆಲವು ಕಾಲದ ನಂತರ ಅವರು ತನ್ನ ಮನೆಯ ಅಂಗಣವನ್ನು ಆರಾಧನೆಯ ಜಾಗವನ್ನಾಗಿ ಮಾಡಿದರು. ಅಲ್ಲೇ ನಮಾಝ್ ಮತ್ತು ಪವಿತ್ರ ಖುರ್‌ಆನ್ ಪಾರಾಯಣ ಮಾಡುತ್ತಿದ್ದರು. ಅವರ ಬಳಿ ಮುಶ್ರಿಕ್ ಮಹಿಳೆಯರು ಮತ್ತು ಮಕ್ಕಳು ಒಟ್ಟುಗೂಡಲು ಶುರುವಾಯಿತು. ಅವರು ಹಝ್ರತ್ ಅಬೂಬಕರ್(ರ)ರನ್ನು ಕಂಡು ಆಶ್ಚರ್ಯ ಪಡುತ್ತಿದ್ದರು. ಹಝ್ರತ್ ಅಬೂಬಕರ್(ರ) ಬಹಳ ಅಳುವ ವ್ಯಕ್ತಿಯಾಗಿದ್ದರು.

ಪವಿತ್ರ ಖುರ್‌ಆನ್ ಓದುವಾಗ ಕಣ್ಣೀರನ್ನು ನಿಯಂತ್ರಿಸಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಈ ಅವಸ್ಥೆಯನ್ನು ಕಂಡು ಖುರೈಶಿನ ಸತ್ಯನಿಷೇಧಿಗಳಾದ ಸರದಾರರು ಚಿಂತಿತರಾದರು. ಇದರ ಬಗ್ಗೆ ಖುರೈಶಿಗಳು ಇಬ್ನು ದಗ್‌ನರೊಡನೆ ಹೀಗೆ ಹೇಳಿಕೊಟ್ಟರು: ತಮ್ಮ ಮನೆಯಲ್ಲೇ ತನ್ನ ಪ್ರಭುವಿನ ಆರಾಧನೆ ಮಾಡಬೇಕೆಂಬ ನಿಬಂಧನೆಯೊಂದಿಗೆ ನಾವು ಅವರಿಗೆ ಅಭಯ ನೀಡಿದ್ದೆವು. ಆದರೆ ಅವರು ಈ ಶರತ್ತಿನ ಪರಿವೆ ಮಾಡುತ್ತಿಲ್ಲ. ತನ್ನ ಮನೆಯ ಅಂಗಣದಲ್ಲಿ ಮಸೀದಿಯನ್ನು ಮಾಡಿರುವರು. ನಮ್ಮ ಮಹಿಳೆಯರು ಮತ್ತು ಮಕ್ಕಳು ದಾರಿಗೆಟ್ಟು ಹೋಗುವರೋ ಎಂಬ ಭಯ ನಮಗಿದೆ. ನೀನು ಅವರ ಬಳಿಗೆ ಹೋಗಿರಿ. ಅವರು ಇಷ್ಟಪಡುವುದಾದರೆ ಅವರು ಮನೆಯೊಳಗೆ ಆರಾಧನೆ ಮಾಡಲಿ. ಹೊರಗೆ ಆರಾಧನೆ ಮಾಡುವವರಾದರೆ ಅಭಯವನ್ನು ನೀಡಬೇಡ. ನಾವು ಎಂದಿಗೂ ಅವರನ್ನು ಹೊರಗೆ ಆರಾಧನೆ ಮಾಡಲು ಅನುಮತಿ ಕೊಡುವುದಿಲ್ಲ. ಇಬ್ನು ದಗ್ನ ಹಝ್ರತ್ ಅಬೂಬಕರ್‌ರ ಬಳಿಗೆ ಬಂದು ಹೀಗೆ ಹೇಳಿದರು: ನಿಮ್ಮ ಸಲುವಾಗಿ ನಾನು ಮಾಡಿದ ಪ್ರತಿಜ್ಞೆಯ ಬಗ್ಗೆ ನಿಮಗೆ ಗೊತ್ತಿದೆ. ಆದ್ದರಿಂದ ನೀವು ಒಂದೋ ಅಲ್ಲಿಗೇ ತಮ್ಮನು ಮಿತಗೊಳಿಸಿರಿ. ಇಲ್ಲದಿದ್ದರೆ ನನ್ನ ಜವಾಬ್ದಾರಿಯನ್ನು ನನಗೆ ಮರಳಿ ಕೊಡಿರಿ. ಹಝ್ರತ್ ಅಬೂಬಕರ್(ರ) ಹೇಳಿದರು: ನಾನು ನಿಮ್ಮ ಅಭಯವನ್ನು ಮರಳಿಸುತ್ತೇನೆ ಮತ್ತು ನಾನು ಅಲ್ಲಾಹನ ಅಭಯದಲ್ಲಿ ಸಂತೃಪ್ತನಾಗಿರುವೆನು. (ಸಹೀಹ್ ಬುಖಾರಿ, ಕಿತಾಭುಲ್ ಕಫಾಲ, ಹದೀಸ್–2297) (ಸಹೀಹ್ ಬುಖಾರಿ ಅನುವಾದ, ಸಂಪುಟ–4, ಪುಟ–276, ನಝಾರತ್ ಇಶಾಅತ್ ರಬ್ವಾಹ್) (ಫರ್‌ಹಂಗ್ ಸೀರತ್, ಪುಟ–57)

ಹಝ್ರತ್ ಅಬೂಬಕರ್(ರ) ತನ್ನ ಅಂಗಳವನ್ನು ಮಸೀದಿಯನ್ನಾಗಿ ಮಾಡಿದ ಬಗ್ಗೆ ಸಹೀಹ್ ಬುಖಾರಿಯ ವ್ಯಾಖ್ಯಾನ ಗ್ರಂಥವಾದ ಉಮ್‌ದತುಲ್ ಖಾರಿಯಲ್ಲಿ ಹೀಗೆ ಬರೆಯಲಾಗಿದೆ: ಈ ಮಸೀದಿಯ ವಿಸ್ತಾರ ಮನೆಯ ಗೋಡೆಗಳ ತನಕವಿತ್ತು. ಇದು ಇಸ್ಲಾಮಿನಲ್ಲಿ ನಿರ್ಮಿಸಲಾದ ಮೊದಲ ಮಸೀದಿಯಾಗಿದೆ.

(ಉಮ್ದತುಲ್ ಖಾರಿ, ಸಂಪುಟ–12, ಪುಟ–185, ಕಿತಾಭುಲ್ ಕಫಾಲ, ಹದೀಸ್–2297)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅಬೂಬಕರ್‌ರಂತಹ ವ್ಯಕ್ತಿಗೆ ಅವರ ಔದಾರ್ಯದ ಕಾರಣದಿಂದ ಮಕ್ಕಾದ ಎಲ್ಲರೂ ಕೃತಜ್ಞತೆ ಅರ್ಪಿಸುತ್ತಿದ್ದರು. ಅವರು ಸಂಪಾದಿಸುವುದೆಲ್ಲವನ್ನು ಗುಲಾಮರನ್ನು ಸ್ವತಂತ್ರಗೊಳಿಸಲು ಖರ್ಚು ಮಾಡುತ್ತಿದ್ದರು. ಅವರು ಒಮ್ಮೆ ಮಕ್ಕಾವನ್ನು ಬಿಟ್ಟು ಹೋಗುತ್ತಿದ್ದರು. ಒಬ್ಬ ಸರದಾರ ಮಾರ್ಗ ಮಧ್ಯೆ ಭೇಟಿಯಾದರು. ನೀವೆಲ್ಲಿಗೆ ಹೋಗುತ್ತಿದ್ದೀರಿ ಎಂದು ಅವರು ಹಝ್ರತ್ ಅಬೂಬಕರ್‌ರೊಡನೆ ಕೇಳಿದರು. ಅವರು ಹೇಳಿದರು: ಪಟ್ಟಣದಲ್ಲಿ ನನಗೀಗ ಸುರಕ್ಷೆಯಿಲ್ಲ. ಆದ್ದರಿಂದ ನಾನೀಗ ಬೇರೆಲ್ಲಿಗಾದರು ಹೋಗುತ್ತಿದ್ದೇನೆ. ಆ ಸರದಾರನು ಹೇಳಿದನು: ನಿಮ್ಮಂತಹ ವ್ಯಕ್ತಿ ಪಟ್ಟಣದಿಂದ ಹೋದರೆ ಪಟ್ಟಣ ನಾಶವಾಗುವುದು. ನಿಮಗೆ ನಾನು ಅಭಯವನ್ನು ನೀಡುತ್ತೇನೆ. ನೀವು ಪಟ್ಟಣವನ್ನು ಬಿಟ್ಟು ಹೋಗಬೇಡ. ಹೀಗೆ ಅವರು ಆ ಸರದಾರನ ಅಭಯದ ಕಾರಣದಿಂದ ಮರಳಿ ಬಂದರು. ಅವರು ಬೆಳಿಗ್ಗೆ ಎದ್ದು ಪವಿತ್ರ ಖುರ್‌ಆನ್ ಓದುವಾಗ ಸ್ತ್ರೀಯರು ಮತ್ತು ಮಕ್ಕಳು ಗೋಡೆಗೆ ಕಿವಿಯಿಟ್ಟು ಪವಿತ್ರ ಖುರ್‌ಆನ್ ಕೇಳುತ್ತಿದ್ದರು. ಏಕೆಂದರೆ ಹಝ್ರತ್ ಅಬೂಬಕರ್‌ರ(ರ) ಸ್ವರದಲ್ಲಿ ಬಹಳ ನೋವು ಮತ್ತು ವೇದನೆಯಿತ್ತು. ಪವಿತ್ರ ಖುರ್‌ಆನ್ ಅರಬಿ ಭಾಷೆಯಲ್ಲಿದ್ದ ಕಾರಣದಿಂದ ಅರೇಬಿಯದ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಅದರ ಅರ್ಥ ಗೊತ್ತಾಗುತ್ತಿತ್ತು ಹಾಗೂ ಆಲಿಸುವವರು ಅದರಿಂದ ಪ್ರಭಾವಿತಗೊಳ್ಳುತ್ತಿದ್ದರು. ಈ ಸುದ್ದಿ ಹರಡಿದಾಗ ಮಕ್ಕದಲ್ಲಿ ಗದ್ದಲವೆದ್ದಿತ್ತು. ಈ ರೀತಿಯಲ್ಲಿ ಎಲ್ಲರೂ ಅಧರ್ಮಿಗಳಾಗುವರು ಎಂದು ಹೇಳಲು ಶುರುಮಾಡಿದರು. ಎಂದರೆ ಪವಿತ್ರ ಖುರ್‌ಆನ್ ಆಲಿಸಿ, ಹಝ್ರತ್ ಅಬೂಬಕರ್‌ರ(ರ) ನೋವುಭರಿತ ಸ್ವರವನ್ನು ಕೇಳಿ ಜನರು ಅಧರ್ಮಿಗಳಾಗುವರು ಎಂದು.

ಅಹ್ಮದಿಯರೊಂದಿಗೆ ಕೆಲವು ದೇಶಗಳಲ್ಲಿ ಇದೇ ಸ್ಥಿತಿಯಾಗುತ್ತಿದೆ. ವಿಶೇಷವಾಗಿ ಪಾಕಿಸ್ತಾನದಲ್ಲಿ. ಅಹ್ಮದಿಯರು ಪವಿತ್ರ ಖುರ್‌ಆನ್ ಓದುವುದನ್ನು, ನಮಾಝ್ ನಿರ್ವಹಿಸುವುದನ್ನು ನೋಡಿದರೆ ಜನರು ಅಧರ್ಮಿಗಳಾಗುವರು ಎಂದು ಹೇಳುತ್ತಾರೆ. ಆದ್ದರಿಂದ ಅಹ್ಮದಿಯರು ನಮಾಝ್ ನಿರ್ವಹಿಸಿದರೆ ಮತ್ತು ಪವಿತ್ರ ಖುರ್‌ಆನ್ ಪಾರಾಯಣ ಮಾಡಿದರೆ ಕಠಿಣವಾದ ಶಿಕ್ಷೆಯಿದೆ.

ಹೇಗಿದ್ದರೂ ಕೊನೆಗೆ ಜನರು ಆ ಸರದಾರನ ಹತ್ತಿರ ಹೋದರು ಮತ್ತು ಹೀಗೆ ಕೇಳಿದರು: ನೀವು ಅಬೂಬಕರ್‌ರಿಗೆ ಏಕೆ ಅಭಯ ನೀಡಿದ್ದೀರಿ. ಆಗ ಆ ಸರದಾರನು ಹಝ್ರತ್ ಅಬೂಬಕರ್‌ರೊಡನೆ ಹೀಗೆ ಹೇಳಿದರು: ನೀವು ಈ ರೀತಿಯಾಗಿ ಪವಿತ್ರ ಖುರ್‌ಆನ್ ಓದಬೇಡಿರಿ. ಇದರಿಂದ ಮಕ್ಕದ ಜನರು ಕೋಪಗೊಳ್ಳುತ್ತಿದ್ದಾರೆ. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ಹಾಗಾದರೆ ನೀವು ನಿಮ್ಮ ಅಭಯವನ್ನು ಮರಳಿ ಪಡೆಯಿರಿ. ನಾನು ಹಾಗೆ ಮಾಡುವುದನ್ನು ಬಿಟ್ಟುಬಿಡಲಾರೆನು. ಹೀಗೆ ಆ ಸರದಾರನು ತನ್ನ ಅಭಯವನ್ನು ಮರಳಿ ಪಡೆದರು. (ತಫ್ಸೀರೆ ಕಬೀರ್, ಸಂಪುಟ-10, ಪುಟ-327)

ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರೊಂದಿಗೆ ಅಬೀ ತಾಲಿಬಿನ ಕಣಿವೆಯಲ್ಲೂ ಜೊತೆಗಿದ್ದರು. ಮಕ್ಕದ ಖುರೈಶಿಗಳು ಏಕದೇವನ ಸಂದೇಶವನ್ನು ತಡೆಯಲಿಕ್ಕಾಗಿ ಎಲ್ಲ ರೀತಿಯ ಪ್ರಯತ್ನ ಮಾಡಿದರು. ಆದರೆ ಅವರಿಗೆ ಎಲ್ಲ ಕಡೆಯಿಂದಲೂ ಪರಾಜಯ ಉಂಟಾದಾಗ ಅವರು ಒಂದು ಕಾರ್ಯಚರಣೆವೆಂಬಂತೆ ಬನೂ ಹಾಶಿಂ ಮತ್ತು ಬನೂಮುತಲ್ಲಿಬ್‌ರೊಂದಿಗೆ ಸಂಬಂಧ ವಿಚ್ಛೇದನ ಮಾಡುವ ತೀರ್ಮಾನ ಮಾಡಿದರು. ಇದರ ಬಗ್ಗೆ ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ:

ಖುರೈಶಿಗಳು ಒಂದು ನಡೆವಳಿಕೆ ಕ್ರಮವೆಂಬಂತೆ ಪರಸ್ಪರ ಸಮಾಲೋಚನೆ ನಡೆಸಿ ಹಝ್ರತ್ ಪೈಗಂಬರ್(ಸ) ಮತ್ತು ಬನೂ ಹಾಶಿಮಿನ ಮತ್ತು ಬನೂ ಮುತಲ್ಲಿಬಿನ ಎಲ್ಲ ಸದಸ್ಯರೊಂದಿಗೆ ಎಲ್ಲ ರೀತಿಯ ಸಂಬಂಧವನ್ನು ಮುರಿಯಲು ತೀರ್ಮಾನಿಸಿದರು. ಅವರು ಹಝ್ರತ್ ಪೈಗಂಬರ್(ಸ)ರಿಗೆ ಸಂರಕ್ಷಣೆ ನೀಡುವುದರಿಂದ ಹಿಂದೆ ಸರಿಯುವುದಿಲ್ಲವೆಂದಾದರೆ ಅವರನ್ನು ಒಂದೇ ಜಾಗದಲ್ಲಿ ಇರುವಂತೆ ಮಾಡಿ ನಾಶಮಾಡಬೇಕೆಂದು ತೀರ್ಮಾನಿಸಿದರು. ಹೀಗೆ ಮುಹರ್ರಂ ನಬವಿ 7ರಲ್ಲಿ ಒಂದು ಒಪ್ಪಂದವನ್ನು ಬರೆಯಲಾಯಿತು. ಯಾವುದೇ ವ್ಯಕ್ತಿ ಬನೂ ಹಾಶಿಂ ಮತ್ತು ಬನೂ ಮುತಲ್ಲಿಬ್ ಕುಟುಂಬದೊಂದಿಗೆ ಸಂಬಂಧವಿರಿಸಬಾರದು ಮತ್ತು ಅವರಿಗೆ ಯಾವುದೇ ವಸ್ತು ಮಾರಾಟ ಮಾಡಬಾರದು. ಅವರಿಂದ ಯಾವುದೇ ವಸ್ತು ಖರೀದಿ ಮಾಡಬಾರದು, ಅವರ ಬಳಿಗೆ ಯಾವುದೇ ಆಹಾರಪಾನಿಯದ ವಸ್ತುಗಳು ಹೋಗಲು ಬಿಡಬಾರದು, ಅವರೊಂದಿಗೆ ಯಾವುದೇ ರೀತಿಯ ಸಂಬಂಧವಿರಿಸಬಾರದು. ಅಹ್ಮದಿಯರೊಂದಿಗೆ ಕೆಲವು ಸ್ಥಳಗಳಲ್ಲಿ ಇದೇ ರೀತಿಯಾಗಿ ವರ್ತಿಸಲಾಗುತ್ತದೆ. ಹೇಗಿದ್ದರೂ ಆ ಗೋತ್ರಗಳು ಮುಹಮ್ಮದ್(ಸ)ರಿಂದ ಬೇರೆಯಾಗಿ ಎಲ್ಲಿಯ ವರೆಗೆ ಮುಹಮ್ಮದ್(ಸ)ರನ್ನು ಸತ್ಯನಿಷೇಧಿಗಳಿಗೆ ಒಪ್ಪಿಸುವುದಿಲ್ಲವೋ ಅಲ್ಲಿಯ ವರೆಗೆ ಈ ಬಹಿಷ್ಕಾರವನ್ನು ಮುಂದುವರೆಸಲು ತೀರ್ಮಾನಿಸಲಾಯಿತು. ಈ ಒಪ್ಪಂದದಲ್ಲಿ ಖುರೈಶಿಗಳೊಂದಿಗೆ ಬನೂ ಕನಾನ ಸಹ ಸೇರಿತ್ತು. ಈ ಒಪ್ಪಂದವನ್ನು ಬರೆಯಲಾಗಿತ್ತು ಮತ್ತು ಎಲ್ಲ ಹಿರಿಯ ಮುಖಂಡರು ಅದರಲ್ಲಿ ಸಹಿ ಹಾಕಿದ್ದರು. ಅನಂತರ ಅದನ್ನು ಒಂದು ಸಾಮುದಾಯಿಕ ಪ್ರತಿಜ್ಞೆಯೆಂಬಂತೆ ಕಅ್‌ಬದ ಗೋಡೆಗೆ ತೂಗುಹಾಕಲಾಯಿತು. ಹೀಗೆ ಹಝ್ರತ್ ಪೈಗಂಬರ್(ಸ), ಹಾಶಿಂ ಕುಟುಂಬ ಮತ್ತು ಮುತಲ್ಲಿಬ್ ಕುಟುಂಬದ ಎಲ್ಲ ಮುಸ್ಲಿಮರು ಮತ್ತು ಮುಸ್ಲಿಮೇತರರು ಅಬೀ ತಾಲಿಬಿನ ಕಣಿವೆಯಲ್ಲಿ ಇರಬೇಕಾಗಿ ಬಂತು. (ಹಝ್ರತ್ ಪೈಗಂಬರ್(ಸ)ರ ದೊಡ್ಡಪ್ಪರಾದ ಅಬೂಲಹಬ್ ಹೊರತುಪಡಿಸಿ. ಅವನು ತನ್ನ ಶತ್ರುತ್ವದ ಆವೇಶದಲ್ಲಿ ಖುರೈಶಿಗಳೊಂದಿಗೆ ಸೇರಿದ್ದನು.) ಈ ರೀತಿಯಾಗಿ ಖುರೈಶಿನ ಎರಡು ದೊಡ್ಡ ಗೋತ್ರಗಳು ಮಕ್ಕದ ನಾಗರಿಕ ಜೀವಿತದಿಂದ ಸಂಪೂರ್ಣವಾಗಿ ಬೇರ್ಪಟ್ಟವು. ಬನೂ ಹಾಶಿಮಿನ ಕೌಟುಂಬಿಕ ಕಣಿವೆಯಾದ ಅಬೀ ತಾಲಿಬಿನ ಕಣಿವೆಯಲ್ಲಿ ಎಲ್ಲರು ಕೈದಿಗಳಂತೆ ಬಹಿಷ್ಕರಿಸಲ್ಪಟ್ಟರು. ಮಕ್ಕದಲ್ಲಿ ಇದ್ದ ಉಳಿದ ಕೆಲವು ಮುಸ್ಲಿಮರು ಸಹ ಅವರೊಂದಿಗೆ ಇದ್ದರು. ಅಂತಹ ಅತ್ಯಂತ ಕಠಿಣ ಪರಿಸ್ಥಿತಿಗಳಲ್ಲೂ ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರ ಜೊತೆಯನ್ನು ಬಿಟ್ಟಿರಲಿಲ್ಲ. ಹಝ್ರತ್ ಶಾಹ್ ವಲಿಯುಲ್ಲಾಹ್ ರಹ್ಮತುಲ್ಲಾಹ್ ಬರೆಯುತ್ತಾರೆ: ಹಝ್ರತ್ ಪೈಗಂಬರ್(ಸ)ರಿಗೆ ತೊಂದರೆ ಕೊಡಲು ಖುರೈಶಿಗಳು ಒಮ್ಮತಾಭಿಪ್ರಾಯ ಹೊಂದಿದಾಗ ಅವರು ಒಂದು ದಸ್ತಾವೇಜನ್ನು ಬರೆದರು. (ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-166)

ಹಝ್ರತ್ ಅಬೂಬಕರ್ ಸಿದ್ದೀಖ್(ರ) ಈ ಕಷ್ಟತೆಯ ಕಾಲದಲ್ಲೂ ಹಝ್ರತ್ ಪೈಗಂಬರ್(ಸ)ರೊಂದಿಗೆ ಇದ್ದರು. ಈ ಘಟನೆಯ ಬಗ್ಗೆ ಅಬೂ ತಾಲಿಬ್ ಹೀಗೆ ಪದ್ಯ ಬರೆದಿರುವರು: **ಹುಮ್ ರಜಉ ಅಸ್‌ಹಲ್ ಇಬ್ನು ಬೈಝಾಅ ರಾಜಿಅನ್. ಫಸುರ್ ಅಬೂಬಕರ್ ಬಿಹಾ ಮುಹಮ್ಮದ್**. ಎಂದರೆ, ಅವರು ಸಹಲ್ ಬಿನ್ ಬೈಝಾರನ್ನು ಸಂತೋಷಪಡಿಸುತ್ತಾ ಮರಳಿಸಿದರು. ಆಗ ಅಬೂಬಕರ್ ಮತ್ತು ಮುಹಮ್ಮದ್(ಸ) ಸಂತೋಷಗೊಂಡರು. (ಇಝಾಲತುಲ್ ಇಖ್ಫಾ, ಹಝ್ರತ್ ಶಾಹ್ ವಲೀಉಲ್ಲಾ ಉರ್ದು ಅನುವಾದ ಇಶ್ತಿಯಾಖ್ ಅಹ್ಮದ್ ದೇವ್ಬಂದಿ, ಸಂಪುಟ-3, ಪುಟ-39-40, ಖದೀಮಿ ಕುತುಬ್ ಖಾನ ಆರಾಮ್ ಬಾಗ್ ಕರಾಚಿ) (ಸಯ್ಯದುನಾ ಸಿದ್ದೀಖೆ ಅಕ್ಬರ್(ರ) ಶಬ್ ವ ರೋಝ್, ಪುಟ-30)

ಎಂದರೆ ಮಕ್ಕದ ಖುರೈಶಿಗಳು ಕೊನೆಗೆ ಬಹಿಷ್ಕಾರದ ಒಪ್ಪಂದವನ್ನು ಕೊನೆಗೊಳಿಸಿದಾಗ ಅಬೂತಾಲಿಬ್ ಈ ಕಾವ್ಯವನ್ನು ಹೇಳಿದರು. ಅದರಲ್ಲಿ ಒಂದು ಪದ್ಯಪಂಕ್ತಿ ಮೇಲಿನದ್ದಾಗಿತ್ತು. ಎಂದರೆ ಬಹಿಷ್ಕಾರ ಕೊನೆಗೊಂಡಾಗ ಹಝ್ರತ್ ಪೈಗಂಬರ್(ಸ) ಮತ್ತು ಅಬೂಬಕರ್(ರ) ಸಂತೋಷಗೊಂಡರು.

**ಗುಲಿಬತಿರ್ರೂಮು ಫೀ ಅದ್‌ನಲ್ ಅರ್‌ಝಿ** ಎಂಬ ಪವಿತ್ರ ಖುರ್‌ಆನಿನ ವಚನದ ಬಗ್ಗೆ ಹಝ್ರತ್ ಇಬ್ನು ಅಬ್ಬಾಸ್(ರ) ವರದಿ ಮಾಡುತ್ತಾರೆ: ಭವಿಷ್ಯವಾಣಿ ಮತ್ತು ಅದರ ಬಗ್ಗೆ ಹಝ್ರತ್ ಅಬೂಬಕರ್(ರ) ಪಣತೊಟ್ಟ ಬಗ್ಗೆ ಪ್ರಸ್ತಾಪವಿದೆ. ಅಲಿಫ್ ಲಾಮ್ ಮೀಮ್ ಗುಲಿಬತುರ್ರೂಂ. ಹಝ್ರತ್ ಇಬ್ನು ಅಬ್ಬಾಸ್(ರ) ಹೇಳುತ್ತಾರೆ: ಇರಾನಿಯರು ರೋಮನರ ಮೇಲೆ ವಿಜಯ ಸಾಧಿಸಬೇಕೆಂದು ಬಹುದೇವಾರಾಧಕರು ಬಯಸುತ್ತಿದ್ದರು. ಏಕೆಂದರೆ ಇರಾನಿಯರು ಕೂಡ ಮೂರ್ತಿಪೂಜಕರಾಗಿದ್ದರು. ಆದರೆ ರೋಮನರು ಇರಾನಿಯರ ಮೇಲೆ ವಿಜಯ ಸಾಧಿಸಬೇಕೆಂದು ಮುಸ್ಲಿಮರು ಬಯಸುತ್ತಿದ್ದರು. ಏಕೆಂದರೆ, ರೋಮನರು ಗ್ರಂಥಾನುಸಾರಿಗಳಾಗಿದ್ದರು. ಅವರು ಇದರ ಬಗ್ಗೆ ಹಝ್ರತ್ ಅಬೂಬಕರ್‌ರೊಡನೆ(ರ) ಹೇಳಿದರು. ಹಝ್ರತ್ ಅಬೂಬಕರ್(ರ) ಇದರ ಬಗ್ಗೆ ಹಝ್ರತ್ ಪೈಗಂಬರ್(ಸ)ರೊಡನೆ ಹೇಳಿದರು. ಆಗ ರೋಮನರು ಖಂಡಿತ ಜಯ ಸಾಧಿಸುವರು ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಹೀಗೆ ಹಝ್ರತ್ ಅಬೂಬಕರ್(ರ) ಮುಶ್ರಿಕರೊಂದಿಗೆ ಬಾಜಿ ಕಟ್ಟಿದರು. (ಸನನ್ ಅತ್ತಿರ್‌ಮಿಝಿ, ಅಬ್ವಾಬುತ್ತಫ್ಸೀರ್, ಹದೀಸ್-3193)

ಬಹಳ ವೈಭವಶಾಲಿಯಾಗಿ ಈಡೇರಿದ ಹಝ್ರತ್ ಪೈಗಂಬರ್(ಸ)ರ ನಾಲ್ಕು ಭವಿಷ್ಯವಾಣಿಗಳ ಬಗ್ಗೆ ಸಹೀಹ್ ಬುಖಾರಿಯಲ್ಲಿ ಪ್ರಸ್ತಾಪಿಸಲಾಗಿವೆ. ಅವುಗಳಲ್ಲಿ ರೋಮ್ ವಿಜಯದ ಭವಿಷ್ಯವಾಣಿ ಕೂಡ ಇದೆ. ಮಸ್ರೂಖ್ ವರದಿ ಮಾಡುತ್ತಾರೆ: ನಾವು ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್‌ರ ಬಳಿಯಿದ್ದೆವು. ಅವರು ಹೇಳಿದರು: ಜನರು ಮುಖ ತಿರುಗಿಸುತ್ತಿದ್ದಾರೆ ಎಂದು ಹಝ್ರತ್ ಪೈಗಂಬರ್(ಸ) ನೋಡಿದಾಗ ಅವರು ಹೀಗೆ ಪ್ರಾರ್ಥಿಸಿದರು: ಹಝ್ರತ್ ಯೂಸುಫ್(ಅ)ರ ಕಾಲದಲ್ಲಿ ಏಳು ವರ್ಷಗಳ ಬರಗಾಲ ಬಂದ ಹಾಗೆಯೇ ಅವರಿಗೂ ಬರಗಾಲ ಬರಲಿ. ಹೀಗೆ ಪ್ರತಿಯೊಂದು ವಸ್ತುವನ್ನು ನಾಶಮಾಡುವಂತಹ ಬರಗಾಲ ಬಂತು. ಕೊನೆಗೆ ಅವರು ಚರ್ಮ, ಮೃತದೇಹ ಮತ್ತು ದುರ್ಗಂಧದ ಶವಗಳನ್ನು ಕೂಡ ತಿಂದರು. ಅವರಲ್ಲಿ ಯಾವನಾದರೂ ಆಕಾಶದ ಕಡೆಗೆ ನೋಡಿದರೆ, ಅವನಿಗೆ ಅಲ್ಲಿ ಹಸಿವೆಯಿಂದ ಹೊಗೆ ಮಾತ್ರ ಕಾಣುತ್ತಿತ್ತು. "ಆಕಾಶವು ಒಂದು ದಟ್ಟವಾದ ಹೊಗೆಯಿಂದ ಆವರಿಸಲ್ಪಡುವ ಒಂದು ದಿನವನ್ನು ಕಾಯಿರಿ. ನಾವು ನಿಮ್ಮನ್ನು ಹಿಡಿಗೂಡುವಾಗ ನೀವು ಹಿಂದೆ ಮಾಡಿದನ್ನೇ ಮಾಡುವಿರಿ" ಎಂದು ಅಲ್ಲಾಹನು ಹೇಳಿದ್ದನು. ಆ ಮಹಾ ಶಿಕ್ಷೆಯು ಬದ್ರಿನ ದಿವಸ ಬಂದಿತು. ಹೀಗೆ ಹೊಗೆಯ ಶಿಕ್ಷೆ, ಕಠಿಣವಾದ ಹಿಡಿತ, ತಪ್ಪಿಸಲಾಗದ ಶಿಕ್ಷೆಯ ಭವಿಷ್ಯವಾಣಿ ಮತ್ತು ರೋಮಿನ ಭವಿಷ್ಯವಾಣಿಯೆಲ್ಲವೂ ಈಡೇರಿದುವು. (ಸಹೀಹ್ ಬುಖಾರಿ, ಕಿತಾಬುಲ್ ಇಸ್ತಿಸ್ಖಾ, ಬಾಬ್ ದುಆಇನ್ನಬೀ(ಸ).............ಹದೀಸ್-1007)

ಅಲ್ಲಾಮ ಬದ್ರುದ್ದೀನ್ ಐನಿ ಬರೆಯುತ್ತಾರೆ: ಹಝ್ರತ್ ಅಬೂಬಕರ್(ರ) ಮತ್ತು ಅಬೂಜಹಲಿನ ನಡುವೆ ಕೆಲವು ವರ್ಷಗಳ ಬಾಜಿ ಕಟ್ಟಲಾಗಿತ್ತು. ಹಝ್ರತ್ ಪೈಗಂಬರ್(ಸ) ಹೇಳಿದರು: **ಬಿಝ್ಉನ್** ಎಂಬ ಪದದ ಪ್ರಯೋಗವಾಗಿದೆ. ಅದನ್ನು ಒಂಬತ್ತು ವರ್ಷ ಅಥವಾ ಏಳು ವರ್ಷಗಳಿಗೆ ಸಂಬಂಧಿಸಿ ಹೇಳಲಾಗುತ್ತದೆ. ಆದ್ದರಿಂದ ಕಾಲಾವಧಿಯನ್ನು ವರ್ಧಿಸು. ಆಗ ಹಝ್ರತ್ ಅಬೂಬಕರ್(ರ) ಕಾಲಾವಧಿಯನ್ನು ವರ್ಧಿಸಿದರು. ಕೊನೆಗೆ ರೋಮ್ ಜಯ ಗಳಿಸಿತು.

ಅಲ್ಲಾಹನು ಹೇಳುತ್ತಾನೆ: **ಅಲಿಫ್ ಲಾಮ್ ಮೀಂ. ಗುಲಿಬತುರ್ರೂಂ. ಫೀ ಅದನಲ್ ಅರ್‌ಝಿ ವಹುಂ ಮಿನ್‌ಬಅ್‌ದಿ ಗಲಬಹಿಂ. ಸಯಗ್‌ಲಿಬೂನ್. ಫೀ ಬಿಧ್‌ಇ ಸಿನೀನ್. ಲಿಲ್ಲಾಹಿ ಅಮ್‌ರು. ಮಿನ್ ಖಬ್ಲು. ವಮಿನ್‌ಬಅ್‌ದ್. ವ ಯೌಮಿಧಿನ್. ಯಫ್‌ರಹುಲ್‌ಮೂಮಿನೀನ್. ಬಿನಸ್‌ರಿಲ್ಲಾಹ್.**

ತರ್ಜುಮೆ: ನಾನು ಅಲ್ಲಾಹ್ ಎಲ್ಲ ಬಲ್ಲವನಾಗಿದ್ದೇನೆ. ರೋಮನರು ಪರಾಜಿತರಾದರು. ಅತಿ ಸಮೀಪವಾದೊಂದು ದೇಶದಲ್ಲಿ. ಅವರು ತಮ್ಮ ಪರಾಭವದ ಬಳಿಕ ವಿಜಯಿಗಳಾಗುವರು. ಕೆಲವೇ ವರ್ಷಗಳಲ್ಲಿ. ಮೊದಲು ಮತ್ತು ಅನಂತರ ಅಲ್ಲಾಹನದೇ ಅಧಿಕಾರವಾಗಿದೆ. ಆ ದಿನದಂದು ಸತ್ಯವಿಶ್ವಾಸಿಗಳು ಹರ್ಷಪುಳಕಿತರಾಗುವರು. ಅಲ್ಲಾಹನ ಸಹಾಯದಿಂದ. ಶುಅ್‌ಬಿ ಹೇಳುತ್ತಾರೆ. ಆ ಕಾಲದಲ್ಲಿ ಬಾಜಿ ಕಟ್ಟುವುದು ಅನುಮತನೀಯವಾಗಿತ್ತು. (ಉಮ್ದತುಲ್ ಖಾರಿ, ಶರಹ್ ಸಹೀಹ್ ಬುಖಾರಿ, ಸಂಪುಟ-7, ಪುಟ-46, ಕಿತಾಬುಲ್ ಇಸ್ತಿಸ್‌ಖಾ, ಹದೀಸ್-1007 ದಾರ್ ಅಹ್ಯಾಉತ್ತುರಾಸುಲ್ ಅರಬಿ 2003)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಈ ಕುರಿತು ಹೇಳುತ್ತಾರೆ: ಇಸ್ಲಾಮಿಗೆ ಮುಂಚೆ ಮತ್ತು ಇಸ್ಲಾಮಿನ ಆರಂಭಿಕ ಕಾಲದಲ್ಲಿ ಲೋಕದಲ್ಲಿ ಅತ್ಯಂತ ಶಕ್ತಿಶಾಲಿ ಆಡಳಿತಗಳು ಎರಡಾಗಿದ್ದುವು. ಒಂದು ಇರಾನ್ ಮತ್ತೊಂದು ರೋಮ್. ಈ ಎರಡೂ ಆಡಳಿತಗಳು ಅರೇಬಿಯದ ಸಮೀಪವಿದ್ದುವು. ಆದ್ದರಿಂದ ಕೆಲವೊಮ್ಮೆ ಅವರ ನಡುವೆ ಅನ್ಯೋನ್ಯ ಯುದ್ಧಗಳು ನಡೆಯುತ್ತಿದ್ದುವು. ಭವಿಷ್ಯ ನುಡಿಯಲ್ಪಟ್ಟ ಕಾಲದಲ್ಲಿ ಇರಾನ್ ಆಡಳಿತವು ರೋಮಿನ ಅನೇಕ ಅಮೂಲ್ಯ ಪ್ರದೇಶಗಳನ್ನು ವಶಪಡಿಸಿಕೊಂಡಿತ್ತು. ಖುರೈಶಿಗಳು ಮೂರ್ತಿಪೂಜಕರಾಗಿದ್ದರು. ಫಾರಿಸ್‌ನದ್ದೂ ಹೆಚ್ಚುಕಮ್ಮಿ ಅದೇ ರೀತಿಯ ಧರ್ಮವಾಗಿತ್ತು. ಆದ್ದರಿಂದ ಮಕ್ಕದ

ಖುರೈಶಿಗಳು ಇರಾನಿನ ವಿಜಯದಿಂದ ಸಂತೋಷಗೊಂಡಿದ್ದರು. ಆದರೆ ಮುಸ್ಲಿಮರಿಗೆ ರೋಮಿನೊಂದಿಗೆ ಸಹಾನುಭೂತಿಯಿತ್ತು. ಏಕೆಂದರೆ ರೋಮಿನ ಆಡಳಿತ ಕ್ರೈಸ್ತರದ್ದಾಗಿತ್ತು. ಅವರು ಗ್ರಂಥಾನುಸಾರಿಗಳಾದ ಕಾರಣದಿಂದ ಮುಸ್ಲಿಮರಿಗೆ ಸಮೀಪದವರಾಗಿದ್ದರು. ಇಂತಹ ಸ್ಥಿತಿಯಲ್ಲಿ ಹಝ್ರತ್ ಪೈಗಂಬರ್(ಸ) ಅಲ್ಲಾಹನ ಅರಿವು ಗಳಿಸಿ ಹೀಗೆ ಭವಿಷ್ಯ ನುಡಿದರು: ಈಗಂತು ಇರಾನ್ ರೋಮಿನ ಮೇಲೆ ಜಯಗಳಿಸುತ್ತಿದೆ. ಆದರೆ ಕೆಲವು ವರ್ಷಗಳಲ್ಲಿ ರೋಮ್ ಇರಾನಿನ ಮೇಲೆ ಜಯಗಳಿಸುವುದು. ಆ ದಿನದಂದು ಮುಸ್ಲಿಮರು ಸಂತೋಷಗೊಳ್ಳುವರು. ಈ ಭವಿಷ್ಯವಾಣಿಯನ್ನು ಕೇಳಿ ಮುಸ್ಲಿಮರು ವಿಶೇಷವಾಗಿ ಹಝ್ರತ್ ಅಬೂಬಕರ್(ರ) ಮಕ್ಕದಲ್ಲಿ ಹೀಗೆ ಘೋಷಿಸಿದರು: ಸಮೀಪದಲ್ಲೇ ರೋಮ್ ಇರಾನಿನ ಮೇಲೆ ಜಯಗಳಿಸುವುದು ಎಂದು ಅಲ್ಲಾಹನು ತಿಳಿಸಿದ್ದಾನೆ. ಆಗ ಖುರೈಶಿಗಳು ಹೇಳಿದರು: ಈ ಭವಿಷ್ಯವಾಣಿ ಸತ್ಯವೆಂದಾದರೆ, ಪಣಕಟ್ಟು. ಆ ಕಾಲದಲ್ಲಿ ಇಸ್ಲಾಮಿನಲ್ಲಿ ಬಾಜಿ ಕಟ್ಟುವುದು ಅನುಮತನೀಯವಾಗಿತ್ತು. ಹಝ್ರತ್ ಅಬೂಬಕರ್(ರ) ಅದನ್ನು ಅಂಗೀಕರಿಸಿದರು. ಹೀಗೆ ಖುರೈಶಿನ ಸರದಾರರು ಮತ್ತು ಹಝ್ರತ್ ಅಬೂಬಕರ್(ರ)ರ ನಡುವೆ ಕೆಲವು ಒಂಟೆಗಳ ಬಾಜಿ ಕಟ್ಟಲಾಯಿತು. ಆರು ವರ್ಷಗಳ ಕಾಲಾವಧಿಯನ್ನು ನಿಶ್ಚಯಿಸಲಾಯಿತು. ಇದರ ಸುದ್ದಿ ಹಝ್ರತ್ ಪೈಗಂಬರ್(ಸ)ರಿಗೆ ತಲುಪಿದಾಗ ಅವರು ಹೇಳಿದರು: ಆರು ವರ್ಷಗಳ ಕಾಲಾವಧಿಯನ್ನು ನಿಶ್ಚಯಿಸುವುದು ತಪ್ಪು. ಅಲ್ಲಾಹನು ಬಿಜ್ಉನ್ ಸಿನೀನ್ ಎಂದು ಹೇಳಿರುವನು. ಅದು ಮೂರರಿಂದ ಒಂಬತ್ತು ವರ್ಷಗಳ ತನಕದ ಕಾಲಾವಧಿಗೆ ಹೇಳಲಾಗುತ್ತದೆ. ಇದು ಹಝ್ರತ್ ಪೈಗಂಬರ್(ಸ) ಮಕ್ಕಾದಲ್ಲೇ ಇದ್ದ ಕಾಲದ ಮಾತಾಗಿದೆ. ಆಗ ಹಿಜ್ರತ್ ನಡೆದಿರಲಿಲ್ಲ. ಅನಂತರ ನಿಶ್ಚಿತ ಕಾಲಾವಧಿಯ ಒಳಗೆ ಯುದ್ಧದ ದಿಕ್ಕು ಅಚಾನಕ್ಕಾಗಿ ಬದಲಾಯಿತು. ರೋಮ್ ಇರಾನನ್ನು ಸೋಲಿಸಿ ಸ್ವಲ್ಪ ಕಾಲದಲ್ಲೇ ತನ್ನ ಪ್ರದೇಶವನ್ನು ಮರಳಿ ವಶಪಡಿಸಿಕೊಂಡಿತು. ಈ ವಿಜಯ ಹಿಜ್ರತ್ ನಂತರ ನಡೆದಿತ್ತು.

(ಸೀರತ್ ಖಾತಮುನ್ನಬೀಈನ್, ಪುಟ–216–217)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಮಕ್ಕದಲ್ಲೇ ಇರುವಾಗ ಇರಾನಿಯರು ರೋಮನರನ್ನು ಸೋಲಿಸಿತು ಎಂಬ ಸುದ್ದಿ ಹರಡಿತು. ಇದರಿಂದ ಮಕ್ಕದವರು ಬಹಳ ಸಂತೋಷಗೊಂಡರು. ಏಕೆಂದರೆ ಅವರು ಮತ್ತು ಇರಾನಿಯರು ಬಹುದೇವಾರಾಧಕರಾಗಿದ್ದರು. ಇರಾನಿಯರು ರೋಮನರನ್ನು ಸೋಲಿಸಿದ್ದು ಒಂದು ಒಳ್ಳೆಯ ಶಕುನವೆಂದು ಅವರು ಭಾವಿಸುತ್ತಿದ್ದರು. ಮಕ್ಕದವರು ಕೂಡ ಮುಹಮ್ಮದ್(ಸ)ರ ಮೇಲೆ ಜಯ ಸಾಧಿಸುವರು ಎಂದು ಇದರಿಂದ ಅವರು ಅರ್ಥೈಸಿದರು. ಆದರೆ ಮುಹಮ್ಮದ್(ಸ)ರೊಡನೆ ಅಲ್ಲಾಹನು ಹೀಗೆ ಹೇಳಿದನು: **ಗುಲಿಬತುರ್ರೂಂ. ಫೀ ಅದನಲ್ ಅರ್ಝಿ ವಹುಂ ಮಿನ್‌ಬಅ್‌ದಿ ಗಲಬಹುಂ. ಸಯಗ್‌ಲಿಬೂನ್. ಫೀ ಬಿಧ್ಇ ಸಿನೀನ್**. ಎಂದರೆ ರೋಮ್ ಆಡಳಿತಕ್ಕೆ ಇರಾನಿನ ಆಡಳಿತದಲ್ಲಿ ಸೋಲು ಉಂಟಾಗಿದೆ. ಆದರೆ ಈ ಸೋಲನ್ನು ನೀವು ಖಚಿತವೆಂದು ಭಾವಿಸಬೇಡಿರಿ. ಸೋಲಿನ ನಂತರ 9 ವರ್ಷಗಳೊಳಗೆ ರೋಮ್ ಜಯಗಳಿಸುವುದು. ಈ ಭವಿಷ್ಯವಾಣಿ ಹರಡಿದಾಗ ಮಕ್ಕಾ ನಿವಾಸಿಗಳು ಅಪಹಾಸ್ಯಮಾಡಿದರು. ಹಝ್ರತ್ ಅಬೂಬಕರ್(ರ)ರೊಂದಿಗೆ ಕೆಲವು ಸತ್ಯನಿಷೇಧಿಗಳು ನೂರು ಒಂಟೆಗಳ ಬಾಜಿ ಕಟ್ಟಿದ್ದರು. ಈ ಭವಿಷ್ಯವಾಣಿ ಈಡೇರುವ ಸಾಧ್ಯತೆ ಬಹಳ ಕಡಿಮೆಯೆಂದು ಬಾಹ್ಯವಾಗಿ ತೋರುತ್ತಿತ್ತು. ಸಿರಿಯದಲ್ಲಿ ಉಂಟಾದ ಪರಾಜಯದ ನಂತರ ರೋಮಿನ ಸೈನ್ಯ ನಿರಂತರವಾಗಿ ಸೋಲನ್ನು ಅನುಭವಿಸಿ ಹಿಂದಕ್ಕೆ ಸರಿಯುತ್ತಾ ಹೋಯಿತು. ಆದರೆ ಅಲ್ಲಾಹನ ವಚನ ಈಡೇರಬೇಕಾಗಿತ್ತು ಮತ್ತು ಈಡೇರಿತು. ಅತ್ಯಂತ ನಿರಾಶೆಯ ಸ್ಥಿತಿಯ ನಂತರ ರೋಮಿನ ಅರಸ ತನ್ನ ಸೈನಿಕರ ಸಮೇತ ಕೊನೆಯ ದಾಳಿ ನಡೆಸಿ ಕೊಸ್ಟಂಟಿನೋಪೋಲ್‌ನಿಂದ ಹೊರಟಿತು. ಏಶಿಯದ ಗಡಿಗೆ ಇಳಿದು ಇರಾನಿಯರೊಂದಿಗೆ ಒಂದು ನಿರ್ಣಾಯಕ ಯುದ್ಧ ನಡೆಸಿತು. ರೋಮಿನ ಸೈನ್ಯ ಸಂಖ್ಯಾಬಲ ಮತ್ತು ಸಾಮಾನುಗಳ ಕೊರತೆಯಿದ್ದು ಕೂಡ ಪವಿತ್ರ ಖುರ್‌ಆನಿನ ಭವಿಷ್ಯವಾಣಿ ಪ್ರಕಾರ ಇರಾನಿಯರ ಮೇಲೆ ವಿಜಯ ಸಾಧಿಸಿತು. (ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–445)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಅಬೂಬಕರ್(ರ) ಅಬೂಜಹಲ್‌ನೊಂದಿಗೆ ಬಾಜಿ ಕಟ್ಟಿದಾಗ ಗುಲಿಬತ್ ರೂಮಿನ ಭವಿಷ್ಯವಾಣಿಯ ಆಧಾರದಲ್ಲಿ ಮೂರು ವರ್ಷಗಳ ಕಾಲಾವಧಿಯನ್ನು ಶರತನ್ನಾಗಿ ಇರಿಸಿದರು. ಹಝ್ರತ್ ಪೈಗಂಬರ್(ಸ) ಈ ಭವಿಷ್ಯವಾಣಿಯ ರೀತಿಯನ್ನು ನೋಡಿ ಬೇಗನೇ ದೂರದೃಷ್ಟಿಯಿಂದ ವರ್ತಿಸಿದರು. ಶರತನ್ನು ಸ್ವಲ್ಪ ಸರಿಪಡಿಸಲು ಹೇಳುತ್ತಾ ಹಝ್ರತ್ ಅಬೂಬಕರ್‌ರೊಡನೆ(ರ) ಹೇಳಿದರು: **ಬಿಝ್ಉನ್** ಎಂಬುದು ಚುಟುಕಾದ ಪದವಾಗಿದೆ. ಹೆಚ್ಚಾಗಿ ಒಂಬತ್ತು ವರ್ಷಗಳ ವರೆಗಿನ ಕಾಲಾವಧಿಗೆ ಸಂಬಂಧಿಸಿ ಹೇಳಲಾಗುತ್ತದೆ. (ಇಝಾಲ ಔಹಾಮ್, ರೂಹಾನಿ ಖಝಾಈನ್, ಸಂಘುಟ–3, ಪುಟ–310–311)

ನಂತರ ಪ್ರವಾದಿ ಮುಹಮ್ಮದ್(ಸ) ಗೋತ್ರಗಳ ಮುಂದೆ ತಮ್ಮನ್ನು ತಾವು ಪ್ರಸ್ತುತಪಡಿಸಿದರು, ಅಂದರೆ, ತಮ್ಮ ದಾವೆಯನ್ನು ಮಂಡಿಸಿದರು ಮತ್ತು ಹಝ್ರತ್ ಅಬು ಬಕರ್(ರ) ಅವರೊಂದಿಗೆ ಇದ್ದರು.

ಸರ್ವಶಕ್ತನಾದ ಅಲ್ಲಾಹನು ತನ್ನ ಧರ್ಮವನ್ನು ಮೇಲುಗೈ ಮಾಡಲು ಮತ್ತು ತನ್ನ ಪ್ರವಾದಿಯನ್ನು ಗೌರವಿಸಲು ಮತ್ತು ತನ್ನ ವಾಗ್ದಾನವನ್ನು ಪೂರೈಸಲು ಉದ್ದೇಶಿಸಿದಾಗ, ಪ್ರವಾದಿ ಮುಹಮ್ಮದ್(ಸ) ರವರು ಹಜ್ಜ್ ದಿನಗಳಲ್ಲಿ ಹೊರಟು ಅನ್ಸಾರ್‌ನ ಗೋತ್ರಗಳಾದ ಔಸ್ ಮತ್ತು ಖಜ್‌ರಜ್ ರವರನ್ನು ಭೇಟಿಯಾದರು. ಪ್ರತಿ ವರ್ಷ ಹಜ್ ದಿನಗಳಲ್ಲಿ ಮಾಡುವಂತೆ ಹಜ್ ದಿನಗಳಲ್ಲಿ ತಮ್ಮನ್ನು ಪರಿಚಯಿಸಿಕೊಂಡರು. ಇದನ್ನು ಕುರಿತು ಒಂದು ವರದಿಯಲ್ಲಿ ಹೀಗೆ ಉಲ್ಲೇಖಿಸಲಾಗಿದೆ. ಹಝ್ರತ್ ಅಲಿ ಇಬ್ನ್ ಅಬು ತಾಲಿಬ್(ರ) ವಿವರಿಸುತ್ತಾರೆ, ಅಲ್ಲಾಹನು ತನ್ನ ಪ್ರವಾದಿ(ಸ) ಅವರಿಗೆ ತಮ್ಮನ್ನು ಅರಬ್ ಜನಾಂಗದವರ ಮುಂದೆ ಪರಿಚಯಿಸಿಕೊಳ್ಳುವಂತೆ ಆಜ್ಞಾಪಿಸಿದಾಗ, ನಾನು ಮತ್ತು ಹಝ್ರತ್ ಅಬು ಬಕರ್(ರ) ಪ್ರವಾದಿ(ಸ.ಅ) ಅವರೊಂದಿಗೆ **ಮಿನಾಗೆ** ಹೋದೆವು. ನಾವು ಅರಬ್ಬರ ಒಂದು ಸಭೆಗೆ ತಲುಪಿದವು. ಹಝ್ರತ್ ಅಬೂಬಕರ್(ರ) ಅವರು ಮುಂದೆ ಹೋದರು ಮತ್ತು ಅವರು ವಂಶಾವಳಿಯಲ್ಲಿ ಪರಿಣತರಾಗಿದ್ದರು. ಅವರು ಕೇಳಿದರು, “ನೀವು ಯಾವ ಜನಾಂಗದವರಾಗಿದ್ದೀರಿ?” ಅವರು ರಾಬಿಯಾ ಬುಡಕಟ್ಟಿನಿಂದ ಎಂದು ಹೇಳಿದರು. ಹಝ್ರತ್ ಅಬು ಬಕರ್(ರ) ರಬಿಯಾದ ಯಾವ ಶಾಖೆಯಿಂದ ಎಂದು ಕೇಳಿದರು? ಅವರು ಝುಹಲ್‌ನಿಂದ ಎಂದು ಹೇಳಿದರು. ಆಗ ಹಝ್ರತ್ ಅಲಿ(ರ) ಹೇಳುತ್ತಾರೆ ನಾವು ಔಸ್ ಮತ್ತು ಖಜರಜ್ ಅವರ ಸಭೆಗೆ ಹೋಗಿದ್ದೆವು ಇವರನ್ನೆ ಪ್ರವಾದಿ ಮುಹಮ್ಮದ್(ಸ)ರವರು ಅನ್ಸಾರ್ ಎಂದು ಹೆಸರಿಸಿದ್ದು ಏಕೆಂದರೆ ಅವರು ನಿಮಗೆ ಆಶ್ರಯ ಮತ್ತು ಸಹಾಯವನ್ನು ನೀಡಲು ಒಪ್ಪಿಕೊಂಡಿದ್ದರು. ಹಝ್ರತ್ ಅಲಿ(ರ) ಹೇಳುತ್ತಾರೆ ಅವರು ಪವಿತ್ರ ಪ್ರವಾದಿ(ಸ) ಅವರ ಬೈಅತ್ (ನಿಷ್ಠೆಯ ಪ್ರಮಾಣ) ಮಾಡುವವರೆಗೂ ನಾವು ಎದ್ದೇಳಲಿಲ್ಲ. (ಶರ್ಹ್ ಅಲ್–ಜರ್ಕಾನಿ, ಸಂಪುಟ–2, ಪುಟಗಳು–72–74, ಮುಸ್ತಫಾ ನಫ್ಸಾ ಅಲಿ ಅಲ್–ಕಬ್ಬೈಲ್ ಉಲ್ಲೇಖ; ದಾರ್ ಅಲ್–ಕಿತಾಬ್ ಅಲ್–ಅಲಮಿಯಾ ಬೈರುತ್ 1996)

ಇನ್ನೊಂದು ವರದಿಯಲ್ಲಿ. ಹಝ್ರತ್ ಅಲಿ(ರ) ಹೇಳಿದರು: ಸರ್ವಶಕ್ತನಾದ ಅಲ್ಲಾಹನು ತನ್ನ ಪ್ರವಾದಿ(ಸ)ರವರು ಅರಬ್ ಗೋತ್ರಗಳ ಮುಂದೆ ತಮ್ಮನ್ನು ತಾವು ಪರಿವಯಿಸಿಕೊಳ್ಳುವಂತೆ ಆಜ್ಞಾಪಿಸಿದಾಗ, ಅವರು(ಸ) ಈ ಉದ್ದೇಶಕ್ಕಾಗಿ ಹೊರಟರು. ಹಝ್ರತ್ ಅಬೂಬಕರ್(ರ) ಮತ್ತು ನಾನು ಕೂಡ ಅವರೊಂದಿಗೆ ಇದ್ದೆವು. ನಾವು ಶಾಂತ ಮತ್ತು ಘನತೆಯ ಒಂದು ಸಭೆಗೆ ತಲುಪಿದೆವು. ಅವರು ಬಹಳ ಶಕ್ತಿಯುತ ಹಾಗೂ ಬುದ್ಧಿವಂತರಾಗಿದ್ದರು. ಹಝ್ರತ್ ಅಬೂಬಕರ್(ರ) ಅವರನ್ನು ಕೇಳಿದರು, “ನೀವು ಯಾವ ಗೋತ್ರಕ್ಕೆ ಸೇರಿದವರು?” ಅವರು ಹೇಳಿದರು, “ನಾವು ಬನು ಶೈಬಾನ್ ಬಿನ್ ಸಲಬಾದಿಂದ ಬಂದವರು.” ಹಝ್ರತ್ ಅಬೂಬಕರ್(ರ) ಪ್ರವಾದಿ(ಸ) ಅವರ ಕಡೆಗೆ ತಿರುಗಿ ಹೇಳಿದರು: ನನ್ನ ತಂದೆ ತಾಯಿಗಳು ನಿಮಗಾಗಿ ತ್ಯಾಗಮಾಡಲಿ, ಅವರ ಗೋತ್ರದಲ್ಲಿ ಅವರಿಗಿಂತ ಗೌರವಾನ್ವಿತ ಯಾರೂ ಇಲ್ಲ. ಅವರಲಲ್ಲಿ ಮಫ್ರುಕ್ ಇಬ್ನ್ ಅಮ್ರ್, ಮುಸನ್ನಾ ಇಬ್ನ್ ಹರಿಸಾ, ಹಾನಿ ಇಬ್ನ್ ಕಬೀಸಾ ಮತ್ತು ನುಮಾನ್ ಇಬ್ನ್ ಶರೀಕ್ ಇದ್ದರು. ರಸೂಲುಲ್ಲಾಹ್ (ಸ)ರವರು ಅವರ ಮುಂದೆ ಈ ಆಯತ್‌ಗಳನ್ನು ಓದಿ ಹೇಳಿದರು: **ಖುಲ್ ತಆಲೌ ಅತ್‌ಲು ಮಾ ಹರ್‌ರಮ ರಬ್ಬುಕುಮ್ ಅಲೈಕುಮ್ ಅಲ್ಲಾ ತುಶ್ರಿಕೂ ಬಿಹೀ ಶೈಅಂ ವ್ವಬಿಲ್ ವಾಲಿದೈನ ಇಹ್ಸಾನ, ವಲಾ ತಖ್ತುಲೂ ಔಲಾದಕುಮ್ ಮಿನ್ ಇಮ್ಲಾಖಿ, ನಹ್ನು ನರ್ಝುಖು ವ ಇಯ್ಯಾಹುಮ್, ವಲಾ ತಖ್ರಬುಲ್ ಫವಾಹಿಶ ಮಾ ಝಹರ ಮಿನ್‌ಹಾ ವ ಮಾ ಬತನ, ವಲಾ ತಖ್‌ತುಲುನ್ನಫ್ಸ ಲ್ಲತೀ ಹರ್‌ರಮಲ್ಲಾಹು ಇಲ್ಲಾ ಬಿಲ್‌ಹಖ್ಖಿ, ಝಾಲಿಕುಮ್ ವಸ್ಸಾಕುಮ್ ಬಿಹೀ ಲಅಲ್ಲಕುಮ್ ತಅ್‌ಖಿಲೂನ್** (ಅಲ್‌ಅನ್‌ಆಂ–152) ಹೇಳು: ‘ಬನ್ನಿರಿ, ನಿಮ್ಮ ಪ್ರಭು ನಿಮಗೆ ಅಲಂಘ್ಯಗೊಳಿಸಿದುದನ್ನು ನಾನು ನಿಮಗೆ ಹೇಳಿಕೊಡುವೆನು. (ಅವನು ಹೀಗೆ ಆದೇಶಿಸುತ್ತಾನೆ:) ಅವನೊಂದಿಗೆ ಏನನ್ನೂ ನೀವು ಸಹಭಾಗಿಯಾಗಿ ಕಲ್ಪಸಬಾರದು. ಮಾತಾಪಿತರಿಗೆ ನೀವು ಒಳಿತನ್ನು ಮಾಡಿರಿ. ಬಡತನಕ್ಕೆ ಹೆದರಿಕೊಂಡು ನೀವು ನಿಮ್ಮ ಸಂತಾನಗಳನ್ನು ಕೊಲ್ಲಬಾರದು – ನಿಮಗೂ ಅವರಿಗೂ ಆಹಾರ ಒದಗಿಸುವವರು ನಾವಾಗಿದ್ದೇವೆ. ಬಹಿರಂಗವಾಗಿರುವ ಅಥವಾ ಗುಪ್ತವಾಗಿರುವ ಅಶ್ಲೀಲ ಕೃತ್ಯಗಳನ್ನು ನೀವು ಸಮೀಪಿಸಬಾರದು. ವಧಿಸಲು ಅಲ್ಲಾಹನು ನಿಷಿದ್ಧಗೊಳಿಸಿದ ಜೀವವನ್ನು ನಿಯಮಬದ್ಧವಾಗಿ ಹೊರತು ನೀವು ವಧಿಸಬಾರದು. ಹೀಗೆ ನೀವು ಮನವರಿಕೆ ಮಾಡಲಿಕ್ಕಾಗಿ ಅಲ್ಲಾಹನು ಈ ಬಗ್ಗೆ ನಿಮಗೆ ತಾಕೀತು ನೀಡಿ ಆದೇಶಿಸುತ್ತಾನೆ.

ಈ ಬಗ್ಗೆ ಮಫ್ರುಕ್ ಅವರು ಈ ಮಾತು ನಾಡಿನ ಜನತೆಯ ಮಾತುಗಳಲ್ಲ. ಒಂದುವೇಳೆ ಇದು ಅವರ ಮಾತಾಗಿದ್ದರೆ ನಮಗೆ ಗೊತ್ತಾಗುತ್ತಿತ್ತು. ಆಗ ರಸೂಲುಲ್ಲಾಹ್(ಸ)ರವರು ಈ ಆಯತ್ ಪಠಿಸಿದರು: **ಇನ್ನಲ್ಲಾಹ ಯಅ್‌ಮುರು ಬಿಲ್ ಅದ್ಲಿ ವಲ್ ಇಹ್ಸಾನಿ ವ ಈತಾಇಝಿಲ್ ಖುರ್‌ಬಾ ವ ಯನ್‌ಹಾ ಅನಿಲ್ ಫಾಹ್‌ಶಾಇ ವಲ್ ಮುನ್‌ಕರಿ ವಲ್‌ಬಗ್‌ಯಿ, ಯಇಝುಕುಮ್ ಲಅಲ್ಲಕುಮ್ ತಝಕ್ಕರೂನ್** (ಅನ್ನಹಲ್:91) ನ್ಯಾಯ ನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ನಿಕಟ ಬಂಧುಗಳಿಗೆ ಎಂಬಂತೆ (ಪರರಿಗೂ) ಸಹಾಯ ಮಾಡಲಿಕ್ಕೂ ಅಲ್ಲಾಹನು ಆಜ್ಞಾಪಿಸುತ್ತಾನೆ. ಅಸಭ್ಯತೆಯನ್ನೂ ದುಷ್ಕೃತ್ಯವನ್ನೂ ನಿಯಮೋಲ್ಲಂಘನೆಯನ್ನೂ ಅವನು ನಿಷಿದ್ಧಗೊಳಿಸಿದ್ದಾನೆ. ಈ ಬಗ್ಗೆ ಲಕ್ಷ್ಯಗೊಡಲಿಕ್ಕೆ ಅವನು ನಿಮಗೆ ಉಪದೇಶ ನೀಡುತ್ತಾನೆ.

ಈ ಮಾತುಗಳನ್ನು ಆಲಿಸಿದ ನಂತರ ಮಫ್ರೂಕ್ ಹೇಳಿದರು. ಓ ಖುರೈಶ್ ಸಹೋದರರೇ! ಅಲ್ಲಾಹನಆಣೆ! ನೀವು(ಸ)ರವರು ಉನ್ನತ ನೈತಿಕತೆ ಮತ್ತು ಒಳ್ಳೆಯ ಕಾರ್ಯಗಳಿಗೆ ಕರೆ ನೀಡಿದ್ದಾರೆ. ನಿಸ್ಸಂಶಯವಾಗಿ ನಿಮ್ಮನ್ನು ನಿರಾಕರಿಸಿದ ಮತ್ತು ನಿಮ್ಮ(ಸ) ವಿರುದ್ಧ ಪರಸ್ಪರ ಸಹಾಯ ಮಾಡಿದ ಜನರು ಸುಳ್ಳುಗಾರರಾಗಿದ್ದಾರೆ. ಮುಸನ್ನ ಹೇಳುತ್ತಾರೆ: ನಾವು ನಿಮ್ಮ ಮಾತುಗಳನ್ನು ಕೇಳಿದೆವು ಯಾ ಖುರೈಶ್ ಸಹೋದರರೇ! ನೀವು(ಸ) ತುಂಬಾ ಚೆನ್ನಾಗಿ ಮಾತಾಡಿದ್ದೀರ, ನೀವು ಹೇಳಿದ ಮಾತು ನನಗೆ ಆಶ್ಚರ್ಯ ತಂದಿದೆ. ಆದರೆ ನಾವು ಖಸ್ರಾ ಜೊತೆ ಒಪ್ಪಂದ ಮಾಡಿಕೊಂಡಿದ್ದೇವೆ, ಅದೇಮೆಂದರೆ ನಾವು ಯಾವ ಹೊಸ ಕಾರ್ಯವು

ಮಡುವುದಿಲ್ಲ ಮತ್ತು ಹೊಸದನ್ನು ಮಾಡುವವರಿಗೆ ನಾವು ಆಶ್ರಯ ನೀಡುವುದಿಲ್ಲ ಎಂದು. ಇದು ರಾಜರೂ ಇಷ್ಟಪಡದ ವಿಳಯಗಳಲ್ಲಿ ಒಂದಾಗಿರಬಹುದು. ಅರಬ್ ನೆರೆಹೊರೆಯವರ ವಿರುದ್ಧ ನಾವು ನಿಮಗೆ ಸಹಾಯ ಮತ್ತು ರಕ್ಷಣೆ ನೀಡಬೇಕೆಂದು ನೀವು ಬಯಸಿದರೆ, ನಾವು ಹಾಗೆ ಮಾಡುತ್ತೇವೆ. ಅದಕ್ಕೆ ಪ್ರವಾದಿ(ಸ) ರವರು ಹೇಳಿದರು: ನಿಮ್ಮ ಉತ್ತರದಿಂದ ಯಾವುದೇ ಹಾನಿ ಇಲ್ಲ ಏಕೆಂದರೆ ನೀವು ಸತ್ಯವನ್ನು ಸ್ಪಷ್ಟವಾಗಿ ಹೇಳಿದ್ದೀರಿ.

ಅಲ್ಲಾಹನು ಯಾರನ್ನು ಎಲ್ಲಾ ಕಡೆಯಿಂದ ಸುತ್ತುವರೆದಿದ್ದಾನೊ ಅವರು ಮಾತ್ರ ಅಲ್ಲಾಹನ ಧರ್ಮದ ಮೇಲೆ ನಿಲ್ಲುತ್ತಾರೆ. ತದನಂತರ ಪ್ರವಾದಿ(ಸ) ಹಝ್ರತ್ ಅಬೂಬಕರ್ ರವರ ಕೈ ಹಿಡಿದು ಎದ್ದು ಹೊರಟರು.

(ಮಾರಿಫತಿಸ್ಸಹಾಬ ಲಿಇಬ್ನೆ ನಯೀಮ್, ಸಂಪುಟ-4, ಪುಟ-309-310, ವರದಿ ಸಂಖ್ಯೆ-6382, ದಾರ್ ಅಲ್-ಕಿತಾಬ್ ಅಲ್-ಅಲಮಿಯಾ ಬೈರುತ್ 2002)

ಅಲ್ಲಾಹನು ಹಝ್ರತ್ ಪೈಗಂಬರ್(ಸ)ರೊಡನೆ ಅರೇಬಿಯದ ಗೋತ್ರಗಳಿಗೆ ತಬ್ಲೀಗ್ ಮಾಡಲು ಆದೇಶ ನೀಡಿದಾಗ, ಹಝ್ರತ್ ಪೈಗಂಬರ್(ಸ) ಹಜ್ಜ್ ಕರ್ಮಾನುಷ್ಠಾನದ ಸಂದರ್ಭದಲ್ಲಿ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಅಲಿ(ರ)ರವರ ಜೊತೆಗೆ ಔಸ್, ಖಝ್ರಜ್ ಮತ್ತು ಕೆಲವು ಇತರ ಗೋತ್ರಗಳ ಸಭೆಗಳಿಗೆ ಹೋದರು ಮತ್ತು ಅವರಿಗೆ ತಬ್ಲೀಗ್ ಮಾಡಿದರು. ಅದೇ ರೀತಿಯಲ್ಲಿ ಒಂದು ಹಜ್ಜಿನ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಬಕರ್ ಬಿನ್ ವಾಯಿಲ್ ಗೋತ್ರದ ಕಡೆಗೆ ಹಝ್ರತ್ ಅಬೂಬಕರ್(ರ)ರನ್ನು ತಬ್ಲೀಗಿಗಾಗಿ ಕಳುಹಿಸಿದರು. ಬನೀ ಶೈಬಾನ್ ಬಿನ್ ಸಅಲಬ ಎಂಬೊಂದು ಗೋತ್ರವು ಹಝ್ರತ್ ಪೈಗಂಬರ್(ಸ)ರ ತಬ್ಲೀಗ್‌ನಿಂದ ಬಹಳ ಪ್ರಭಾವಿತಗೊಂಡಿತು. ಆದರೆ ಅವರ ಸರದಾರರಲ್ಲಿ ಒಬ್ಬರಾದ ಮುಸನ್ನ ಬಿನ್ ಹಾರಿಸ ಎಂಬವನು ಇರಾನಿನ ರಾಜನೊಂದಿಗೆ ಅವರು ಮಾಡಿರುವ ಒಪ್ಪಂದದ ಬಗ್ಗೆ ಪ್ರಸ್ತಾಪಿಸಿದನು. ಅದರ ಪ್ರಕಾರ ಅವರು ಯಾವುದೇ ಹೊಸ ಕೆಲಸ ಮಾಡಬಾರದು ಮತ್ತು ಹೊಸ ಕೆಲಸ ಮಾಡುವವರಿಗೆ ಅಭಯ ಕೂಡ ನೀಡಬಾರದು. ಹಝ್ರತ್ ಪೈಗಂಬರ್(ಸ) ಅವರೊಡನೆ ಹೇಳಿದರು: ಕೆಲವು ಕಾಲದೊಳಗೆ ಅಲ್ಲಾಹನು ನಿಮ್ಮನ್ನು ಇರಾನಿನ ಭೂಮಿಯ ವಾರಸುದಾರರನ್ನಾಗಿ ಮಾಡಿದರೆ, ನೀವು ಅಲ್ಲಾಹನ ಸ್ತುತಿಕೀರ್ತನೆ ಮತ್ತು ಪಾವಿತ್ರ್ಯವನ್ನು ಕೊಂಡಾಡುವಿರಾ? ಇದನ್ನು ಕೇಳಿ ಅವರು ತಯಾರಾದರು. ಅಲ್ಲಾಹನ ವಿಧಿಯನ್ನು ನೋಡಿರಿ. ಇರಾನಿನ ಅರಸನಿಗೆ ಹೆದರಿ ಇಸ್ಲಾಂ ಸ್ವೀಕಾರ ಮಾಡುವುದರಿಂದ ಹಿಂಜರಿಯುತ್ತಿದ್ದ ಅದೇ ಮುಸನ್ನ ಹಝ್ರತ್ ಅಬೂಬಕರ್(ರ)ರ ಖಿಲಾಫತ್ ಕಾಲದಲ್ಲಿ ಇರಾನಿನ ಅರಸನ ವಿರುದ್ಧ ಯುದ್ಧ ಮಾಡುವಾಗ ಇಸ್ಲಾಮಿನ ಸೈನ್ಯದ ಸೇನಾಧಿಪತಿಯಾದರು.

ಹಝ್ರತ್ ಅಬೂಬಕರ್(ರ)ರ ಪ್ರಸ್ತಾಪ ಮುಂದುವರೆಯುವುದು ಇನ್‌ಶಾ ಅಲ್ಲಾಹ್.

ಇಂದು ನಾನು ಅಫ್ಘಾನಿಸ್ತಾನದ ಅಹ್ಮದಿಯರಿಗಾಗಿ ದುಆ ಮಾಡಬೇಕೆಂದು ಹೇಳಲು ಬಯಸುತ್ತೇನೆ. ಬಹಳ ಕಷ್ಟತೆಗಳಿಂದ ಸಾಗುತ್ತಿದ್ದಾರೆ. ಕೆಲವರನ್ನು ಬಂಧಿಸಲಾಗಿದೆ. ಮಹಿಳೆಯರು ಮತ್ತು ಮಕ್ಕಳು ತಮ್ಮ ಮನೆಗಳಲ್ಲಿ ಬಹಳ ಚಿಂತಿತರಾಗಿರುವರು. ಬಂಧಿಯಾಗಿರದ ಪುರುಷರು ಕೂಡ ಬಂಧಿಸಲ್ಪಡುವರೋ ಎಂಬ ಭಯದಿಂದ ಮನೆಯಿಂದ ಹೊರಗೆ ಇರುವರು. ಅಲ್ಲಾಹನು ಅವರಿಗೆ ಸೌಲಭ್ಯಗಳನ್ನು ಉಂಟುಮಾಡಲಿ ಮತ್ತು ಅವರನ್ನು ಕಷ್ಟತೆಗಳಿಂದ ರಕ್ಷಿಸಲಿ.

ಪಾಕಿಸ್ತಾನದ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅಲ್ಲೂ ಸಾಮಾನ್ಯವಾಗಿ ಸ್ಥಿತಿಗತಿಗಳು ಕೆಟ್ಟುಹೋಗಿವೆ. ಅಹ್ಮದಿಯರಿಗೆ ತೊಂದರೆ ಕೊಡುವವರಿಂದ ಎಲ್ಲಾದರೂ ಏನಾದರೂ ಘಟನೆ ನಡೆಯುತ್ತಿದೆ. ಅದೇ ರೀತಿಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರನ್ನು ಅರಿಯುವ ಸೌಭಾಗ್ಯ ಲೋಕಕ್ಕೆ ಲಭಿಸಲಿ, ಎಲ್ಲ ಕುಕೃತ್ಯಗಳನ್ನು ಕೊನೆಗೊಳಿಸಲಿ ಮತ್ತು ಲೋಕವು ತನ್ನ ಸೃಷ್ಟಿಕರ್ತನ ನೈಜತೆಯನ್ನು ಅರಿಯಲಿ ಎಂದೂ ದುಆ ಮಾಡಿರಿ.

ಇದರ ನಂತರ ನಾನು ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸುವೆನು. ಅವರ ಜನಾಝ ಗಾಇಬ್ ಸಹ ನಂತರ ನಿರ್ವಹಿಸುವೆನು.

ಮೊದಲ ಪ್ರಸ್ತಾಪ ಘಾನದ ಮಾಜಿ ಉಮೂರೆ ಆಮ್ಮ ಸೆಕ್ರಟರಿ ಮತ್ತು ಜಲ್ಸ ಸಾಲಾನ ಆಫೀಸರ್ ಆಗಿದ್ದ ಸನ್ಮಾನ್ಯ ಅಲ್‌ಹಾಜ್ ಅಬ್ದುರ್ರಹ್ಮಾನ್ ಐನ್ಯೆನ್ ಸಾಹಿಬ್‌ರದ್ದಾಗಿದೆ. 81ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ತಂದೆತಾಯಂದಿರು ಸಹ ಅಹ್ಮದಿಯ್ಯತ್ ಸ್ವೀಕಾರ ಮಾಡಿದ್ದರು. ಈಜಿಪ್ಟಿನಿಂದ ಉನ್ನತ ಶಿಕ್ಷಣ ಪಡೆದರು. ಶಿಕ್ಷಣದ ನಂತರ ತಮ್ಮ ಕೆಲಸವನ್ನು ಶುರುಮಾಡಿದರು. ಘಾನದ ಹಲವಾರು ಕಂಪೆನಿಗಳಲ್ಲಿ ಮೇನಜರ್ ಆಗಿ ಕೆಲಸ ಮಾಡಿದರು. ಅನಂತರ ನೈಜೀರಿಯದಲ್ಲಿ ಕೂಡ ಸ್ವಲ್ಪ ಕಾಲ ಕೆಲಸ ಮಾಡಿದರು. ಅನಂತರ ತನ್ನ ಸ್ವಂತ ಕಂಪೆನಿಯನ್ನು ತೆರೆದರು. ಅಲ್ಲಿ ಅವರು ಮ್ಯಾನೆಜಿಂಗ್ ಡೈರಕ್ಟರ್ ಆಗಿದ್ದರು. ಬಹಳ ಸಾತ್ವಿಕ ನಿಷ್ಠಾವಂತ ವ್ಯಕ್ತಿಯಾಗಿದ್ದರು. ಜಮಾಅತಿಗೆ ಮಾದರಿದಾಯಕ ಸೇವೆ ಮಾಡಲು ಸೌಭಾಗ್ಯ ಪಡೆದರು. ಜೀವಿತಪೂರ್ತಿ ಜಮಾಅತಿನ ಕೆಲಸ ಮತ್ತು ಲಾಭಕ್ಕೆ ತನ್ನ ವೈಯಕ್ತಿಕ ಲಾಭಕ್ಕಿಂತ ಪ್ರಾಮುಖ್ಯತೆ ಕೊಟ್ಟರು. ಅನೇಕ ಹುದ್ದೆಗಳಲ್ಲಿ ಇದ್ದುಕೊಂಡು ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ಸದಾ ಜಮಾಅತಿನ ಅಮೀರಿನ ಅನುಸರಣೆ ಮತ್ತು ಪ್ರತಿಯೊಂದು ಕರೆಗೆ ತಯಾರಾಗುವುದು ತನ್ನ ಸೌಭಾಗ್ಯವೆಂದು ಗಣಿಸುತ್ತಿದ್ದರು. ಹೆಚ್ಚಾಗಿ ಬೆಳಿಗ್ಗೆ ಆರಂಭದಲ್ಲೇ ಮಿಶನ್ ಹೌಸಿಗೆ ಬಂದು ಅಮೀರ್ ಸಾಹಿಬ್‌ರನ್ನು ಭೇಟಿಯಾಗುತ್ತಿದ್ದರು. ಜಮಾಅತಿನ ಯಾವುದಾದರೂ ಕೆಲಸವಿದ್ದರೆ ಮುಗಿಸುತ್ತಿದ್ದರು. ಅನಂತರ ತನ್ನ ಕೆಲಸಕ್ಕಾಗಿ ಹೋಗುತ್ತಿದ್ದರು. ಇವರು ದೀರ್ಘಕಾಲ ಗ್ರೇಟರಾಕರಾ ರೀಜಿನ್‌ನ ಸದರ್ ಆಗಿದ್ದರು. ಅನಂತರ 1979 ರಿಂದ 1998 ತನಕ ಮಜ್ಲಿಸ್ ಅನ್ಸಾರುಲ್ಲಾಹ್‌ದ ಸದರ್ ಆಗಿದ್ದರು. ಅನಂತರ ಸೆಕ್ರಟರಿ ಉಮೂರೆ ಆಮ್ಮ ಆಗಿ ಬಹಳ ದೀರ್ಘಕಾಲ ಕೆಲಸ ಮಾಡಿದರು. ಅನಂತರ ಜಲ್ಸ ಸಾಲಾನ ಆಫೀಸರ್ ಆಗಿ ಕೆಲಸ ಮಾಡಲು ಸೌಭಾಗ್ಯ ಪಡೆದರು. ನಿಧನದ ಸಮಯದಲ್ಲಿ ನ್ಯಾಶನಲ್ ಟ್ರಸ್ಟಿಯಾಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆಯುತ್ತಿದ್ದರು.

ಪ್ರತಿಯೊಬ್ಬರ ಸಹಾಯಕ್ಕಾಗಿ ಸದಾ ತಯಾರಿರುತ್ತಿದ್ದರು. ಬಹಳ ಉದಾರಿಯಾಗಿದ್ದರು. ಸಹಾನುಭೂತಿಯನ್ನು ಕೇವಲ ತನ್ನ ಕುಟುಂಬದೊಂದಿಗೆ ಪರಿಮಿತಗೊಳಿಸಿರಲಿಲ್ಲ. ಅವರ ಉದಾರತೆ ಸ್ನೇಹಿತರು, ಸಂಬಂಧಿಕರು ಅಲ್ಲದೇ ಜಮಾಅತಿನ ಇತರ ಸದಸ್ಯರು ಮತ್ತು ಧರ್ಮದ ವ್ಯತ್ಯಾಸವಿಲ್ಲದೆ ಪ್ರದೇಶದ ವ್ಯಕ್ತಿಗಳ ತನಕ ವ್ಯಾಪಿಸಿತ್ತು. ಜಮಾಅತಿನ ನಿಷ್ಠಾವಂತ ಮತ್ತು ಖಿಲಾಫತಿನ ತ್ಯಾಗಶೀಲ ಸೈನಿಕರಾಗಿದ್ದರು. ಸದಾ ಜಮಾಅತಿನ ಆವಶ್ಯಕತೆಗಳನ್ನು ಇತರ ಎಲ್ಲದರ ಮೇಲೆ ಆದ್ಯತೆ ನೀಡಿದ್ದರು. ಎಂದಿಗೂ ಯಾರ ವಿರೋಧದ ಪರಿವೆ ಮಾಡಿರಲಿಲ್ಲ. ಬಹಳ ನಿಯತವಾಗಿ ತಹಜ್ಜುದ್ ನಿರ್ವಹಿಸುತ್ತಿದ್ದರು. ಯಾತ್ರೆಯಲ್ಲೂ ಅಲ್ಲದ ಸಮಯದಲ್ಲೂ ಅದನ್ನು ಪಾಲಿಸುತ್ತಿದ್ದರು. ವಸಿಯ್ಯತ್ ಮಾಡಿದ್ದರು ಮತ್ತು ಚಂದಾ ಪಾವತಿಯಲ್ಲಿ ಬಹಳ ಕರಾರುವಕ್ಕಾಗಿದ್ದರು. ದಿವಂಗತರು ಪತ್ನಿಯನ್ನಲ್ಲದೆ ಐವರು ಪುತ್ರರನ್ನು ಮತ್ತು ಐವರು ಪುತ್ರಿಯರನ್ನು ಅಗಲಿರುವರು.

ಘಾನದ ಮುರಬ್ಬಿಯಾದ ಹಾಫಿಝ್ ಮುಬಶ್ಶಿರ್ ಅಹ್ಮದ್ ಬರೆಯುತ್ತಾರೆ: ಅವರಲ್ಲಿ ಬಹಳ ಸೂಕ್ಷ್ಮತೆಯಿತ್ತು. ಬಹಳ ಹೃಸ್ವವಾಗಿ ಮತ್ತು ವಿವೇಕಯುತವಾಗಿ ಮಾತನಾಡುತ್ತಿದ್ದರು. ಬೇಗನೇ ವಿಷಯದ ಆಳದ ವರೆಗೆ ತಲುಪುತ್ತಿದ್ದರು. ಬೋರ್ಡಿನ ಮೀಟಿಂಗಿನ ನಡುವೆ ಪ್ರತಿಯೊಬ್ಬರು ತಮ್ಮ ತಮ್ಮ ಅಭಿಪ್ರಾಯವನ್ನು ಹೇಳುತ್ತಿದ್ದರು. ಒಂದು ವಿಷಯದ ಬಗ್ಗೆ ದೀರ್ಘ ಸಮಯ ಮಾತುಕತೆ ನಡೆಸಲಾಗುತ್ತಿತ್ತು. ಅವರು ಇವನ್ನೆಲ್ಲ ಮೌನವಾಗಿ ಕೇಳುತ್ತಿದ್ದರು. ಅವರ ಸರದಿ ಬಂದಾಗ ಅವರು ಹೇಳಿದರು: ಈ ಕುರಿತು ಖಲೀಫತುಲ್ ಮಸೀಹ್‌ರಿಂದ ಒಂದು ತೀರ್ಪು ಬಂದಾಗಿದೆ. ಆದ್ದರಿಂದ ನಮಗೆ ಇದರ ಬಗ್ಗೆ ಚರ್ಚೆ ನಡೆಸುವ ಆವಶ್ಯಕತೆಯಿಲ್ಲ. ಖಲೀಫತುಲ್ ಮಸೀಹ್‌ರಿಂದ ತೀರ್ಪು ಬಂದ ನಂತರ ಅದರ ಬಗ್ಗೆ ಅಭಿಪ್ರಾಯ ನೀಡಬಾರದು. ಬದಲಾಗಿ ಅದನ್ನ ಹಾಗೆಯೇ ಅನುಸರಿಸಬೇಕು. ಈ ರೀತಿಯ ನಿಷ್ಠಾವಂತರನ್ನು ಅಲ್ಲಾಹನು ದೂರ ಪ್ರದೇಶಗಳಲ್ಲೂ ದಯಪಾಲಿಸಿರುವನು.

ಮುಂದಿನ ಜನಾಝ ಜೋರ್ಡನಿನ ಸನ್ಮಾನ್ಯ ಅಧ್‌ಯಾಬ್ ಅಲಿ ಮುಹಮ್ಮದ್ ಅಲ್‌ಜಬಾಲಿ ಸಾಹಿಬ್‌ರದ್ದಾಗಿದೆ. ಕೆಲವು ದಿನಗಳ ಹಿಂದೆ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಜೋರ್ಡನಿನ ಸದರ್ ಸಾಹಿಬ್‌ರು ಬರೆಯುತ್ತಾರೆ: ಅವರು 2010ರಲ್ಲಿ ಬೈಅತ್ ಮಾಡಿದ್ದರು. ತಮ್ಮ ಪ್ರದೇಶದ ಏಕ ಅಹ್ಮದಿಯಾಗಿದ್ದರು. ಅಲ್ಲಿಯ ಸಂಪ್ರದಾಯದ ಪ್ರಕಾರ ಪತಿಯ ಧರ್ಮದಲ್ಲೇ ಪತ್ನಿಯೂ ಇರಬೇಕು. ಆದ್ದರಿಂದ ಅವರ ಪತ್ನಿ ಸಹ ಅಹ್ಮದಿಯಾದರು. ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಖಿಲಾಫತಿನ ಮೇಲೆ ಅವರ ವಿಶ್ವಾಸವು ಪರ್ವತದಂತೆ ದೃಢವಾಗಿತ್ತು. ಅಹ್ಮದಿಯ್ಯತ್ ಸ್ವೀಕಾರದ ಕಾರಣದಿಂದ ಕುಟುಂಬ ಮತ್ತು ಇತರರ ವಿರೋಧವಿದ್ದೂ ಅವರು ಸ್ಥಿರಚಿತ್ತತೆಯ ಮಾದರಿಯನ್ನು ತೋರಿಸಿದರು. ಅಹ್ಮದಿಯ್ಯತ್ ಮತ್ತು ಖಿಲಾಫತಿಗಾಗಿ ಬಹಳ ಅಭಿಮಾನವನ್ನು ಹೊಂದಿದ್ದರು. ಬಹಳ ಶಕ್ತವಾಗಿ ಅದರ ಡಿಫೆನ್ಸ್ ಮಾಡುತ್ತಿದ್ದರು. ಅವರಿಗೆ ಕಲಿಯುವ ಮತ್ತು ತಬ್ಲೀಗ್ ಮಾಡುವ ಬಹಳ ಆಸಕ್ತಿಯಿತ್ತು. ಕೆಲವೊಮ್ಮೆ ತಡರಾತ್ರಿಯಲ್ಲೂ ಫೋನ್ ಮಾಡಿ ಪ್ರಶ್ನೆಗಳನ್ನು ಕೇಳುತ್ತಿದ್ದರು. ಈ ರೀತಿಯಾಗಿ ಅವರ ಮನೆಯಲ್ಲಿ ವಿರೋಧಿಗಳೊಂದಿಗೆ ಮತ್ತು ಸಂಬಂಧಿಕರೊಂದಿಗೆ ಅನೇಕ ತಬ್ಲೀಗಿ ಸಿಟ್ಟಿಂಗ್‌ಗಳು ನಡೆದಿದ್ದುವು. ದಿವಂಗತರು ಶುಗರ್ ಪೇಶೆನ್ಟ್ ಆಗಿದ್ದರು. ಅದರ ಕಾರಣದಿಂದ ಬಹಳ ತೊಂದರೆಯಲ್ಲಿದ್ದರು. ಅದೇ ಅವರ ಮರಣಕ್ಕೆ ಕಾರಣವಾಯಿತು. ನಿಮಗೆ ಈ ಸ್ಥಿತಿ ಅಹ್ಮದಿಯ್ಯತ್ ಕಾರಣದಿಂದ ಆಗಿದೆ ಎಂದು ಈ ರೋಗದ ಕಾರಣದಿಂದ ಅವರ ಕೆಲವು ಸಂಬಂಧಿಕರು ಹೇಳುತ್ತಿದ್ದರು. ನೀವು ಅಹ್ಮದಿಯ್ಯತ್ ಉಪೇಕ್ಷಿಸಿರಿ. ಹಾಗಾದರೆ ನಾವು ನಿಮ್ಮ ಪರವಾಗಿ ಖಿಯಾಮತ್ ದಿನದಂದು ಸಾಕ್ಷ್ಯವಹಿಸುವೆವು ಎಂದು ಹೇಳುತ್ತಿದ್ದರು. ಆಗ ಅವರು ಬಹಳ ಆವೇಶದಿಂದ ದುಆ ಮಾಡುತ್ತಾ ಹೀಗೆ ಹೇಳುತ್ತಿದ್ದರು: ಹೇ ಅಲ್ಲಾಹ್, ನನಗೆ ಅಹ್ಮದೀ ಮುಸ್ಲಿಂ ಆಗಿರುವ ಸ್ಥಿತಿಯಲ್ಲೇ ಮರಣವನ್ನು ನೀಡು.

ಮುಂದಿನ ಜನಾಝ ಕೆನಡದಲ್ಲಿ ನೆಲೆಸಿದ್ದ ನಿವೃತ್ತ ಮುರಬ್ಬಿ ಸನ್ಮಾನ್ಯ ದೀನ್ ಮುಹಮ್ಮದ್ ಸಾಹಿಬ್‌ರದ್ದಾಗಿದೆ. 92ನೇ ವಯಸ್ಸಿನಲ್ಲಿ ಕೆಲವು ದಿನಗಳ ಹಿಂದೆ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ತಂದೆಯ ಮೂಲಕ ಬಂದಿತ್ತು. ಅವರ ತಂದೆ 1938ರಲ್ಲಿ ಬೈಅತ್ ಮಾಡುವ ಸೌಭಾಗ್ಯವನ್ನು ಪಡೆದಿದ್ದರು. 1940ರಲ್ಲಿ ಅವರ ತಂದೆ ಅವರನ್ನು ಜಲ್ಸ ಸಾಲಾನ ಖಾದಿಯಾನಿಗೆ ಕೊಂಡುಹೋದರು. ಅಲ್ಲಿ ಅವರ ತಂದೆ ಖಾದಿಯಾನಿನ ಶೈಕ್ಷಣಿಕ ಮತ್ತು ಧಾರ್ಮಿಕ ವಾತಾವರಣದಿಂದ ಪ್ರಭಾವಿತರಾಗಿ ಅವರನ್ನು 11ನೇ ವಯಸ್ಸಿನಲ್ಲಿ ಹಝ್ರತ್ ಮೀರ್ ಮುಹಮ್ಮದ್ ಇಸ್‌ಹಾಖ್ ಸಾಹಿಬ್‌ರ ಮೇಲ್ನೋಟದಲ್ಲಿ ಖಾದಿಯಾನಿನಲ್ಲೇ ಬಿಟ್ಟು ಬಂದರು. ಅವರಿಗೂ ಸ್ವತಃ ಕಲಿಕೆ ಬರಹದ ಆಸಕ್ತಿಯಿತ್ತು. 1953ರಲ್ಲಿ ಅವರು ಜಾಮಿಆ ಅಹ್ಮದಿಯ್ಯದಲ್ಲಿ ಶಾಹಿದ್ ಡಿಗ್ರಿ ಪಡೆದರು. ಪಾಕಿಸ್ತಾನದ ಅನೇಕ ಪಟ್ಟಣಗಳಲ್ಲಿ ಮುರಬ್ಬಿಯಾಗಿ ಕೆಲಸ ಮಾಡಿದರು. ಮೂರ್‍ನಾಲ್ಕು ವರ್ಷಗಳು ಫಿಜಿ ದ್ವೀಪಿನಲ್ಲಿ ಮಿಶನರಿ ಇಂಚಾರ್ಜ್ ಆಗಿ ಕೆಲಸ ಮಾಡಲು ಸೌಭಾಗ್ಯ ಪಡೆದರು. ರಬ್ವದಲ್ಲಿ ದೀರ್ಘಕಾಲ ಪ್ರೆಸ್ ಸೆಕ್ರಟರಿಯಾಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ಅವರು ನಾಲ್ಕು ಪುಸ್ತಕಗಳನ್ನು ಬರೆದಿರುವರು. ಅದಲ್ಲದೇ ಅನೇಕ ಲೇಖನಗಳನ್ನು ಬರೆಯುವ

*(ಪುಟ ಸಂಖ್ಯೆ-11 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಎಲೈ ಮಕ್ಕಾ, ನೀನು ಅಲ್ಲಾಹನ ಭೂಮಿಯಲ್ಲಿ ನನಗೆ ಮತ್ತು ಅಲ್ಲಾಹನಿಗೆ ಅತ್ಯಂತ ಪ್ರಿಯವಾದ ಪ್ರದೇಶವಾಗಿದೆ. ನಿನ್ನ ನಿವಾಸಿಗಳು ನನ್ನನ್ನು ಒತ್ತಾಯಪೂರ್ವಕವಾಗಿ ಹೊರಗೆ ಹಾಕಿರದಿದ್ದರೆ, ನಾನು ಎಂದಿಗೂ ಇಲ್ಲಿಂದ ನಿರ್ಗಮಿಸುತ್ತಿರಲಿಲ್ಲ.**

## ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ

**ಹಝ್ರತ್ ಪೈಗಂಬರ್(ಸ) ಹೇಳಿದರು: ನನಗೆ ಹಿಜ್ರತ್ ಮಾಡುವ ಅನುಮತಿ ಅಲ್ಲಾಹನ ವತಿಯಿಂದ ಲಭಿಸಿದೆ.**
**ಹಝ್ರತ್ ಅಬೂಬಕರ್(ರ) ಹೇಳಿದರು: ಯಾ ರಸೂಲಲ್ಲಾಹ್, ನನ್ನನ್ನು ಕೂಡ ನಿಮ್ಮ ಜೊತೆಗೆ ಕೊಂಡುಹೋಗುವಿರಾ?**
**ಹೌದೆಂದು ಹಝ್ರತ್ ಪೈಗಂಬರ್(ಸ) ಹೇಳಿದರು.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **24-12-2021** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ
أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ
اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ.
اِيَّاكَ نَعْبُدُ وَاِيَّاكَ نَسْتَعِيْنُ. اِهْدِنَا الصِّرَاطَ الْمُسْتَقِيْمَ.
صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

ಹಝ್‌ರತ್ ಅಬೂಬಕ್ಕರ್ ಸಿದ್ದೀಖ್(ರ) ಅವರ ಪ್ರಸ್ತಾಪ ನಡೆಯುತ್ತಿತ್ತು. ಬೈಅತೆ ಅಖಬ ಸಾಸಿಯಾದ ಸಂದರ್ಭದಲ್ಲಿ ಹಝ್‌ರತ್ ಅಬು ಬಕರ್(ರ) ಮತ್ತು ಹಝ್‌ರತ್ ಅಲಿ(ರ) ಮತ್ತು ಪ್ರವಾದಿ(ಸ) ರವರ ಚಿಕ್ಕಪ್ಪ ಹಝ್‌ರತ್ ಅಬ್ಬಾಸ್(ರ) ಅವರೊಂದಿಗೆ ಇದ್ದರು ಎಂದು ಬರೆಯಲಾಗಿದೆ. ಈ ಸಮಾರಂಭ ಮತ್ತು ಸಭೆಯ ಮುಖ್ಯ ಆಯೋಜಕರಾಗಿರಬೇಕಿದ್ದ ಹಝ್‌ರತ್ ಅಬ್ಬಾಸ್ ಅವರನ್ನು ಕಾವಲು ಮತ್ತು ರಕ್ಷಣೆಗಾಗಿ ಹಝ್‌ರತ್ ಅಲಿ(ರ) ಅವರನ್ನು ಒಂದು ಘಾಟಿಯ ಮೇಲೆ ಕಾವಲನನ್ನಾಗಿ ನಿಲ್ಲಿಸಲಾಯಿತು ಅದೇ ರೀತಿ ಇನ್ನೊಂದು ಘಾಟಿಯ ಮೇಲೆ ಹಝ್‌ರತ್ ಅಬೂಬಕರ್(ರ)ರವರನ್ನು ಕಾವಲುಗಾರರನ್ನಾಗಿ ನಿಯೋಜಿಸಲಾಗಿತ್ತು. (ಅಲ್-ಸಿರತ್ ಅಲ್-ಹಲಾಬಿಯಾ, ಸಂಪುಟ-2, ಪುಟ-21, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ತದನಂತರ ರಸೂಲುಲ್ಲಾಹ್(ಸ) ಮದೀನಾಕ್ಕೆ ವಲಸೆ ಹೋದರು. ಅಲ್ಲಿ ಹಝ್‌ರತ್ ಅಬೂಬಕರ್ ಸಿದ್ದೀಕ್(ರ) ಅವರ ಒಡನಾಟವನ್ನು ಪ್ರಸ್ತಾಪಿಸಲಾಗಿದೆ.

ಮಕ್ಕಾದಲ್ಲಿ ನೆಲೆಸಿರುವ ಮುಸ್ಲಿಮರ ಮೇಲೆ ಮಕ್ಕಾ ಅವಿಶ್ವಾಸಿಗಳ ಕಿರುಕುಳವು ತುಂಬಾ ಹೆಚ್ಚುತ್ತಿದೆ ಎಂದು ಬರೆಯಲಾಗಿದೆ, ಆ ಸಮಯದಲ್ಲಿ ಪ್ರವಾದಿ(ಸ) ಅವರಿಗೆ ಒಂದು ಕನಸನ್ನು ತೋರಿಸಲಾಯಿತು, ಅದರಲ್ಲಿ ಇಬ್ಬರು ಮುಸ್ಲಿಮರಿಗೆ ಅವರು ವಲಸೆ ಹೋಗಬೇಕಾದ ಸ್ಥಳವನ್ನು ತೋರಿಸಲಾಯಿತು. ಈ ಸ್ಥಳವು ಖರ್ಜೂರದ ಮರಗಳಿಂದ ಸುತ್ತುವರೆದ ಲವಣಯುಕ್ತ ಪ್ರದೇಶವಾಗಿತ್ತು ಆದರೆ ಅದರ ಹೆಸರನ್ನು ತೋರಿಸಲಾಗಿಲ್ಲ ಅಥವಾ ಉಲ್ಲೇಖಿಸಲಾಗಿಲ್ಲ. ಆದಾಗ್ಯೂ, ಅದರ ಭೌಗೋಳಿಕತೆ ಮತ್ತು ನಕ್ಷೆಯುನ್ನು ನೋಡುವಾಗ, ಪ್ರವಾದಿ(ಸ) ಸ್ವತಃ ಇಜ್ತಿಹಾದ್(ಊಹಿಸಿ) ಹೇಳಿದರು: ಅದು ಹಜರ್ ಅಥವಾ ಯಮಾಮಾ ಆಗಿರುವುದು ಅದರ ಬಗ್ಗೆ ಸಹಿಹ್ ಬುಖಾರಿಯ ವರದಿಗಳಲ್ಲಿ ಉಲ್ಲೇಖಿಸಲಾಗಿದೆ, ಅದರ ಪ್ರಕಾರ ಅವರು(ಸ) ನುಡಿದರು: **ಫಝಹಬ ವಹಲಿ ಇಲಾ ಅನ್ನಹಲ್ ಯಮಾಮತು ಅವಿಲ್ ಹಜರು, ಫಇಝಾ ಹಿಯಲ್ ಮದೀನತು ಯಸ್‌ರಬ್** (ಸಹೀಹ್ ಅಲ್‌ಬುಖಾರಿ, ಕಿತಾಬುಲ್ ಮನಾಖಿಬ್, ವರದಿ ಸಂಖ್ಯೆ-3622) ಎಂದರೆ ನನ್ನ ಯೋಚನೆಯು ಈ ಸ್ಥಳವೂ ಯಮಾಮ ಅಥವಾ ಹಜರ್ ಆಗಿರಬಹುದು ಆದರೆ ಇದು ಯಸ್‌ರಬ್ ಆಗಿದೆ. ಯಮಮಾ ಕೂಡ ಯೆಮೆನ್‌ನ ಪ್ರಸಿದ್ಧ ನಗರವಾಗಿದೆ. (ಫರ್ಹಾಂಗ್ ಸೀರತ್, ಪುಟ-321, ಜವಾರ್ ಅಕಾಡೆಮಿ ಪಬ್ಲಿಕೇಶನ್ಸ್ ಉರ್ದು ಬಜಾರ್ ಕರಾಚಿ 2003)

ಮತ್ತು ಹಜರ್ ಎಂಬ ಹಲವಾರು ವಸಾಹತುಗಳು ಅರಬ್ ಪ್ರದೇಶದಲ್ಲಿ ಕಂಡುಬಂದಿವೆ. ಬಹ್ರೇನ್‌ನಲ್ಲಿರುವ ನಗರ ಮತ್ತು ಬಹ್ರೇನ್‌ನ ಒಂದು ಭಾಗವನ್ನು ಹಜರ್ ಎಂದೂ ಕರೆಯಲಾಗುತ್ತಿತ್ತು. (ಮಿಜಮುಲ್ ಬಲದಾನ್, ಸಂಪುಟ-5, ಪುಟ-452, "ಹಿಜ್ರಾ" ದಾರ್ ಅಲ್-ಕಿತಾಬ್ ಅಲ್-ಅಲಮಿಯಾ ಬೈರುತ್)

ಆದಾಗ್ಯೂ, ಕೆಲವು ಕಾಲದ ನಂತರ ಮದೀನದ ಸೌಭಾಗ್ಯಶಾಲಿಗಳಾದ ಅನ್ಸಾರ್‌ಗಳು ಇಸ್ಲಾಂ ಸ್ವೀಕರಿಸಲು ಶುರುಮಾಡಿದಾಗ ಕನಸಿನಲ್ಲಿ ಕಂಡದ್ದು ಯಸ್‌ರಿಬ್ ಆಗಿತ್ತು ಎಂದು ಅಲ್ಲಾಹನು ಹಝ್ರತ್ ಪೈಗಂಬರ್(ಸ)ರಿಗೆ ದಿವ್ಯವಾಣಿ ಮೂಲಕ ತಿಳಿಸಿಕೊಟ್ಟನು. ಆ ಪ್ರದೇಶ ನಂತರ ಕಾಲದಲ್ಲಿ ಮದೀನ ಎಂಬ ಹೆಸರಲ್ಲಿ ಪ್ರಸಿದ್ಧವಾಗಲಿಕ್ಕಿತ್ತು.

ಹಝ್ರತ್ ಮಸೀಹ್ ಮೌಊದ್(ಅ) ಈ ಕುರಿತು ಹೇಳುತ್ತಾರೆ: ಪ್ರವಾದಿ ಮುಹಮ್ಮದ್(ಸ)ರವರ ಆ ಇಜ್‌ತಿಹಾದ್ ಅನ್ನು ಪ್ರಸ್ತಾಪಿಸಿ ಹೇಳಿದರು **ಫಝಹಬ ವಹಲಿ ಇಲಾ ಅನ್ನಹಲ್ ಯಮಾಮತು ಅವಿಲ್ ಹಜರು, ಫಇಝಾ ಹಿಯಲ್ ಮದೀನತು ಯಸ್‌ರಬ್** ಈ ಹದೀಸ್‌ನಿಂದ ಸ್ಪಷ್ಟವಾಗುವುದೇನೆಂದರೆ ಪ್ರವಾದಿ(ಸ)ರವರು ತಮ್ಮ ಇಜ್‌ತಿಹಾದ್‌ನಿಂದ ನುಡಿದ ಭವಿಷ್ಯವಾಣಿಯ ಪ್ರದೇಶವು ತಪ್ಪಾಯಿತು. (ಇಝಾಲ ಔಹಾಮ್, ರೂಹಾನಿ ಖಝಾಈನ್, ಸಂಪುಟ-3, ಪುಟ-472)

ಅದಾಗ್ಯೂ ಹಝ್ರತ್ ಪೈಗಂಬರ್(ಸ) ಮಕ್ಕದಲ್ಲಿ ಪೀಡನೆ ಅನುಭವಿಸುತ್ತದ್ದ ಸಹಾಬಿಯರಿಗೆ ಮತ್ತು ಮುಸ್ಲಿಮರಿಗೆ ಹಿಜ್ರತ್ ಮಾಡಲು ಅನುಮತಿ ಕೊಟ್ಟರು ಮತ್ತು ಮಾರ್ಗದರ್ಶನ ನೀಡಿದರು. ಮಕ್ಕದ ಮುಸ್ಲಿಮರು ಮದೀನದ ಕಡೆಗೆ ಹಿಜ್ರತ್ ಮಾಡಲು ಶುರುಮಾಡಿದರು. ಅದು ಅಖಬದಲ್ಲಿ ನಡೆದ ಎರಡನೇ ಬೈಅತ್ತಿನ ನಂತರ ಇನ್ನೂ ಹೆಚ್ಚಾಯಿತು. ಮಕ್ಕದ ದುಷ್ಟ ಸರದಾರರು ಕೋಪದಿಂದ ಕೆಂಡವಾಗಿ ಮುಸ್ಲಿಮರ ಮೇಲೆ ನಿತ್ಯವು ದೌರ್ಜನ್ಯ ಮತ್ತು ಪೀಡನೆಯ ಹೊಸ ಹೊಸ ಮಾರ್ಗಗಳನ್ನು ಅವಲಂಬಿಸುತ್ತಿದ್ದರು. (ಸಬ್ಲಿಲ್ ಹುದಾ ವ ರ್‍ರಶ್ಶಾದ್, ಸಂಪುಟ-3, ಪುಟ-224-227, ದಾರುಲ್ ಕುತುಬ್ ಇಲ್‌ಮಿಯ ಬಯರೂತ್ 1993)

ಆದರೆ ಸಹನೆ ಮತ್ತು ಕೃತಜ್ಞತೆ ಅರ್ಪಿಸುವ ಸತ್ಯವಿಶ್ವಾಸಿಗಳ ಸಂಘದಲ್ಲಿ ಹಿಜ್ರತ್ ಮಾಡಲು ಸಾಧ್ಯವಿರುವವರು ಮದೀನದ ಕಡೆಗೆ ಹಿಜ್ರತ್ ಮಾಡುತ್ತಲೇ ಹೋದರು. ಈಗ ಕೇವಲ ಅತ್ಯಂತ ದುರ್ಬಲ ಮತ್ತು ನಿಸ್ಸಹಾಯಕ ಮುಸ್ಲಿಮರು ಮಾತ್ರ ಹಿಂದುಳಿದರು. ಅದರ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ: **ಇಲ್ಲಲ್ ಮುಸ್ತಝ್‌ಅಫೀನ ಮಿನರ್‍ರಿಜಾಲಿ ವನ್ನಿಸಾಇ ವಲ್‌ವಿಲ್ದಾನಿ ಲಾ ಯಸ್‌ತತೀಯೂನ ಹೀಲತನ್ ವಲಾ ಯಹ್‌ತದೂನ ಸಬೀಲ.**(ಅನ್ನಿಸಾಅ:99) ಎಂದರೆ ತಮ್ಮ ರಾಜ್ಯವನ್ನು ತೊರೆದು ಹೋಗಲು ಯೋಜನೆಯನ್ನು ರೂಪಿಸಲು ಅಶಕ್ತರಾದ ಹಾಗೂ ಯಾವುದೇ ಮಾರ್ಗೋಪಾಯವನ್ನು ಕಾಣದ ಪುರುಷರು, ಸ್ತ್ರೀಯರು ಮತ್ತು ಮಕ್ಕಳು ಹೊರತು.

ಅವರಲ್ಲದೇ ಹಝ್ರತ್ ಪೈಗಂಬರ್(ಸ) ಕೂಡ ಅಲ್ಲಾಹನ ಆದೇಶಕ್ಕೆ ಕಾಯುತ್ತಿದ್ದರು. ಹಝ್ರತ್ ಅಲಿ(ರ) ಸಹ ಮಕ್ಕದಲ್ಲೇ ಇದ್ದರು. ಆದರೆ ಹಝ್ರತ್ ಅಬೂಬಕರ್(ರ) ಹಿಜ್ರತ್ ಮಾಡಲು ಅನುಮತಿ ಕೇಳಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಸ್ವಲ್ಪ ಸಮಯ ಕಾಯಿರಿ. ಏಕೆಂದರೆ ನನಗೂ ಅನುಮತಿ ಲಭಿಸುವುದು ಎಂಬ ಪ್ರತೀಕ್ಷೆ ನನಗೂ ಇದೆ. ಒಂದು ವರದಿಯ ಪ್ರಕಾರ ಹಝ್ರತ್ ಪೈಗಂಬರ್(ಸ) ಹೇಳಿದರು: ಅವಸರಪಡಬೇಡ, ನಿನಗಾಗಿ ಒಬ್ಬ ಸಂಗಡಿಗನ ವ್ಯವಸ್ಥೆಯಾಗುವ ಸಾಧ್ಯತೆಯಿದೆ.

ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ನಿಮಗೂ ಹಿಜ್ರತ್ ಮಾಡಲು ಅನುಮತಿ ಲಭಿಸುವುದು. ಹೀಗೆ ಹಝ್ರತ್ ಅಬೂಬಕರ್(ರ) ಸಂತೋಷದಿಂದ ಮರಳಿದರು. ಅವರು ಬುದ್ಧಿಪೂರ್ವಕವಾಗಿ ಎರಡು ಒಂಟೆಗಳನ್ನು ಖರೀದಿ ಮಾಡಿದರು. ಹೀಗೆ ಖಚಿತವಲ್ಲದ ಯಾತ್ರೆಗಾಗಿ ತಯಾರಿ ಮಾಡುತ್ತಿದ್ದರು. (ಸಹೀಹ್ ಬುಖಾರಿ, ಕಿತಾಬುಲ್ ಕಿಫಾಲ, ಹದೀಸ್-2297) (ಅಲ್‌ಖಲೀಫತುಲ್ ಅವ್ವಲ್ ಅಬೂಬಕರ್ ಅಸ್ಸಿದ್ದೀಖ್, ಸಲಾಬಿ, ಪುಟ-45, ದಾರುಲ್ ಮಾರಿಫ ಬೈರೂತ್ 2006)

ಇದರ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಂಗಡಿಗರು ಹಿಜ್ರತಿನ ತಯಾರಿ ಶುರುಮಾಡಿದರು. ಒಂದರ ನಂತರ ಇನ್ನೊಂದು ಕುಟುಂಬ ಮಕ್ಕದಿಂದ ಕಾಣೆಯಾಗಲು ಶುರುವಾಯಿತು. ಕೆಲವೊಮ್ಮೆ ಒಂದೇ ರಾತ್ರಿಯಲ್ಲಿ ಒಂದು ಪೂರ್ತಿ ಗಲ್ಲಿಯ ಮನೆಗಳಿಗೆ ಬೀಗ ಬೀಳುತ್ತಿತ್ತು. ಬೆಳಿಗ್ಗಿನ ಸಮಯದಲ್ಲಿ ಗಲ್ಲಿಯ ಮೂಕತೆಯನ್ನು ಕಂಡು ಏನಾಯಿತು ಎಂದು ಕೇಳುತ್ತಿದ್ದರು. ಆ ಗಲ್ಲಿಯ ಎಲ್ಲ ನಿವಾಸಿಗಳು ಮದೀನಕ್ಕೆ ಹಿಜ್ರತ್ ಹೋದರು ಎಂದು ಹೇಳಲಾಗುತ್ತಿತ್ತು. ಕೊನೆಗೆ ಕೆಲವು ಗುಲಾಮರು, ಹಝ್ರತ್ ಪೈಗಂಬರ್(ಸ), ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಅಲಿ(ರ) ಮಕ್ಕದಲ್ಲಿ ಉಳಿದರು. (ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ-20, ಪುಟ-222)

ಅದೇ ರೀತಿ ಇನ್ನೊಂದೆಡೆ ಹಝ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಮಕ್ಕದ ಸತ್ಯನಿಷೇಧಿಗಳಿಗೆ ಇತರರಿಗಿಂತ ಹೆಚ್ಚು ಹಝ್ರತ್

ಪೈಗಂಬರ್(ಸ)ರೊಂದಿಗೆ ಸಹಜವಾಗಿಯೇ ಹೆಚ್ಚು ಹಗೆ ಮತ್ತು ಶತ್ರುತ್ವವಿತ್ತು. ಏಕೆಂದರೆ ಹಝ್ರತ್ ಪೈಗಂಬರ್(ಸ)ರ ಅಧ್ಯಾಪನೆಯ ಕಾರಣದಿಂದ ಜನರಲ್ಲಿ ಶಿರ್ಕಿನ ವಿರೋಧ ಹರಡುತ್ತಿದೆ ಎಂದು ಅವರು ನೋಡುತ್ತಿದ್ದರು. ಹಝ್ರತ್ ಪೈಗಂಬರ್(ಸ)ರನ್ನು ಕೊಂದರೆ ಉಳಿದವರು ಸ್ವತಃ ಬೇರ್ಪಟ್ಟು ಹೋಗುವರು ಎಂದು ಅವರಿಗೆ ಗೊತ್ತಿತ್ತು. ಆದ್ದರಿಂದ ಅವರು ಇತರರಿಗಿಂತ ಹೆಚ್ಚು ಹಝ್ರತ್ ಪೈಗಂಬರ್(ಸ)ರಿಗೆ ಹೆಚ್ಚು ದುಃಖ ನೀಡುತ್ತಿದ್ದರು. ಹೇಗಾದರೂ ಹಝ್ರತ್ ಪೈಗಂಬರ್(ಸ) ತಮ್ಮ ವಾದದಿಂದ ಹಿಂಜರಿಯಲಿ ಎಂದು ಅವರು ಬಯಸುತ್ತಿದ್ದರು. ಆದರೆ ಈ ಕಷ್ಟತೆಗಳು ಇದ್ದೂ ಹಝ್ರತ್ ಪೈಗಂಬರ್(ಸ) ಸಹಾಬಿಯರಿಗೆ ಹಿಜ್ರತ್ ಮಾಡಲು ಅನುಮತಿ ಕೊಟ್ಟರು ಮತ್ತು ಸ್ವತಃ ಹಿಜ್ರತ್ ಮಾಡಲಿಲ್ಲ. ಏಕೆಂದರೆ ಅಲ್ಲಾಹನ ಕಡೆಯಿಂದ ಯಾವುದೇ ಅನುಮತಿ ಸಿಕ್ಕಿರಲಿಲ್ಲ. ಹಝ್ರತ್ ಅಬೂಬಕರ್(ರ) ಹಿಜ್ರತ್ ಮಾಡಲು ಅನುಮತಿ ಕೇಳಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: **ಅಲಾ ರಿಸ್‌ಲಿಕ ಫಇನ್ನೀ ಅರ್‌ಜೂ ಅನ್‌ಯುಅ್‌ಧನ ಲೀ**. ಎಂದರೆ ಸ್ವಲ್ಪ ಸಮಯ ಕಾಯಿರಿ. ಏಕೆಂದರೆ ನನಗೂ ಅನುಮತಿ ಲಭಿಸುವುದು ಎಂಬ ಪ್ರತೀಕ್ಷೆ ನನಗೂ ಇದೆ. (ಸೀರತುನ್ನಬಿ(ಸ), ಅನ್ವಾರುಲ್ ಉಲೂಮ್, ಸಂಪುಟ–1, ಪುಟ–489)

ದಾರ್ ಅಲ್–ನದ್ವಾದಲ್ಲಿ, ಅವಿಶ್ವಾಸಿಗಳು ರಸೂಲುಲ್ಲಾಹ್(ಸ) ರವರ ವಿರುದ್ಧ ರಹಸ್ಯವಾಗಿ ಸಮಾಲೋಚಿಸಲು ಒಟ್ಟುಗೂಡಿದರು.

ಮಕ್ಕದ ಸರದಾರರು ಮುಸ್ಲಿಮರು ತಮ್ಮ ಕೈಯಿಂದ ತಪ್ಪಿಸಿಕೊಂಡರು ಎಂದು ತುಂಬ ಕೋಪಗೊಂಡು ಆಕ್ರೋಶಕ್ಕೆ ಒಳಗಾಗುಗಿ ಅವರು ಈಗ ದಾರ್ ಅಲ್–ನದ್ವಾದಲ್ಲಿ ಒಟ್ಟುಗೂಡಿದರು ಎಂದು ಬರೆಯಲಾಗಿದೆ. ಅಲ್ಲಾಮಾ ಇಬ್ನ್ ಇಸ್ಹಾಕ್ ಹೇಳುತ್ತಾರೆ, ಖುರೈಷಿಗಳು ಒಂದು ಗುಂಪು ಮತ್ತು ಕೆಲವು ಸಂಗಡಿಗರು ರಸೂಲುಲ್ಲಾಹ್(ಸ) ರೊಂದಿಗೆ ಸೇರಿಕೊಂಡಿದ್ದನ್ನು ನೋಡಿದರು, ಅವರು ಮಕ್ಕಾದ ಮುಸ್ಲಿಮರಲ್ಲದ ಅಥವಾ ಅವರ ಪ್ರದೇಶದವರಾಗಿರಲಿಲ್ಲ. ಅಲ್ಲದೆ, ಪ್ರವಾದಿ(ಸ) ಅವರ ಸಹಾಬರವರು ಅವರ ಕಡೆಗೆ ವಲಸೆ ಹೋಗುತ್ತಿರುವುದನ್ನು ಖುರೈಷಿಗಳು ನೋಡಿದಾಗ, ಖುರೈಷಿಗಳು ಅವರು ಶಾಂತಿಯ ಸ್ಥಳದಲ್ಲಿ ಬೀಡು ಬಿಟ್ಟಿದ್ದಾರೆಂದು ಅರಿತುಕೊಂಡರು ಮತ್ತು ಅವರಿಗೆ ಈ ಜನರು ಅಂದರೆ ಮದೀನಾ ಜನರು ಸಂಪೂರ್ಣ ರಕ್ಷಣೆ ನೀಡಿದರು. ಹಝ್ರತ್ ಪೈಗಂಬರ್(ಸ) ಹಿಜ್ರತ್ ಮಾಡಿ ಮದೀನಕ್ಕೆ ಹೋಗುವರೋ ಎಂಬ ಭಯ ಮಕ್ಕಾದ ಸತ್ಯನಿಷೇಧಿಗಳಿಗೆ ಉಂಟಾದಾಗ ಅವರು ಹಝ್ರತ್ ಪೈಗಂಬರ್(ಸ)ರ ವಿರುದ್ಧ ರಹಸ್ಯವಾದ ಸಮಾಲೋಚನೆ ನಡೆಸಲಿಕ್ಕಾಗಿ ಖುಸ್ಸಿ ಬಿನ್ ಕಿಲಾಬಿನ ಮನೆಯಾದ ದಾರುನ್ನದ್‌ವದಲ್ಲಿ ಒಟ್ಟುಗೂಡಿದರು. ಅವರು ನಿಮ್ಮ ಬಗ್ಗೆ ಭಯವುಂಟಾದಾಗಲೆಲ್ಲ ಸಲಹೆಗಾಗಿ ಇಲ್ಲಿಗೆ ಬಂದು ಸೇರುತ್ತಿದ್ದರು. ಮತ್ತೊಂದು ವರದಿಯ ಪ್ರಕಾರ, ಹಝ್ರತ್ ಅಬ್ದುಲ್ಲಾ ಇಬ್ನ್ ಅಬ್ಬಾಸ್(ರ) ಅವರು ಹೇಳುತ್ತಾರೆ: ಆ ಜನರು ಇದಕ್ಕಾಗಿ ಒಗ್ಗೂಡಿದಾಗ ಮತ್ತು ಅವರು ದಾರ್ ಅಲ್–ನದ್ವಹ್‌ಗೆ ಪ್ರವಾದಿ(ಸ) ಅವರೊಂದಿಗೆ ಸಮಾಲೋಚನೆ ನಡೆಸಲು ಪ್ರವೇಶಿಸುವುದಾಗಿ ಪ್ರತಿಜ್ಞೆ ಮಾಡಿದರು. ಅವರು ನಿಶ್ಚಯಿಸಿದ ದಿನದಂದು ಈ ದಿನವನ್ನು **ಯೌಮುಝ್ಝುಹ್‌ಮ** ಎಂದು ಕರೆಯಲಾಗುತ್ತದೆ. ಇಬ್ಲೀಸಿನ ಗುಣಲಕ್ಷಣಗಳು ಹೊಂದಿದ ಮನುಷ್ಯ ಓರ್ವ ಮುದುಕನ ರೂಪದಲ್ಲಿ ಅವರ ಮುಂದೆ ಕಾಣಿಸಿಕೊಂಡಿತು. ಇದರರ್ಥ ಇಬ್ಲೀಸಿನ ರೂಪದಲ್ಲಿ ಮನುಷ್ಯನಿದ್ದನು. ಹೇಗಾದರೂ, ಆ ಮುದುಕನು ಚಾದರ್ ಧರಿಸಿ ದಾರ್ ಅಲ್–ನದ್ವಾಹ್‌ದ ಬಾಗಿಲಲ್ಲಿ ನಿಂತಿದ್ದನು. ಜನರಿಗೆ ಅದು ತಿಳಿದಿರಲಿಲ್ಲ. ಅವರು ಬಾಗಿಲಲ್ಲಿ ನಿಂತಿರುವುದನ್ನು ಕಂಡು, "ಯಾರು ಈ ಮುದುಕ?" ಆ ವ್ಯಕ್ತಿ ಹೇಳಿದನು, "ನಾನು ನಜ್ದ್ ಜನರಲ್ಲಿ ಓರ್ವ ಹಿರಿಯ ವ್ಯಕ್ತಿಯಾಗಿರುವೆನು" ಎಂದು ಅವನು ಹೇಳಿದನು, "ನೀವು ಮಾಡಿದ ಪ್ರತಿಜ್ಞೆ ಬಗ್ಗೆ ನಾನು ಕೇಳಿಸಿಕೊಂಡಿದ್ದೇನೆ." ಹಾಗಾಗಿ ನೀವು ಹೇಳುವುದನ್ನು ಕೇಳಲು ನಾನು ನಿಮ್ಮ ಬಳಿಗೆ ಬಂದಿದ್ದೇನೆ. ಹೀಗೆ ಇದರಿಂದ ನಿಮಗೆ ಉತ್ತಮ ಸಲಹೆ ಸಿಗಬಹುದು ಎಂದು ಭಾವಿಸುತ್ತೇನೆ ಎಂದು ತನ್ನ ಬಗ್ಗೆ ಹೇಳಿದನು. ಅದಕ್ಕೆ ಅವರು "ಸರಿ, ಒಳಗೆ ಬನ್ನಿ" ಎಂದರು. ಅವನು ಅವರ ಜೊತೆಯಲ್ಲಿ ಹೋದನು. ಈ ಸಮಾಲೋಚನೆಯಲ್ಲಿ ಖುರೈಶಿನ ಪ್ರಸಿದ್ಧ ಸರದಾರರ ಒಂದು ದೊಡ್ಡ ಸಂಘವಲ್ಲದೆ ಖುರೈಶಿಗಳಲ್ಲದ ಕೆಲವು ಸರದಾರರು ಕೂಡ ಇದ್ದರು. ಅವರಲ್ಲಿ ಉತ್ಬಾ ಇಬ್ನ್ ರಬಿಯಾ ಮತ್ತು ಶೈಬಾ ಇಬ್ನ್ ರಬಿಯಾ, ಅಬು ಸುಫ್ಯಾನ್ ಇಬ್ನ್ ಹರ್ಬ್, ತೈಮಾ ಇಬ್ನ್' ಆದಿ ಮತ್ತು ಕೆಲವರು. ಅಬು ಜಹ್ಲ್ ಇಬ್ನ್ ಹಿಶಾಮ್, ಹಜ್ಜಾಜ್ ಅವರ ಇಬ್ಬರು ಪುತ್ರರು ಮತ್ತು ಅನೇಕರು. ಜೊತೆಗೆ, ಖುರೈಷಿಗಳಲ್ಲದ ಕೆಲವು ಮುಖ್ಯಸ್ಥರಿದ್ದರು. ಎಲ್ಲಾ ಜನರು ಒಟ್ಟುಗೂಡಿದರು ಮತ್ತು ಸಲಹೆಗಳನ್ನು ನೀಡುವ ಸಮಯ ಬಂದಾಗ, ಒಬ್ಬ ವ್ಯಕ್ತಿ ಅವನನ್ನು (ಮುಹಮ್ಮದ್(ಸ)) ಕಬ್ಬಿಣದ ಸಂಕೋಲೆಯಲ್ಲಿ ಬಂಧಿಸಿ ಹೊರಗಿನಿಂದ ಬಾಗಿಲನ್ನು ಲಾಕ್ ಮಾಡಬೇಕೆಂದು ಸೂಚಿಸಿದನು. ನಂತರ ಝುಹೈರ್ ಮತ್ತು ನಬಿಘಾ ಅವರಂತಹ ಇಬ್ಬರು ಕವಿಗಳಿಗೆ ಸಂಭವಿಸಿದ ಅಂತಹ ಮರಣಕ್ಕಾಗಿ ಕಾಯಿರಿ. ಅದೇ ರೀತಿ ಹಿಂದೆ ನಿಧನರಾದ ಇತರ ಕವಿಗಳ ಮೇಲೆ. ಅದೇನೆಂದರೆ, ತನಗಿಂತ ಹಿಂದಿನ ಇಬ್ಬರು ಕವಿಗಳಾದ ಝುಹೈರ್ ಮತ್ತು ಪ್ರತಿಭೆ ಇತ್ಯಾದಿಗಳಿಗೆ ಸಂಭವಿಸಿದಂತೆ ಅಂತ್ಯಕ್ಕಾಗಿ ಕಾಯಿರಿ. ಅಂದರೆ, ಸಾವು ಅವರನ್ನು ನಾಶಮಾಡಿದರೆ, ಅವರಿಗಾಗಿ ಅದೇ ಯೋಜನೆಯನ್ನು ನಿನಗೂ ಮಾಡಲಾಯಿತು. ಈ ಬಗ್ಗೆ ಆ ಹಿರಿಯ ನಜ್ದಿ 'ಇಲ್ಲ' ಎಂದು ಹೇಳಿದನು. ಅಲ್ಲಾಹನಆಣೆ! ನನ್ನ ಅಭಿಪ್ರಾಯದಲ್ಲಿ ಈ ಅಭಿಪ್ರಾಯವು ನಿಮಗೆ ಸೂಕ್ತವಲ್ಲ. ವಲ್ಲಾಹಿ! ನೀವು ಅವನನ್ನು ಜೈಲಿಗೆ ಹಾಕಿದರೆ, ಅವನ ಸುದ್ದಿಯು ಮುಚ್ಚಿದ ಬಾಗಿಲಿನಿಂದ ಹೊರಬಂದು ಅವನ ಸಹಚರರನ್ನು ತಲುಪುತ್ತದೆ. ಆಗ ಅವರು ನಿಮ್ಮ ಮೇಲೆ ದಾಳಿ ಮಾಡಿ ಈ ವ್ಯಕ್ತಿಯನ್ನು ನಿಮ್ಮ ವಶದಿಂದ ಕಿತ್ತುಕೊಳ್ಳುವ ಕಾಲ ದೂರವಿಲ್ಲ. ನಂತರ ಅದರ ಸಹಾಯದಿಂದ ನಿಮ್ಮ ಸಂಖ್ಯೆಯನ್ನು ಹೆಚ್ಚಿಸಿ ಮತ್ತು ನಿಮ್ಮನ್ನು ಸೋಲಿಸಿ. ಆದ್ದರಿಂದ ಇನ್ನೊಂದನ್ನು ಯೋಚಿಸಿ. ಅವರಲ್ಲಿ ಒಬ್ಬನು ಈ ವ್ಯಕ್ತಿಯನ್ನು ನಮ್ಮ ಮಧ್ಯದಿಂದ ಹೊರಹಾಕಬೇಕು ಮತ್ತು ಅವನನ್ನು ನಮ್ಮ ನಗರದಿಂದ ಗಡೀಪಾರು ಮಾಡಬೇಕೆಂದು ಸಲಹೆ ನೀಡಿದನು, ನಂತರ ಅವನು ಎಲ್ಲಿಗೆ ಹೋಗುತ್ತಾನೆ ಮತ್ತು ಅವನು ಎಲ್ಲಿ ವಾಸಿಸುತ್ತಾನೆ ಎಂಬುದಕ್ಕೂ ನಮಗೆ ಯಾವುದೇ ಸಂಬಂಧವಿಲ್ಲ. ಅವನು ನಮ್ಮಿಂದ ಕಣ್ಮರೆಯಾದಾಗ ಮತ್ತು ನಾವು ಅವನನ್ನು ತೊಡೆದುಹಾಕಿದಾಗ, ನಮ್ಮ ಪರಿಸ್ಥಿತಿ ಸುಧಾರಿಸುತ್ತದೆ ಮತ್ತು ನಾವು ಮೊದಲಿನ ಸ್ಥಿತಿಯಲ್ಲಿರುತ್ತೇವೆ. ಅದಕ್ಕೆ ಈ ಹಿರಿಯ ನಜ್ದಿ ಹೇಳಿದನು ಅಲ್ಲಾಹನಆಣೆ!! ಈ ಅಭಿಪ್ರಾಯವೂ ಸರಿಯಲ್ಲ. ಈ ವ್ಯಕ್ತಿಯ ಮಾತುಗಳು ಎಷ್ಟು ಉತ್ತಮವಾಗಿವೆ ಮತ್ತು ಅವನ ಮಾತುಗಳು ಎಷ್ಟು ಮಧುರವಾಗಿವೆ ಮತ್ತು ಅವನು ತಂದದ್ದರಲ್ಲಿ ಅವನು ಜನರ ಹೃದಯವನ್ನು ಹೇಗೆ ಸೆಳೆಯುತ್ತಾನೆ ಎಂಬುದನ್ನು ನೀವು ನೋಡುವುದಿಲ್ಲ. ಅಲ್ಲಾಹನಿಗಾಗಿ! ನೀವು ಹಾಗೆ ಮಾಡಿದರೆ, ನೀವು ಯಾವುದೇ ಅರಬ್ ಬುಡಕಟ್ಟುಗಳೊಂದಿಗೆ ಶಾಂತಿಯಿಂದ ಇರಲು ಸಾಧ್ಯವಿಲ್ಲ, ಮತ್ತು ಅವರು ತಮ್ಮ ಮಾತುಗಳಿಂದ ಅವರನ್ನು ಜಯಿಸುತ್ತಾರೆ ಮತ್ತು ಅವರೆಲ್ಲರು ಅವರನ್ನು ಅನುಸರಿಸುತ್ತಾರೆ. ನಂತರ ಅವರೆಲ್ಲರು ನಿಮ್ಮ ವಿರುದ್ಧವೇ ಹೋರಾಡಿ ನಿಮ್ಮನ್ನು ನಿಮ್ಮ ನಗರದಲ್ಲಿ ತುಳಿದು ಹಾಕುತ್ತಾರೆ ಹೀಗೆ ನಿಮ್ಮ ವ್ಯವಹಾರಗಳನ್ನು ನಿಮ್ಮ ಕೈಯಿಂದ ತೆಗೆದುಕೊಳ್ಳುತ್ತಾರೆ ಮತ್ತು ನಂತರ ನಿಮ್ಮೊಂದಿಗೆ ಅವರು ಬಯಸಿದಂತೆ ವರ್ತಿಸುತ್ತಾರೆ. ಆದ್ದರಿಂದ ಬೇರೆ ಯಾವುದನ್ನಾದರೂ ಯೋಚಿಸಿ. ಇದಕ್ಕೆ ಅಬು ಜಹ್ಲ್ ಹೇಳಿದನು: ನನ್ನ ಅಭಿಪ್ರಾಯವೆಂದರೆ ಪ್ರತಿ ಖುರೈಶ್ ಗೋತ್ರದಿಂದಲೂ ಒಬ್ಬ ಯುವಕ, ಬಲಿಷ್ಠ ಮತ್ತು ಉತ್ತಮ ಸಂಸಾರದ ಯುವಕನನ್ನು ಆರಿಸಬೇಕು ಮತ್ತು ಪ್ರತಿಯೊಬ್ಬರ ಕೈಯಲ್ಲಿ ತೀಕ್ಷ್ಣವಾದ ಕತ್ತರಿಸುವ ಕತ್ತಿಯನ್ನು ನೀಡಬೇಕು. ಮುಹಮ್ಮದ್(ಸ) ಮತ್ತು ಅವನ ಮೇಲೆ ಮನುಳ್ಯನಂತೆ ದಾಳಿ ಮಾಡಿ ಕೊಲ್ಲಬೇಕು. ಆ ಮೂಲಕ ನಾವು ಈ ವ್ಯಕ್ತಿಯಿಂದ ಪರಿಹಾರ ಪಡೆಯಬಹುದು. ಈ ಹತ್ಯೆಯ ಫಲಿತಾಂಶವೆಂದರೆ ಈ ವ್ಯಕ್ತಿಯ ಕೊಲೆಯು ಎಲ್ಲಾ ಗೋತ್ರ ಜನಾಂಗದವರಲ್ಲಿ ಹಂಚಲ್ಪಡುತ್ತದೆ ಮತ್ತು ಬಾನು ಅಬ್ದುಲ್–ಮನಾಫ್ ಎಲ್ಲಾ ಗೋತ್ರಗಳೊಂದಿಗೆ ಹೋರಾಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಾವು 'ದೀತ್' ತೆಗೆದುಕೊಳ್ಳಲು ಒಪ್ಪಿಕೊಂಡು ನಾವು 'ದೀತ್' ಅನ್ನು ಪಾವತಿಸುತ್ತೇವೆ. ಹಿರಿಯ ನಜ್ದಿ ಉತ್ತರಿಸಿದನು. ಈ ವ್ಯಕ್ತಿಯ ಸಲಹೆ ಉತ್ತಮವಾಗಿದೆ, ಉಳಿದೆಲ್ಲವೂ ಅಸಂಬದ್ಧವಾಗಿದೆ. ಹಾಗಾಗಿ ಎಲ್ಲರೂ ಈ ಸಲಹೆಯನ್ನು ಒಪ್ಪಿಕೊಂಡು ಅಲ್ಲಿಂದ ಹೊರಟರು. (ಇಬ್ನ್ ಹಿಶಾಮ್ ಅವರಿಂದ ಅಲ್–ಸಿರತ್ ಅಲ್–ನಬವಿಯಾ, ಪುಟಗಳು. 340–342, ದಾರ್ ಅಲ್–ಕಿತಾಬ್ ಅಲ್–ಅಲಮಿಯಾ, ಬೈರುತ್ 2001)

ಮತ್ತೊಂದೆಡೆ ಹಝ್ರತ್ ಪೈಗಂಬರ್(ಸ)ರಿಗೆ ಈ ಎಲ್ಲ ಸ್ಥಿತಿಗತಿಗಳನ್ನು ತಿಳಿಸುತ್ತಾ ಹಿಜ್ರತ್ ಮಾಡುವ ಅನುಮತಿಯನ್ನು ಅಲ್ಲಾಹನು ಜಿಬ್ರೀಲ್ ಮೂಲಕ ಕೊಟ್ಟನು. ಇದರ ಬಗ್ಗೆ ಅಲ್ಲಾಹನು ಹೇಳುತ್ತಾನೆ: **ವಇದ್ ಯಮ್‌ಕುರುಬಿಕಲ್ಲದೀನ ಕಫರೂ ಲಿಯುಸ್‌ಬಿತೂಕ ಅವ್ ಯಖ್‌ತುಲೂಕ ಅವ್ ಯುಖ್‌ರಿಜೂಕ. ವಯಮ್‌ಕುರೂನ ವಯಮ್‌ಕುರುಲ್ಲಾಹ್. ವಲ್ಲಾಹು ಖೈರುಲ್ ಮಾಕಿರೀನ್**. ಎಂದರೆ, ನಿನ್ನನ್ನು ಬಂಧಿಸಲು ಅಥವಾ ಕೊಲ್ಲಲು ಅಥವಾ ಊರಿನಿಂದ ಹೊರ ಅಟ್ಟಲು ಅವಿಶ್ವಾಸಿಗಳು ನಿನ್ನ ವಿರುದ್ಧ ಷಡ್ಯಂತ್ರ ಹೂಡಿದ ಸಂದರ್ಭ ನೆನಪಿಸು. ಅವರು ತಂತ್ರ ಹೂಡಿದರು. ಅಲ್ಲಾಹನೂ ಅವರ ವಿರುದ್ಧ ಮರುತಂತ್ರ ಹೂಡಿದನು. ಅಲ್ಲಾಹನು ತಂತ್ರಗಾರರಲ್ಲಿ ಅತ್ಯುತ್ತಮನು. (ಸಬ್ಲುಲ್ ಹುದಾ ವರ್‍ರಶ್ಯಾದ್, ಸಂಪುಟ–3, ಪುಟ–232, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಮಕ್ಕಾ ಅವಿಶ್ವಾಸಿಗಳು ಪ್ರವಾದಿ(ಸ) ಅವರನ್ನು ಕೊಲ್ಲಲು ಉದ್ದೇಶಿಸಿದ್ದರು. ಆಗ ಸರ್ವಶಕ್ತನಾದ ಅಲ್ಲಾಗನು ತನ್ನ ಪವಿತ್ರ ಪ್ರವಾದಿಯನ್ನು ಈ ಕೆಟ್ಟ ಇರಾದೆಯ ಬಗ್ಗೆ ತಿಳಿಸಿದನು ಮತ್ತು ಮಕ್ಕದಿಂದ ಮದೀನದ ಕಡೆ ಹಿಜ್ರತ್ ಮಾಡಲು ಆದೇಶಿಸಿದನು. ನಂತರ ವಿಜಯಶಾಲಿಯನ್ನಾಗಿ ಮರಳಿ ಬರುವುದಾಗಿ ಸಂತೋಷದ ಸುದ್ದಿಯನ್ನು ನೀಡಿದನು. ಅಲ್ಲಾಹನಿಂದ ಈ ಅನುಮತಿ ಲಭಿಸಿದ ದಿನವು ಬುಧವಾರ ದಿವಸ, ಮಶ್ಯಾಹ್ನದ ಹೊತ್ತು ಅದು ಕಡು ಬಿಸಿಲಿನ ದಿವಸವಾಗಿತ್ತು.
(ಸುರ್ಮಾ ಚಶ್ಮಾ ಆರ್ಯ, ರೂಹಾನಿ ಖಝಾಇನ್, ಸಂಪುಟ–2, ಪುಟ–64 ಅಡಿಟಿಪ್ಪಣಿ)

ವಲಸೆ ಹೋಗಲು ಅನುಮತಿಯನ್ನು ಪಡೆದ ನಂತರ, ಪ್ರವಾದಿ(ಸ) ಮಧ್ಯಾಹ್ನ ಅಬೂಬಕರ್(ರ) ಅವರ ಮನೆಗೆ ಎಚ್ಚರಿಕೆಯಿಂದ ಭೇಟಿ ನೀಡಿದರು, ಆ ಸಮಯದಲ್ಲಿ ಮಕ್ಕಾದ ಜನರು ಸಾಮಾನ್ಯವಾಗಿ ಮನೆಯಲ್ಲಿಯೇ ಇರುತ್ತಾರೆ ಮತ್ತು ಪರಸ್ಪರ ಭೇಟಿ ನೀಡುವುದಿಲ್ಲ. ತುಂಬಾ ಬಿಸಿಯಾಗಿದ್ದರಿಂದ ಹೆಚ್ಚಿನ ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡಿದ್ದಾರೆ ಆದ್ದರಿಂದ ಅವರು ತಮ್ಮ ಮುಖ ಮತ್ತು ತಲೆಯನ್ನು ಬಟ್ಟೆಯಿಂದ ಮುಚ್ಚಿಕೊಂಡರು. ಅವರು ಹಝ್ರತ್ ಅಬೂಬಕರ್(ರ) ಅವರ ಮನೆಯ ಬಳಿ ತಲುಪಿದಾಗ, ಯಾರೋ ಅವರಿಗೆ ಹೇಳಿದರು ಮತ್ತು ತಿಬ್ರಾನಿ ಮತ್ತು ಫತಹುಲ್‌ಬಾರಿಯ ವರದಿ ಪ್ರಕಾರ ಹಝ್ರತ್ ಅಸ್ಮಾ(ರ) ಹೇಳಿದರು: ಹಝ್ರತ್ ಪೈಗಂಬರ್(ಸ) ಬರುವುದಾಗಿ ತೋರುತ್ತಿದೆ. ಅಬೂಬಕರ್(ರ) ಹೇಳಿದರು: ಅಲ್ಲಾಹನಾಣೆ, ಈ ಮಧ್ಯಾಹ್ನದ ಉರಿಬಿಸಿಲಿನಲ್ಲಿ ಹಝ್ರತ್ ಪೈಗಂಬರ್(ಸ) ಬರುವುದಕ್ಕೆ ವಿಶೇಷ ಕಾರಣವಿರಬೇಕು. ಅದರೊಂದಿಗೆ ಗಾಬರಿಗೊಂಡು ಮನೆಯ ಹೊರಗೆ ಬಂದರು. ಹಝ್ರತ್ ಪೈಗಂಬರ್(ಸ) ಮನೆಯೊಳಗೆ ಪ್ರವೇಶಿಸಿದಾಗ ಕೊಠಡಿಯಲ್ಲಿ ಹಝ್ರತ್ ಆಯಿಶ(ರ) ಮತ್ತು

ಹಝ್ರತ್ ಅಸ್ಮಾ(ರ) ಇದ್ದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ)ರೊಡನೆ ಹೇಳಿದರು: ನಿಮ್ಮ ಬಳಿಯಲ್ಲಿರುವ ಜನರನ್ನು ಹೊರಗೆ ಕಳುಹಿಸು. ಹಝ್ರತ್ ಅಬೂಬಕರ್(ರ) ಹೇಳಿದರು: ಇಲ್ಲಿ ನನ್ನ ಇಬ್ಬರು ಮಕ್ಕಳು ಮಾತ್ರವಿರುವರು. ಆಗ ಹಝ್ರತ್ ಅಬೂಬಕರ್(ರ)ರೊಡನೆ ಹಝ್ರತ್ ಪೈಗಂಬರ್(ಸ) ಹೇಳಿದರು: ನನಗೆ ಹಿಜ್ರತ್ ಮಾಡುವ ಅನುಮತಿ ಅಲ್ಲಾಹನ ವತಿಯಿಂದ ಲಭಿಸಿದೆ.

ಹಝ್ರತ್ ಅಬೂಬಕರ್(ರ) ಹೇಳಿದರು: ಯಾ ರಸೂಲಲ್ಲಾಹ್, ನನ್ನನ್ನು ಕೂಡ ನಿಮ್ಮ ಜೊತೆಗೆ ಕೊಂಡುಹೋಗುವಿರಾ? ಹೌದೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. (ಸಹೀಹ್ ಬುಖಾರಿ, ಕಿತಾಬುಲ್ ಬುಯೂ, ವರದಿ–2138) (ಸಹೀಹ್ ಬುಖಾರಿ, ಕಿತಾಬ್ ಮನಾಖಿಬುಲ್ ಅನ್ಸಾರ್, ವರದಿ–3905) (ಫತಹ್ ಅಲ್‌ಬಾರಿ ಬಶರಹ್ ಸಹೀಹ್ ಬುಖಾರಿ, ಸಂಪುಟ–7, ಪುಟ–277, ದಾರುರ್‍ರಯ್ಯಾನ್ ಅತ್ತುರಾಸುಲ್ ಖಾಹಿರ 1986)

ಆಗ ಹಝ್ರತ್ ಅಬೂಬಕರ್(ರ) ಸಂತೋಷದಿಂದ ಅತ್ತುಬಿಟ್ಟರು. ಹಝ್ರತ್ ಆಇಶ(ರ) ಹೇಳುತ್ತಾರೆ: ಸಂತೋಷದಿಂದಲೂ ಅಳುಬರುತ್ತದೆ ಎಂದು ನನಗೆ ಅಂದು ಗೊತ್ತಾಯಿತು. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ–343, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಿಜ್ರತ್ ಯಾತ್ರೆಯ ಕುರಿತು ಮೊದಲಿನಿಂದಲೇ ಸೂಚನೆ ಲಭಿಸಿದ ಕಾರಣದಿಂದ ಹಝ್ರತ್ ಅಬೂಬಕರ್(ರ) ತನ್ನ ತೀಕ್ಷ್ಣಗ್ರಹಿಕೆಯಿಂದ ಎರಡು ಒಂಟೆಗಳನ್ನು ಮೊದಲಿನಿಂದಲೇ 800 ದಿರ್ಹಮ್‌ನಲ್ಲಿ ಖರೀದಿ ಮಾಡಿ ತಯಾರು ಮಾಡಿದ್ದರು. ಹಝ್ರತ್ ಅಬೂಬಕರ್(ರ)ರಿಂದ ಹಣಕೊಟ್ಟೇ ಅದನ್ನು ಪಡೆಯುವುದಾಗಿ ಹೇಳಿ ಹಝ್ರತ್ ಪೈಗಂಬರ್(ಸ) ಒಂದು ಒಂಟೆಯನ್ನು 400 ದಿರ್ಹಂ ನೀಡಿ ಮತ್ತೊಂದು ವರದಿ ಪ್ರಕಾರ 800 ದಿರ್ಹಂ ಕೊಟ್ಟು ಖರೀದಿ ಮಾಡಿದರು. (ಸಹೀಹ್ ಬುಖಾರಿ ಕಿತಾಬುಲ್ ಮನಾಖಿಬ್ ಅಲ್‌ಅನ್ಸಾರ್, ವರದಿ–3905) (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ–1, ಪುಟ–382, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ಶರಹ್ ಅಝ್ಝುರ್‌ಖಾನ ಅಲಲ್ ಮವಾಹಿಬ್, ಭಾಗ–2, ಪುಟ–105–106, ದಆರುಲ್ ಕುತುಬ್ ಇಲ್‌ಮಿಯ ಬೈರೂತ್ 1996)

ಯೋಜನೆಯ ಪ್ರಕಾರ ಮೊದಲು ಸೌರ್ ಗುಹೆಗೆ ತಲುಪುವುದಾಗಿ ಮತ್ತು ಅಲ್ಲಿ ಮೂರು ದಿನಗಳು ತಂಗುವುದಾಗಿ ತೀರ್ಮಾನಿಸಲಾಯಿತು. ಮಕ್ಕದ ಸುತ್ತ ಇರುವ ಮರುಭೂಮಿಯ ಎಲ್ಲ ರಸ್ತೆಗಳ ಬಗ್ಗೆ ಗೊತ್ತಿದ್ದ ಒಬ್ಬ ಮುಶ್ರಿಕ್ ಆದರೆ ಸಭ್ಯ ವ್ಯಕ್ತಿಯಾದ ಅಬ್ದುಲ್ಲಾಹ್ ಬಿನ್ ಅರೀಖತ್‌ನಿಗೆ ಮೂರು ಒಂಟೆಗಳನ್ನು ಒಪ್ಪಿಸಲಾಯಿತು ಮತ್ತು ಮೂರು ದಿನಗಳ ನಂತರ ಮುಂಜಾನೆ ಬರಬೇಕೆಂದು ಹೇಳಲಾಯಿತು. ಆ ವ್ಯಕ್ತಿ ಅನಂತರ ಮುಸ್ಲಿಮನಾಗಿದ್ದನು. ದಿನಾಲೂ ಮಕ್ಕದ ಸ್ಥಿತಿಗತಿಗಳ ಬಗ್ಗೆ ರಾತ್ರಿ ಸಮಯದಲ್ಲಿ ಸೌರ್ ಗುಹೆಗೆ ಬಂದು ತಿಳಿಸಿಕೊಡುವ ಕೆಲಸ ಅಬ್ದುಲ್ಲಾಹ್ ಬಿನ್ ಅಬೂಬಕರ್‌ರಿಗೆ(ರ) ಒಪ್ಪಿಸಲಾಯಿತು. ಹಝ್ರತ್ ಅಬೂಬಕರ್(ರ)ರ ಒಬ್ಬ ಬುದ್ಧಿವಂತ ಮತ್ತು ಜವಾಬ್ದಾರಿಯುತ ಗುಲಾಮನಾದ ಆಮಿರ್ ಬಿನ್ ಫುಹೇರನದ್ದನು. ಅವನು ತನ್ನ ಆಡುಗಳನ್ನು ಸೌರ್ ಗುಹೆಯ ಸುತ್ತಮುತ್ತ ಮೇಯಿಸಬೇಕು ಮತ್ತು ರಾತ್ರಿ ಸಮಯದಲ್ಲಿ ಹಾಲು ಕೊಡುವ ಆಡುಗಳ ತಾಜಾ ಹಾಲನ್ನು ಅವರಿಬ್ಬರಿಗೆ ಒದಗಿಸಿಕೊಡಬೇಕೆಂಬ ಡ್ಯೂಟಿ ಅವನಿಗೆ ಕೊಡಲಾಯಿತು. ತದನಂತರ ಮಕ್ಕದಿಂದ ಹೊರಡುವ ಸಮಯವನ್ನು ನಿಶ್ಚಯಿಸಿದ ನಂತರ ಪ್ರವಾದಿ(ಸ)ರವರು ಶೀಘ್ರವಾಗಿ ಹಝ್ರತ್ ಅಬೂಬಕರ್(ರ)ರವರ ಮನೆಯಿಂದ ತಮ್ಮ ಮನೆಗೆ ಹಿಂದಿರುಗಿದರು. (ತಾರೀಖ್ ಅಲ್‌ಖಮೀಸ್, ಸಂಪುಟ–2, ಪುಟ–7, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2009) (ಅರ್‍ರಹೀಖ್ ಅಲ್‌ಮಖ್ತೂಮ್, ಸಫಿ ಅರ್‍ರಹ್ಮಾನ್ ಅಲ್‌ಮುಬಾರಕ್ ಪೂರಿ, ಪುಟ–165, ದಾರುಲ್ಹುದ್ ಜದೀದ್ 2018) (ಶರಹ್ ಅಝ್ಝುರ್‌ಖಾನ, ಸಂಪುಟ–2, ಪುಟ–129, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1996)

ಇಲ್ಲಿಗೆ ಆಗಮಿಸಿದ ಅವರು ತಮ್ಮ ವಲಸೆಯ ಕಾರ್ಯಕ್ರಮದ ಬಗ್ಗೆ ಹಝ್ರತ್ ಅಲಿ(ರ) ಅವರಿಗೆ ತಿಳಿಸಿದರು, ಹಝ್ರತ್ ಅಲಿ(ರ)ರಿಗೆ ಒಪ್ಪಿಸಲಾದ ಡ್ಯೂಟಿ ಏನೆಂದರೆ, ಅವರು ರಾತ್ರಿ ಸಮಯದಲ್ಲಿ ಹಝ್ರತ್ ಪೈಗಂಬರರ(ಸ) ಹಾಸಿಗೆಯಲ್ಲಿ ಹಝ್ರತ್ ಪೈಗಂಬರ್(ಸ)ರ ಹಸಿರು ಅಥವಾ ಒಂದು ವರದಿ ಪ್ರಕಾರ ಕೆಂಪು ಬಣ್ಣದ ಚಾದರವನ್ನು ಹೊದ್ದುಕೊಂಡು ನಿದ್ದೆ ಮಾಡಬೇಕು ಎಂದು.

ಅಲ್ಲದೆ, ಪ್ರಾಮಾಣಿಕ ಮತ್ತು ವಿಶ್ವಾಸಾರ್ಹ ಪ್ರವಾದಿ(ಸ) ಹೇಳಿದರು, ಮಕ್ಕಾ ಜನರು ತಮಗೆ ನೀಡಿದ ವಸ್ತುಗಳನ್ನು ಅದನ್ನು ಜನರಿಗೆ ಹಿಂತಿರುಗಿಸಿ ನನ್ನನ್ನು ಹಿಂಬಾಲಿಸಬೇಕು ಎಂದು ಹೇಳಿದರು. ಅಂದರೆ, ಅವರು ಹಝ್ರತ್ ಅಲಿ(ರ) ಅವರಿಗೆ ವಸ್ತುಗಳನ್ನು ಹಿಂತಿರುಗಿಸಲು ಮತ್ತು ಮದೀನಾಕ್ಕೆ ಹಿಂತಿರುಗಲು ಹೇಳಿದರು. ಆದ್ದರಿಂದ ಹಝ್ರತ್ ಅಲಿ(ರ) ಅವರು ಪ್ರವಾದಿ(ಸ) ಪರವಾಗಿ ಜನರಿಗೆ ವಸ್ತುಗಳನ್ನು ಹಿಂದಿರುಗಿಸುವವರೆಗೆ ಮೂರು ದಿನಗಳ ಕಾಲ ಮಕ್ಕಾದಲ್ಲಿಯೇ ಇದ್ದರು. ಅವರು ಅದನ್ನು ಮುಗಿಸಿದಾಗ, ಅವರೂ ಪವಿತ್ರ ಪ್ರವಾದಿ(ಸಲ್ಲಲ್ಲಾಹು ಅಲೈಹಿವಸಲ್ಲಮ್) ಅವರೊಂದಿಗೆ 'ಖುಬಾ' ಎಂಬ ಸ್ಥಳಕ್ಕೆ ಬಂದು ಸೇರಿಕೊಂಡರು. ತದನಂತರ ಹಝ್ರತ್ ಪೈಗಂಬರ್(ಸ)ರ ಮನೆಯ ಹೊರಗೆ ಸತ್ಯನಿಷೇಧಿಗಳ ಕೆಲವು ಆಯ್ದ ಶೂರರು ಕೈಯಲ್ಲಿ ಖಡ್ಗಗಳನ್ನು ಎತ್ತಿ ರಾತ್ರಿಯಾಗಲು ಕಾಯುತ್ತಾ ಹಝ್ರತ್ ಪೈಗಂಬರ್(ಸ)ರನ್ನು ಒಂದೇ ಏಟಿಗೆ ಕೊಲ್ಲಲು ಕಾವಲು ನಿಂತಿದ್ದರು. ಅವರ ಮುಖಂಡರಾಗಿದ್ದ ಅಬೂಜಹಲ್ ಬಹಳ ಅಹಂಕಾರದಿಂದ ಹೀಗೆ ಹೇಳುತ್ತಿದ್ದನು: ಮುಹಮ್ಮದನ್ನು ಅನುಸರಿಸಿದರೆ ನೀವು ಅರಬ್ ಮತ್ತು ಅರಬಿಯೇತರರ ಅರಸರಾಗುವಿರಿ ಎಂದು ಮುಹಮ್ಮದ್ ಹೇಳುತ್ತಾನೆ. ನೀವು ಮರಣದ ನಂತರ ಎಬ್ಬಿಸಲ್ಪಡುವಿರಿ, ನಿಮಗೆ ಜೋರ್ದನಿನ ತೋಟಗಳಂತಹ ತೋಟಗಳು ಲಭಿಸುವುವು. ನೀವು ಅನುಸರಿಸದಿದ್ದರೆ ನಿಮ್ಮ ಮಧ್ಯೆ ಕೊಲೆ ಮತ್ತು ಹತ್ಯಾಕಾಂಡಗಳು ನಡೆಯುವುವು ಎಂದು ಮುಹಮ್ಮದ್ ಹೇಳುತ್ತಿದ್ದಾನೆ. ಇದನ್ನು ಕೇಳಿ ಹಝ್ರತ್ ಪೈಗಂಬರ್(ಸ) ಮನೆಯ ಹೊರಗೆ ಬಂದು ಹೀಗೆ ಹೇಳಿದರು: ನಾನು ಹಾಗೆಯೇ ಹೇಳುತ್ತಿದ್ದೇನೆ ಮತ್ತು ಸೂರ ಯಾಸೀನಿನ ಈ ವಚನಗಳನ್ನು ಓದಿದರು:

**ಯಾಸೀನ್. ವಲ್‌ಖುರ್‌ಆನಿಲ್ ಹಕೀಂ. ಇನ್ನಕ ಲಮಿನಲ್ ಮುರ್ಸಲೀನ್. ಅಲಾ ಸಿರಾತಿಮ್ಮುಸ್ತಖೀಂ. ತನ್‌ಝೀಲಲ್ ಅಝೀಝಿರ್‍ರಹೀಂ. ಲಿತುನ್‌ಧಿರ ಖೌಮಮ್ಮಾ ಉನ್‌ಧಿರ ಆಬಾಉಹುಂ ಫಹುಂ ಗ್ವಾಫಿಲೂನ್. ಲಖದ್ ಹಖ್ಖಲ್ ಖೌಲು ಅಲಾ ಅಕ್‌ಸರಿಹಿಮ್ ಫಹುಂ ಲಾ ಯೂಮಿನೂನ್. ಇನ್ನಾ ಜಅಲ್‌ನಾ ಫೀ ಅಲ್‌ನಾಖಿಹಿಂ ಅಗ್‌ಲಾಲನ್ ಫಹಿಯ ಇಲಲ್ ಅಧ್‌ಖಾನಿ ಫಹುಂ ಮುಖ್‌ಮಹೂನ್. ವಜಅಲ್‌ನಾ ಮಿನ್‌ಬೈನಿ ಐದೀಹಿಂ ಸದ್ದನ್ ವ ಮಿನ್ ಖಲ್‌ಫಿಹಿಂ ಸದ್ದನ್ ಫಅಗ್‌ಶೈನಾಹುಂ ಲಾ ಯುಬ್‌ಸಿರೂನ್**. ಎಂದರೆ, ಎಲ್ಲೈ ಶ್ರೇಷ್ಠ ನೇತಾರ, ಜ್ಞಾನನಿಧಿಯಾದ ಖುರ್‌ಆನಿನಆಣೆ – ನೀನು ಸಂದೇಶವಾಹಕರ ಪೈಕಿ ಓರ್ವನಾಗಿರುವೆ; ನೀನು ಸತ್ಪಥದಲ್ಲಿರುವೆ. ಇದು ಪ್ರತಾಪಶಾಲಿಯೂ ಕಾರುಣ್ಯನಿಧಿಯೂ ಆದವನಿಂದ ಅವತೀರ್ಣಗೊಂಡದ್ದಾಗಿದೆ – ನೀನು ಒಂದು ಜನಾಂಗಕ್ಕೆ ಮುನ್ನೆಚ್ಚರಿಕೆ ನೀಡಲಿಕ್ಕೋಸ್ಕರ – ಅವರ ತಂದೆತಾತಂದಿರಿಗೆ ಮುನ್ನೆಚ್ಚರಿಕೆ ನೀಡಲಾಗಿಲ್ಲ. ಆದ್ದರಿಂದ ಅವರು ನಿರ್ಲಕ್ಷ್ಯರಾಗಿದ್ದರು. ನಿಶ್ಚಯವಾಗಿಯೂ ನಮ್ಮ ವಚನ ಅವರಲ್ಲಿ ಹೆಚ್ಚಿನವರ ಬಗ್ಗೆ ಸತ್ಯವಾಗಿ ಈಡೇರಿದೆ. ಆದ್ದರಿಂದ ಅವರು ನಂಬುವುದಿಲ್ಲ. ಅವರ ಕುತ್ತಿಗೆಗಳಿಗೆ ನಾವು ಕೊರಳಪಟ್ಟಿಗಳನ್ನು ತೊಡಿಸಿದ್ದೇವೆ. ಅವು ಅವರ ಗಲ್ಲಗಳ ವರೆಗೆ ತಲಪುತ್ತವೆ. ಆದ್ದರಿಂದ ಅವರ ತಲೆಗಳು ಹಿಂದಕ್ಕೆ ಎಳೆಯಲ್ಪಟ್ಟಿವೆ. ನಾವು ಅವರ ಮುಂದುಗಡೆ ಒಂದು ತಡೆಯನ್ನಿರಿಸಿದ್ದೇವೆ. ಅವರ ಹಿಂದುಗಡೆ ಸಹ ಒಂದು ತಡೆಯನ್ನಿರಿಸಿದ್ದೇವೆ. ಹಾಗೆ ನಾವು ಅವರನ್ನು ಮುಚ್ಚಿಬಿಟ್ಟಿದ್ದೇವೆ. ಆದ್ದರಿಂದ ಅವರು ಏನನ್ನೂ ಕಾಣಲಾರರು.

ಪ್ರವಾದಿ(ಸ) ಅವರ ಮುಂದೆಯಿಂದಲೇ ಹೋದರು ಆದರೆ ಅಲ್ಲಾಹನ ದಯೆಯಿಂದ ಪ್ರವಾದಿ(ಸ) ಅವರು ಹೋಗಿದ್ದನ್ನು ಕಾಣಲಿಲ್ಲ. ಬದಲಿಗೆ ಅವರು ಆಗಾಗ ಒಳಗೆ ಇಣಿಕಿ ಇಣಿಕಿ ನೋಡಿ ಪ್ರವಾದಿ(ಸ) ಇನ್ನೂ ಹಾಸಿಗೆಯಲ್ಲಿದ್ದಾರೆ ಎಂದು ತಾಳ್ಮೆಯಿಂದಿರುತ್ತಿದ್ದರು. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ–342–348, ದಾರುಲ್ ಕುತುಬ್ ಇಲ್‌ಮಿಯ ಬೈರುತ್ 2012) (ಮುಹಮ್ಮದ್ ರಸೂಲುಲ್ಲಾಹ್ ವಲ್ಲಝೀನ ಮಾಅಹು, ಸಂಪುಟ–3, ಪುಟ–74, ಬಾಬ್ ಅಲ್‌ಹಿಜ್ರ, ಮಕ್ತಬ ಮಿಸರ್) (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ–1, ಪುಟ–176, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಈ ಘಟನೆಯನ್ನು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ಅವರು ಸೀರತ್‌ಖಾತಮುನ್ನಬೀಈನ್‌ನಲ್ಲಿ ಈ ಕೆಳಗಿನಂತೆ ಉಲ್ಲೇಖಿಸಿದ್ದಾರೆ: "ರಾತ್ರಿಯ ಕಗ್ಗತ್ತಲಿನ ಸಮಯವಾಗಿತ್ತು ಮತ್ತು ಅನೇಕ ಗೋತ್ರಗಳಿಂದ ಸಂಬಂಧವಿರುವ ಖುರೈಶಿಗಳು ತಮ್ಮ ಕೊಲೆಯ ಯೋಜನೆಗಾಗಿ ಪ್ರವಾದಿ(ಸ)ರವರ ಮನೆಯನ್ನು ಮುತ್ತಿಗೆ ಹಾಕಿದ್ದರು ಮತ್ತು ಅವರು ಬೆಳಿಗ್ಗೆ ತಮ್ಮ ಮನೆಯಿಂದ ಹೊರಬರಲು ಕಾಯುತ್ತಿದ್ದರು ಅವರು ಬೆಳಿಗೆಗ ಮನೆಯಿಂದ ಹೊರಗೆ ಬಂದ ತಕ್ಷಣವೆ ಅವರನ್ನು ದಾಳಿ ಮಾಡಿ ಕೊಲ್ಲಬೇಕು ಎಂದು. ಪ್ರವಾದಿ(ಸ) ಅವರ ಬಳಿ ಕೆಲವು ಅವಿಶ್ವಾಸಿಗಳ ಅಮಾನತ್ತುಗಳಿದ್ದವು, ಏಕೆಂದರೆ ಬಲವಾದ ವಿರೋಧದ ನಡುವೆಯೂ, ಹೆಚ್ಚಿನ ಜನರು ಅವರ ಪ್ರಾಮಾಣಿಕತೆ ಮತ್ತು ವಿಶ್ವಾಸಾರ್ಹತೆಯಿಂದಾಗಿ ಅವರ ಬಳಿ ತಮ್ಮ ವಸ್ತುಗಳನ್ನು ಇಡುತ್ತಿದ್ದರು. ಆದ್ದರಿಂದ, ಅವರು ಹಝ್ರತ್ ಅಲಿ(ರ) ಅವರಿಗೆ ಈ ಅಮಾನತ್ತುಗಳ ಖಾತೆಯನ್ನು ವಿವರಿಸಿದರು ಮತ್ತು ಅಮಾನತ್ತುಗಳನ್ನು ಹಿಂತಿರುಗಿಸದೆ ಮೆಕ್ಕಾವನ್ನು ತೊರೆಯದಂತೆ ಹೇಳಿದರು. ನಂತರ ಪ್ರವಾದಿ(ಸ)ರವರು ಅಲ್ಲಾಹನ ಹೆಸರನ್ನು ಉಚ್ಚರಿಸಿ ತಮ್ಮ ಮನೆಯಿಂದ ಹೊರಟರು. ಆ ಸಂದರ್ಭದಲ್ಲಿ ಮುತ್ತಿಗೆದಾರರು ಪ್ರವಾದಿ(ಸ)ರವರ ಮನೆಯ ಬಗಿಲಿನ ಮುಂದೆಯೇ ನಿಂತಿದ್ದರು ಆದರೆ ಪ್ರವಾದಿ(ಸ.ಅ) ಅವರು ಇಷ್ಟು ರಾತ್ರಿಯಲ್ಲಿ ಮನೆಯಿಂದ ಹೊರಬರುತ್ತಾರೆ ಎಂದು ಅವರು ಭಾವಿಸದ ಕಾರಣ, ಅವರು ಆ ಸಮಯದಲ್ಲಿ ಅವರ ಮುಂದೆಯಿಂದಲೇ ಅವರ ಮಧ್ಯದಿಂದಲೇ ಹೊರಟುಹೋದರು............ ಪ್ರವಾದಿ(ಸ)ರವರ ಮನೆಗೆ ಮುತ್ತಿಗೆ ಹಾಕಿದ ಖುರೈಷಿಗಳು ಸ್ವಲ್ಪ ಸಮಯದ ನಂತರ ಅವರ ಮನೆಯೊಳಗೆ ಇಣುಕಿ ನೋಡುತ್ತಿದ್ದರು. ಅವರ ಜಾಗದಲ್ಲಿ ಹಝ್ರತ್ ಅಲಿ(ರ) ಮಲಗಿರುವುದನ್ನು ನೋಡಿ ತೃಪ್ತರಾಗುತ್ತಿದ್ದರು. ಆದರೆ ಬೆಳಿಗ್ಗೆ ಅವರಿಗೆ ತಮ್ಮ ಬೇಟೆಯು ತಮ್ಮ ಕೈಯಿಂದ ತಪ್ಪಿಸಿಕೊಂಡಿದೆ ಎಂದು ಅರಿವಾದಾಗ, ಅವರು ಅಲ್ಲಿ ಇಲ್ಲಿ ಹುಡುಕಾಡಿದರು. ಮಕ್ಕಾದ ಬೀದಿಗಳಲ್ಲಿ ಸಹಾಬಿಗಳ ಮನೆಗಳನ್ನು ಹುಡುಕಿದರು ಆದರೆ ಏನೂ ಸಿಗಲಿಲ್ಲ. ಈ ಕೋಪದಲ್ಲಿ ಹಝ್ರತ್ ಅಲಿ(ರ) ಅವರನ್ನು ಹಿಡಿದರು ಅವರಿಗೆ ಹೊಡೆದರು. (ಸೀರತ್ ಖಾತಮುನ್ನಬೀಈನ್; ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್, ಪುಟಗಳು–236–237)

ಆದಾಗ್ಯೂ, ಇವು ಸಮಯದ ಬಗ್ಗೆ ವರದಿಗಳಾಗಿವೆ. ಇದರಲ್ಲಿ ಬಹಳ ಭಿನ್ನಭಿಪ್ರಾಯಗಳಿವೆ. ಕೆಲವರ ಪ್ರಕಾರ ರಾತ್ರಿಯ ಮೊದಲ ಭಗವಾಗಿತ್ತು ಎನ್ನುತ್ತಾರೆ, ಕೆಲವರು ಮಧ್ಯರಾತ್ರಿ ಎಂದು ಹೇಳುತ್ತಾರೆ, ಕೆಲವರು ರಾತ್ರಿಯ ಕೊನೆಯ ಭಾಗ ಎಂದು ಹೇಳುತ್ತಾರೆ. ಏನೇ ಇರಲಿ ಪ್ರವಾದಿ(ಸ) ತಮ್ಮ ಮನೆಯನ್ನು ಯಾವಾಗ ತೊರೆದರು ಎಂಬುದರ ಬಗ್ಗೆ ಯಾವ ವರದಿಯಲ್ಲಿ ಭಿನ್ನಭಿಪ್ರಾಯವಿದೆ ಎಂದು ನಾನು ಪ್ರಸ್ತಾಪಿಸುತ್ತೇನೆ.

ರಾತ್ರಿಯ ಕೊನೆಯ ಮೂರನೇಯ ಭಾಗದಲ್ಲಿ ಅವರು ಮನೆಯ ಹೊರಗೆ ಬಂದರು ಎಂದು ಹೇಳುವ ವರದಿ ಇದೆ. ಮುಹಮ್ಮದ್ ಹುಸೇನ್ ಹೇಕಲ್ ಬರೆಯುತ್ತಾರೆ: ಈ ಮುಶ್ರಿಕ್‌ಗಳ (ಬಹುದೇವತಾವಾದಿಗಳ) ನಿರ್ಲಕ್ಷ್ಯದಿಂದಾಗಿ ರಾತ್ರಿಯ ಕೊನೆಯ ಮೂರನೇ ಭಾಗದಂದು ಪ್ರವಾದಿ ಮುಹಮ್ಮದ್(ಸ) ಹಝ್ರತ್ ಅಬುಬಕರ್(ರ)ರವರ ಮನೆಗೆ ಹೋದರು. (ಹಯಾತ್ ಮೊಹಮ್ಮದ್, ಮೊಹಮ್ಮದ್ ಹುಸೇನ್ ಹೇಕಲ್, ಪುಟ 223-224, ಅಧ್ಯಾಯ-10, ಹಿಜ್ರತರ ರಸೂಲ್)

ನಂತರ ಅವರು ಮಧ್ಯರಾತ್ರಿಯಲ್ಲಿ ಹೋದರು ಎಂಬ ವರದಿ ಇದೆ. ಹೀಗಾಗಿ, ಪ್ರವಾದಿ(ಸ) ಮತ್ತು ಹಝ್ರತ್ ಅಬುಬಕರ್(ರ) ಮಧ್ಯರಾತ್ರಿ 'ಸೌರ್' ಗುಹೆಗೆ ಹೊರಟರು ಎಂದು ದಲಾಯಿಲ್-ಉನ್-ನಬ್ವಾದಲ್ಲಿ ಬರೆಯಲಾಗಿದೆ. (ದಲಾಎಲುನ್ನಬವೀಯ, ಸಂಪುಟ-2, ಪುಟ-465-466, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಮದಾರಿಜುನ್ನಬುವ್ವದಲ್ಲಿ ಬರೆಯಲಾಗಿದೆ "ಪವಿತ್ರ ಪ್ರವಾದಿ(ಸ) ಬೆಳಿಗ್ಗೆ ಹಿಜ್ರತ್ ಮಾಡಲು ಉದ್ದೇಶಿಸಿದಾಗ, ಸಂಜೆ ಹಝ್ರತ್ ಅಲಿ ಮುರ್ತಜಾ(ರ) ಅವರಿಗೆ ಹೇಳಿದರು: ಅವಿಶ್ವಾಸಿಗಳು ವಾಸ್ತವಾಂಶವನ್ನು ತಿಳಿದೇ ಇರಲಿ ಎಂದು ನೀವು ಇಂದು ರಾತ್ರಿ ಇಲ್ಲಿಯೇ ಮಲಗಿರಿ." (ಮದಾರಿಜುನ್ನಬುವ್ವ, ಅಬ್ದುಲ್ ಹಖ್ಖ್ ಮುಹದ್ದಿಸ್ ದೆಹಲ್ವಿ, ಉರ್ದು ಅನುವಾದ ಗುಲಾಮ್ ಮುಈನುದ್ದೀನ್ ನುಮಾನಿ, ಸಂಪುಟ-2, ಪುಟ-83)

ಹಝ್ರತ್ ಮಿರ್ಜಾ ಬಶೀರ್ ಅಹ್ಮದ್ ಸಾಹಿಬ್ ಬರೆದದ್ದು ಏನೆಂದರೆ ಪ್ರವಾದಿಯವರು ರಾತ್ರಿಯ ಮೊದಲ ಭಾಗದಲ್ಲಿಯೇ ತಮ್ಮ ಮನೆಯಿಂದ ಹೊರಟು ಹೋಗಿದ್ದರು. ಅವರು ವಿವರವಾಗಿ ಬರೆಯುತ್ತಾರೆ: "ಕಾವಲುಗಾರರು ನಿಮ್ಮ ಬಾಗಿಲಿನ ಮುಂದೆ ಇದ್ದರು, ಆದರೆ ಅವರು ರಾತ್ರಿಯ ಮೊದಲ ಭಾಗದಲ್ಲಿ ಪ್ರವಾದಿ(ಸ) ಮನೆಯಿಂದ ಹೊರಬರುತ್ತಾರೆ ಎಂದು ಅವರು ಭಾವಿಸದ ಕಾರಣ, ಅವರು ಆ ಸಮಯದಲ್ಲಿ ತುಂಬಾ ಅಸಡ್ಡೆ ಹೊಂದಿದ್ದರು. ಅವರ ತಲೆಯ ಮೇಲೆ ಧೂಳನ್ನು ಎಸೆದು ಅವರ ಮಧ್ಯದಿಂದ ಹೊರಟುಹೋದರು ಮತ್ತು ಅದರ ಬಗ್ಗೆ ಅವರಿಗೆ ತಿಳಿದಿರಲಿಲ್ಲ. ಈಗ ಪ್ರವಾದಿ (ಸ) ಮಕ್ಕಾದ ಬೀದಿಗಳಲ್ಲಿ ಶಾಂತವಾಗಿ ಆದರೆ ತ್ವರಿತವಾಗಿ ಹಾದು ಹೋಗುತ್ತಿದ್ದರು ಮತ್ತು ಕಡಿಮೆ ಸಮಯದಲ್ಲಿ ಅವರು ಜನಸಂಖ್ಯೆಯ ಪ್ರದೇಶದಿಂದ ಹೊರಬಂದರು ಮತ್ತು ಸೌರ್ ಗುಹೆಯತ್ತ ಹೊರಟರು. ಹಝ್ರತ್ ಅಬುಬಕರ್(ರ) ಅವರೊಂದಿಗೆ ಎಲ್ಲವೂ ಈಗಾಗಲೇ ಇತ್ಯರ್ಥವಾಗಿತ್ತು ಮತ್ತು ಅವರು ದಾರಿಯಲ್ಲಿ ಭೇಟಿಯಾದರು. (ಸೀರತ್ ಖಾತಮನ್ನಬೀಈನ್; ಹಝ್ರತ್ ಮಿರ್ಜಾ ಬಶೀರ್ ಅಹ್ಮದ್ ಸಾಹಿಬ್ ಅವರಿಂದ, ಪುಟ-237)

ಹಝ್ರತ್ ಮಿಸ್ಲಿಹ್ ಮೌಊದ್(ರ) ಅವರ ನಿರೂಪಣೆಯ ಪ್ರಕಾರ, ಮಕ್ಕಾದ ಜನರು ಪ್ರವಾದಿ(ಸ) ಅವರನ್ನು ಕೊಲ್ಲಲು ಅವರ ಮನೆಯ ಮುಂದೆ ಜಮಾಯಿಸುತ್ತಿದ್ದಾಗ, ಅವರು ವಲಸೆ ಹೋಗುವ ಉದ್ದೇಶದಿಂದ ರಾತ್ರಿಯ ಕತ್ತಲೆಯಲ್ಲಿ ತಮ್ಮ ಮನೆಯನ್ನು ತೊರೆದರು. ಮಕ್ಕಾದ ಜನರು ಮುಹಮ್ಮದ್(ಸ) ಅವರಿಗೆ ತಮ್ಮ ಉದ್ದೇಶವನ್ನು ತಿಳಿಸಿದ್ದಾರೆ ಎಂದು ಅನುಮಾನಿಸಿರಬೇಕು, ಆದರೆ ಅವರು ಅವರ ಬಳಿಯಿಂದ ಹಾದುಹೋದಾಗ ಅವರು ಬೇರೆ ಯಾರೋ ಎಂದು ಭಾವಿಸಿದರು. ಅವರ ಮೇಲೆ ಹಲ್ಲೆ ಮಾಡದೆ ಮುಹಮ್ಮದ್(ಸ)ರರಿಗೆ ಅವರ ಉದ್ದೇಶಗಳ ಬಗ್ಗೆ ತಿಳಿಯದ ಹಾಗೆ ಅವರಿಂದ ಕಣ್ಮರೆಯಾದರು. ಆ ರಾತ್ರಿಯ ಹಿಂದಿನ ದಿನ ಅಬೂಬಕ್ಕರ್(ರ) ಅವರಿಗೂ ತನ್ನೊಂದಿಗೆ ವಲಸೆ ಹೋಗುವಂತೆ ತಿಳಿಸಲಾಯಿತು. ಆದ್ದರಿಂದ ಅವರೂ ಸಹ ಅವರನ್ನು ಭೇಟಿಯಾದರು ಮತ್ತು ಅವರಿಬ್ಬರು ಸ್ವಲ್ಪ ಸಮಯದಲ್ಲಿಯೇ ಮಕ್ಕಾವನ್ನು ತೊರೆದರು."
(ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ-20, ಪುಟ-222-223)

ಹಝ್ರತ್ ಮಸೀಹ್ ಮೌಊದ್(ಅ)ರ ಪ್ರಕಾರ ಹಝ್ರತ್ ಪೈಗಂಬರ್(ಸ) ಬೆಳಿಗ್ಗಿನ ಸಮಯದಲ್ಲಿ ಮನೆಯಿಂದ ಹೊರಟಿದ್ದರು ಮತ್ತು ವಿರೋಧಿಗಳು ಹಝ್ರತ್ ಪೈಗಂಬರ್(ಸ)ರ ಮನೆಯನ್ನು ಸುತ್ತುವರೆದಿದ್ದರು ಕೂಡ ಯಾವನೂ ಹಝ್ರತ್ ಪೈಗಂಬರ್(ಸ)ರನ್ನು ನೋಡಿರಲಿಲ್ಲ. ಈ ಎಲ್ಲ ಸಂಶಯಗ್ರಸ್ತರ ಕಣ್ಣುಗಳಲ್ಲಿ ಅಲ್ಲಾಹನು ಪರದೆ ಹಾಕಿದನು ಮತ್ತು ಹಝ್ರತ್ ಪೈಗಂಬರ್(ಸ) ಅವರ ತಲೆಯ ಮೇಲೆ ಧೂಳು ಎಬ್ಬಿಸುತ್ತಾ ಅಲ್ಲಿಂದ ಹೊರಟು ಹೋದರು. (ಸುರ್ಮಾ ಚಶ್ಮಾ ಆರ್ಯ, ರೂಹಾನಿ ಖಝಾಈನ್, ಸಂಪುಟ-2, ಪುಟ-66 ಅಡಿಟಿಪ್ಪಣಿ)

ಆದಾಗ್ಯೂ, ವಿವಿಧ ವರದಿಗಳಿವೆ, ಆದರೆ ಅದರ ಫಲಿತಾಂಶವು ಅವಿಶ್ವಾಸಿಯರಿಗೆ ತಿಳಿದಿರಲಿಲ್ಲ. ಅದೇ ರೀತಿ ಪ್ರವಾದಿ(ಸ)ರವರು ತಮ್ಮ ಮನೆಯಿಂದ ಹೊರಟು ಯಾವ ಕಡೆಗೆ ತೆರಳಿದರು ಎಂಬುದರ ಬಗ್ಗೆ ಅನೇಕ ವರದಿಗಳಿವೆ.

ಒಂದು ವರದಿಯು ಪ್ರವಾದಿ(ಸ) ಅವರು ತಮ್ಮ ಮನೆಯಿಂದ ಹೊರಟಿರಬಹುದು ಮತ್ತು ಹಝ್ರತ್ ಅಬೂಬಕರ್(ರ)ರವರು ತಮ್ಮ ಮನೆಯಿಂದ ಹೊರಟ ದಾರಿಯಲ್ಲಿ ಯಾವುದಾದರು ಒಂದು ಸ್ಥಳದಲ್ಲಿ ಇವರಿಬ್ಬರು ಬಂದು ಸೇರಿರಬಹುದುಗೆ. (ತಾರೀಖ್ ತಬರಿ, ಸಂಪುಟ-1, ಪುಟ-568, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1987)

ಒಂದು ವರದಿಯ ಪ್ರಕಾರ, ಪ್ರವಾದಿ(ಸ)ರವರು ತಮ್ಮ ಮನೆಯಿಂದ ಸೌರ್ ಗುಹೆಗೆ ಹೋದರು ಮತ್ತು ಸ್ವಲ್ಪ ಸಮಯದ ನಂತರ ಅಬುಬಕರ್(ರ) ಅವರ ಮನೆಗೆ ಬಂದ ನಂತರ ಹಝ್ರತ್ ಅಲಿ(ರ) ಅವರಿಗೆ ಹೇಳಿದರು: ಅವರು ಹೊರಟಿದ್ದಾರೆ ಸೌರ್ ಗುಹೆಯ ಕಡೆ ಹೋಗುತ್ತಿದ್ದಾರೆ ಆದ್ದರಿಂದ ನೀವು ಸಹ ಅವರನ್ನು ಹಿಂಬಾಲಿಸಿರಿ, ಆದ್ದರಿಂದ ಹಝ್ರತ್ ಅಬೂಬಕರ್ ಪ್ರವಾದಿ(ಸ) ಅವರನ್ನು ಹಿಂಬಾಲಿಸಿದರು. (ಅಸ್ಸೀರತುಲ್ ಹಲಬೀಯ, ಭಾಗ-2, ಪುಟ-47, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2008)

ಆದಾಗ್ಯೂ, ಈ ವರದಿಯು ತುಂಬಾ ದುರ್ಬಲವಾಗಿದೆ ಎಂದು ಕಾಣಿಸುತ್ತದೆ. ಇದರಿಂದ ಪ್ರವಾದಿ(ಸ) ಹಝ್ರತ್ ಅಬೂಬಕರ್(ರ) ಅವರಿಗಾಗಿ ಕಾಯುತ್ತಿದ್ದರು ಮತ್ತು ಅವರು ಮಲಗಿದ್ದರು ಎಂಬ ಭಾವನೆಯನ್ನು ನೀಡುತ್ತದೆ. ಮತ್ತು ಹಝ್ರತ್ ಅಲಿ(ರ) ಅವರಿಗೆ ಎಲ್ಲ ಮಾಹಿತಿ ನೀಡುತ್ತಿದ್ದಾರೆ ಎಂದು ಭಾಸವಾಗುತ್ತದೆ. ಹಿಜ್ರತ್‌ನಂತಹ ಪ್ರಮುಖ ರಹಸ್ಯ ಪ್ರಯಾಣ ಮತ್ತು ಹಝ್ರತ್ ಅಬೂಬಕರ್(ರ) ಅವರಂತಹ ವಿವೇಕಯುತ ಮತ್ತು ಜವಾಬ್ದಾರಿಯುತ ವ್ಯಕ್ತಿಗೆ ಅಂತಹ ನಿರ್ಲಕ್ಷ್ಯವನ್ನು ಮಾಡಲು ಸಾಧ್ಯವಿಲ್ಲ. ಆದ್ದರಿಂದ, ಹೆಚ್ಚಿನ ಪುಸ್ತಕಗಳಲ್ಲಿ ಕಂಡುಬರುವ ಇತರ ವರದಿಗಳು ಈ ವರದಿಗಿಂತ ಹೆಚ್ಚು ನಿಖರ ಮತ್ತು ಊಹೆಯಾಗಿದೆ ಏಕೆಂದರೆ ಇದರ ಪ್ರಕಾರ ಪ್ರವಾದಿ(ಸ) ಅವರು ತಮ್ಮ ಮನೆಯಿಂದ ಹೊರಟು ನೇರವಾಗಿ ಹಝ್ರತ್ ಅಬೂಬಕರ್(ರ) ಅವರ ಮನೆಗೆ ಹೋದರು ಮತ್ತು ಅಲ್ಲಿಂದ ಹಝ್ರತ್ ಅಬೂಬಕರ್(ರ) ಅವರೊಂದಿಗೆ ಸೌರ್ ಗುಹೆಯ ಕಡೆಗೆ ಹೊರಟರು. (ಅಸ್ಸೀರತುಲ್ ಹಲಬೀಯ ಲಿಇಬ್ನೆ ಹಿಶ್ಶಾಮ್, ಪುಟ-343, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಈ ಸಂದರ್ಭದಲ್ಲಿ, ಹಝ್ರತ್ ಅಬುಬಕರ್(ರ) ಅವರ ಇಬ್ಬರು ನಿಷ್ಠಾವಂತ ಮತ್ತು ಧೈರ್ಯಶಾಲಿ ಪುತ್ರಿಯರಾದ ಹಝ್ರತ್ ಆಯೇಶಾ(ರ) ಮತ್ತು ಹಝ್ರತ್ ಅಸ್ಮಾ(ರ) ಅವರು ಹುರಿದ ಮೇಕೆ ಮಾಂಸವನ್ನು ಒಳಗೊಂಡಂತೆ ಪ್ರಯಾಣಕ್ಕಾಗಿ ತರಾತುರಿಯಲ್ಲಿ ಆಹಾರವನ್ನು ಸಿದ್ಧಪಡಿಸಿದರು. ಪರಿಸ್ಥಿತಿಯ ನಾಜೂಕಿನಲ್ಲಿ ಮತ್ತು ಅವಸರದಲ್ಲಿ ಚರ್ಮದಿಂದ ಮಾಡಿದ ಆಹಾರದ ಪಾತ್ರೆಯನ್ನು ಕಟ್ಟಲು ಏನೂ ಇರದಿದ್ದಾಗ ಹಝ್ರತ್ ಅಸ್ಮಾ(ರ) ತಮ್ಮ 'ನಿತಾಖ್' ಸೊಂಟದ ಮೇಲೆ ಕಟ್ಟುವ ಬಟ್ಟೆಯನ್ನು ಎರಡು ಭಾಗಗಳಾಗಿ ಹರಿದು ಆಹಾರವನ್ನು ಕಟ್ಟಿದರು. ಒಂದು ಭಾಗದಿಂದ ಆಹಾರವನ್ನು ಕಟ್ಟಿದರು ಇನ್ನೊಂದರಿಂದ ನೀರಿನ ಬೊಗ್ಗಸೆಯನ್ನು ಕಟ್ಟಿದರು. (ಸಹೀಹ್ ಬುಖಾರಿ, ಕಿತಾಬುಲ್ ಇಹಾದ್ ವಸ್ಸೈರ್, ವರದಿ ಸಂಖ್ಯೆ-2979) (ಶರಹ್ ಅಝ್ಝುರ್ಖಾನಿ ಅಲಲ್ ಮವಾಹಿಬ್, ಭಾಗ-2, ಪುಟ-107, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1996)

ಪ್ರೀತಿ ಮತ್ತು ನಿಷ್ಠೆಯ ಈ ಕ್ಷಣಗಳನ್ನು ವೀಕ್ಷಿಸುತ್ತಿದ್ದ ಪವಿತ್ರ ಪ್ರವಾದಿ(ಸ) ಹೇಳಲಾರಂಭಿಸಿದರು: ಓ ಅಸ್ಮಾ! ನಿಮ್ಮ 'ನಿತಾಖ್'ನ ಪ್ರತಿಯಾಗಿ ಅಲ್ಲಾಹನು ನಿಮಗೆ ಸ್ವರ್ಗದಲ್ಲಿ ಎರಡು ನಿತಾಖನ್ನು ನೀಡುತ್ತಾನೆ. ಅಂದರೆ ಸೊಂಟದ ಪಟ್ಟಿ, ಸೊಂಟಕ್ಕೆ ಕಟ್ಟಿಕೊಂಡಿದ್ದ ಬಟ್ಟೆ. ಪವಿತ್ರ ಪ್ರವಾದಿ(ಸ) ರವರ ಈ ಸೂಚನೆಯಿಂದಾಗಿ, ಹಝ್ರತ್ ಅಸ್ಮಾ(ರ) ಅವರು 'ಝುತುನ್ನಿತಾಖ್' ಎಂದು ಕರೆಯಲ್ಪಟ್ಟರು. (ಸಬ್ಲುಲ್ ಹುದಾ ವರ್‌ರಶ್ಶಾದ್, ಸಂಪುಟ-3, ಪುಟ-239, ದಾರ್ ಅಲ್-ಕುತುಬ್ ಅಲ್-ಅಲಮಿಯಾ ಬೈರುತ್ 1993)

ಹಿಜ್ರತ್ ಯಾತ್ರೆಯಲ್ಲಿ ಹಝ್ರತ್ ಪೈಗಂಬರ್(ಸ) ಈ ವಚನಗಳನ್ನು ಉಚ್ಚರಿಸುತ್ತಾ ಇದ್ದರು: **ವಖುರ್ರಬ್ಬಿ ಅದ್‌ಖಿಲ್‌ನೀ ಮುದ್‌ಖಲ ಸಿದ್‌ಖಿನ್ ವ ಅಖ್‌ರಿಜ್‌ನೀ ಮುಖ್‌ರಜ ಸಿದ್‌ಖಿನ್ ವಜ್‌ಅಲ್ಲೀ ಮಿಲ್ಲದುನ್‌ಕ ಸುಲ್ತಾನ್ನಸೀರಾ.** (ಬನೀ ಇಸ್ರಾಈಲ್: 81) ಎಂದರೆ, ಹೇಳು: 'ನನ್ನ ಪ್ರಭೂ, ನನ್ನ ಪ್ರವೇಶ ಸತ್ಯದೊಂದಿಗೆ ಆಗುವ ರೀತಿಯಲ್ಲಿ ನನ್ನನ್ನು ಪ್ರವೇಶಿಸು ಮತ್ತು ನನ್ನ ನಿರ್ಗಮನ ಸತ್ಯದೊಂದಿಗೆ ಆಗುವ ರೀತಿಯಲ್ಲಿ ನನ್ನನ್ನು ಹೊರಗೆ ಹೋಗುವಂತೆ ಮಾಡು ಹಾಗೂ ತನ್ನ ಕಡೆಯಿಂದ ನನಗಾಗಿ ಶಕ್ತಿಶಾಲಿ ಸಹಾಯಕನನ್ನು ದಯಪಾಲಿಸು. (ಅಲ್‌ಖಲೀಫತುಲ್ ಅವ್ವಲ್ ಅಬೂಬಕರ್ ಸಿದ್ದೀಖ್(ರ), ಅಲಿ ಮುಹಮ್ಮದ್ ಅಸ್ಸಲಾಬಿ, ಪುಟ-47, ದಾರುಲ್ ಮಾರಿಫ ಬೈರೂತ್ 2006)

ಅದೇ ರೀತಿಯಲ್ಲಿ ಈ ಕೆಳಗಿನ ಒಂದು ದುಆದ ಪ್ರಸ್ತಾಪ ಸಹ ಲಭಿಸುತ್ತದೆ: **ಅಲ್‌ಹಮ್‌ದು ಲಿಲ್ಲಾಹಿಲ್ಲದೀ ಖಲಖನೀ ವಲಮ್ ಅಕು ಶೈಅನ್ ಅಲ್ಲಾಹುಮ್ಮ ಅಇನ್ನೀ ಅಲಾ ಹೌಲದ್ದುನ್‌ಯಾ ವಬವಾಇಕದ್ದಹ್‌ರಿ ವಮಸಾಇಬಲ್ಲಯಾಲಿ ವಲ್‌ಅಯ್ಯಾಮ್. ಅಲ್ಲಾಹುಮ್ಮ ಅಸ್‌ಹಿಬ್‌ನೀ ಫೀ ಸಫರೀ ವಖ್‌ಲಿಫ್‌ನೀ ಫೀ ಅಹ್‌ಲೀ ವಬಾರಿಕ್ ಲೀ ಫೀಮಾ ರಝಖ್‌ತನೀ ವಲಕ ಫದಲ್ಲಲನೀ ವಅಲಾ ಸಾಲಿಹ ಖುಲ್‌ಖೀ ಫಖವ್ವಿನೀ ವಇಲೈಕ ರಬ್ಬೀ ಫಹಬ್ಬಬನೀ ವಇಲನ್ನಾಸಿ ಫಲಾ ತಕ್ಕಲ್‌ನೀ. ಅಂತ ರಬ್ಬುಲ್ ಮುಸ್ತ್‌ಝಅಫೀನ. ವಅಂತ ರಬ್ಬೀ. ಅಊದು ಬಿವಜ್‌ಹಿಕಲ್‌ಕರೀಮಲ್ಲದೀ ಅಶ್‌ರಕತ ಲಹುಸ್ಸಮಾವಾತಿ ವಲ್‌ಅರ್‌ಝು ವಕಶಫತ್ ಬಿಹಿಝ್ಝುಲುಮಾತಿ ವಸ್ಸುಲ್‌ಹು ಇಲೈಹಿಲ್ ಅಮ್‌ರುಲ್ ಅವ್ವಲೀನ್ ವಲ್‌ಆಖಿರೀನ್. ಇನ್ನ ಯಹಿಲ್ಲು ಬಿಹೀ ಗಝ್ಝುಬಕ ಔ ಯುನಜ್ಜಿಲು ಇಲಾ ಸಖ್‌ತಿಕ ಅಊದು ಬಿಕ ಮಿನ್‌ಝ್ಝುವಾಲಿ ನಅ್‌ಮತಿಕ ವಫಜಾತಲ್ ಹಿಕ್‌ಮತಿಕ ವತಹ್‌ವಲು ಆಖಿಬತಿಕ ವಜಮೀಅಲು ಸಖ್‌ತಿಕ ಲಕಲ್ ಉಖ್‌ಬ ಖೈರ ಮಾ ಸತಅತ್ ವಲಾ ಹೌಲ ವಲಾ ಖುವ್ವತ ಇಲ್ಲಾ ಬಿಕ್.** ಎಂದರೆ, ನನ್ನನ್ನು ಸೃಷ್ಟಿಸಿದ ಅಲ್ಲಾಹನಿಗೆ ಎಲ್ಲ ಸ್ತುತಿಗಳು. ನಾನು ಏನೂ ಅಲ್ಲವಾಗಿದ್ದೆ. ಹೇ ಅಲ್ಲಾಹ್, ಲೋಕದ ಭಯದಲ್ಲಿ, ರಾತ್ರಿ ಮತ್ತು ದಿನದ ವಿಪತ್ತುಗಳಲ್ಲಿ ನನಗೆ ನೆರವು ನೀಡು. ಹೇ ಅಲ್ಲಾಹ್, ಯಾತ್ರೆಯಲ್ಲಿ ನನ್ನ ಸಹಚರನಾಗು. ನನ್ನ ಕುಟುಂಬದಲ್ಲಿ ನನ್ನ ಪ್ರತಿನಿಧಿ ಮತ್ತು ಉತ್ತರಾಧಿಕಾರಿಯಾಗು. ನನ್ನ ಶರೀರವನ್ನು ಉತ್ತಮವಾಗಿ ಸುದೃಢಗೊಳಿಸು. ನನ್ನನ್ನು ನಿನ್ನ ಪ್ರಿಯನನ್ನಾಗಿ ಮಾಡು. ನನ್ನನ್ನು ಜನರಿಗೆ ಒಪ್ಪಿಸಬೇಡ. ನೀನು ದುರ್ಬಲರ ಮತ್ತು ನನ್ನ ಪ್ರಭುವಾಗಿದ್ದಿ. ನಿನ್ನ ಉಜ್ವಲ ಮುಖದಿಂದ ಆಕಾಶ ಮತ್ತು ಭೂಮಿ ಬೆಳಗಿದೆ. ಅದರಿಂದ ಅಂಧಕಾರ ದೂರವಾಯಿತು. ಅದರಿಂದ ಹಿಂದಿನ ಮತ್ತು

ಮುಂದಿನ ಜನರ ಸಮಸ್ಯೆಗಳು ಬಗೆಹರಿಯಿತು. ನಿನ್ನ ಕೋಪದಿಂದ ಮತ್ತು ನಿನ್ನ ಅಸಂತುಷ್ಟಿಯಿಂದ ಅಭಯ ಯಾಚಿಸುತ್ತೇನೆ. ನಿನ್ನ ಅನುಗ್ರಹಗಳು ಇಲ್ಲವಾಗುವುದರಿಂದ ಮತ್ತು ನಿನ್ನ ಶಿಕ್ಷೆ ಅಚಾನಕ್ಕಾಗಿ ಬರುವುದರಿಂದ ನಾನು ಅಭಯ ಯಾಚಿಸುತ್ತೇನೆ. ನನ್ನ ಬಗ್ಗೆಗಿನ ಕೊನೆಯ ತೀರ್ಪು ಬದಲಾಗುವುದರಿಂದ ಅಭಯ ಯಾಚಿಸುತ್ತೇನೆ. (ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ-3, ಪುಟ-243, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993) (ಶರಹ್ ಝುರ್ಖಾನಿ, ಸಂಪುಟ-2, ಪುಟ-110, ದಾರುಲ್ ಕುತುಬ ಇಲ್‌ಮಿಯ ಬೈರೂತ್ 1996)

ಕಅ್‌ಬ ಭವನದ ಹಿಂದಿನಿಂದ ಸಾಗುವಾಗ ಹಝ್ರತ್ ಪೈಗಂಬರ್(ಸ) ಮಕ್ಕದ ಕಡೆಗೆ ಮುಖ ಮಾಡಿ ಹೇಳಿದರು: ಎಲೈ ಮಕ್ಕಾ, ನೀನು ಅಲ್ಲಾಹನ ಭೂಮಿಯಲ್ಲಿ ನನಗೆ ಮತ್ತು ಅಲ್ಲಾಹನಿಗೆ ಅತ್ಯಂತ ಪ್ರಿಯವಾದ ಪ್ರದೇಶವಾಗಿದೆ. ನಿನ್ನ ನಿವಾಸಿಗಳು ನನ್ನನ್ನು ಒತ್ತಾಯಪೂರ್ವಕವಾಗಿ ಹೊರಗೆ ಹಾಕಿರದಿದ್ದರೆ, ನಾನು ಎಂದಿಗೂ ಇಲ್ಲಿಂದ ನಿರ್ಗಮಿಸುತ್ತಿರಲಿಲ್ಲ. (ವ್ುುಹ್ವ್ುಮ್ದ್ ರಸೂಲುಲ್ಲಾಹ್ ವಲ್ಲಝೀನ ಮಾಅಹುಲ್ ಅಬ್ದ್, ಸಂಪುಟ-3, ಪುಟ-59, ಮಕ್ತಬ ಮಿಸರ್)

ಇಮಾಂ ಬೈಹಖಿ ಬರೆಯುತ್ತಾರೆ: ಸೌರ್ ಗುಹೆಗೆ ಹೋಗುವಾಗ ಹಝ್ರತ್ ಪೈಗಂಬರ್(ಸ)ರನ್ನು ಸಂರಕ್ಷಿಸಲಿಕ್ಕಾಗಿ ಹಝ್ರತ್ ಅಬೂಬಕರ್(ರ) ಅವರ ಮುಂದೆ, ಹಿಂದೆ, ಬಲಗಡೆ ಎಡಗಡೆಯಾಗಿ ನಡೆಯುತ್ತಿದ್ದರು. ಹಝ್ರತ್ ಪೈಗಂಬರ್(ಸ) ಎಲ್ಲ ಕಡೆಯಿಂದಲೂ ಸುರಕ್ಷಿತವಾಗಿ ಮತ್ತು ಕ್ಷೇಮವಾಗಿ ಇರಲು ಹೀಗೆ ಮಾಡುತ್ತಿದ್ದರು. (ಸಬ್ಲುಲ್ ಹುದಾವರಶ್ಶಾದ್, ಸಂಪುಟ-03, ಪುಟ-240, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993)

ಒಂದು ವರದಿಯ ಪ್ರಕಾರ ಈ ಪರ್ವತ ಮಾರ್ಗದ ಯಾತ್ರೆಯಲ್ಲಿ ಹಝ್ರತ್ ಪೈಗಂಬರ್(ಸ)ರ ಕಾಲುಗಳು ಗಾಯಗೊಂಡಿದ್ದುವು.
(ತಾರೀಖ್ ತಬರಿ, ಸಂಪುಟ-1, ಪುಟ-568, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1987)

ಸೌರ್ ಗುಹೆಯನ್ನು ತಲುಪಿದಾಗ, ಅಪಾಯದ ಬಗ್ಗೆ ಮುಂಜಾಗ್ರತೆ ವಹಿಸಲಿಕ್ಕಾಗಿ ಹಝ್ರತ್ ಅಬೂಬಕರ್(ರ) ಮೊದಲು ಸ್ವತಃ ಅದರೊಳಗೆ ಪ್ರವೇಶಿಸಿದರು ಮತ್ತು ಗುಹೆಯನ್ನು ಸ್ವಚ್ಛಗೊಳಿಸಿದರು. ಅನಂತರ ಹಝ್ರತ್ ಪೈಗಂಬರ್(ಸ)ರೊಡನೆ ಒಳಗೆ ಬರಲು ಹೇಳಿದರು. ಹಝ್ರತ್ ಅಬೂಬಕರ್(ರ) ಮಡಿಲಲ್ಲಿ ತಲೆಯಿರಿಸಿ ಹಝ್ರತ್ ಪೈಗಂಬರ್(ಸ) ಮಲಗಿದರು.

ಹಝ್ರತ್ ಅಬೂಬಕರ್(ರ) ತನ್ನೊಂದು ಪಾದವನ್ನು ಒಂದು ತೂತಲ್ಲಿ ಇಟ್ಟುಕೊಂಡರು. ಅಲ್ಲಿಂದ ಕೆಲವೊಮ್ಮೆ ಚೇಳು ಅಥವಾ ಹಾವು ಕಚ್ಚುತ್ತಿತ್ತು. ಆದರೆ ಹಝ್ರತ್ ಅಬೂಬಕರ್(ರ) ಅಲ್ಪವೂ ಅಲುಗಾಡಲಿಲ್ಲ. ಹಝ್ರತ್ ಪೈಗಂಬರ್(ಸ) ಎಚ್ಚರಗೊಂಡು ಕಣ್ಣು ತೆರೆದಾಗ ಹಝ್ರತ್ ಅಬೂಬಕರ್(ರ) ಮುಖದ ಬಣ್ಣ ಬದಲಾಗಿರುವುದನ್ನು ಕಂಡು ಏನಾಯಿತು ಎಂಬುದರ ಬಗ್ಗೆ ಕೇಳಿದರು ಮತ್ತು ತನ್ನ ಅನುಗ್ರಹೀತ ಲಾಲಾರಸವನ್ನು ಅಲ್ಲಿಗೆ ಸವರಿದರು. ಅದರ ನಂತರ ಅವರ ಪಾದವು ಏನೂ ಆಗಿಲ್ಲವೆಂಬಂತೆ ಗುಣಮುಖವಾಯಿತು. (ಶ್ರ್ಹ್ ಝುರ್‌ಖಾನಿ, ಸಂಪುಟ-2, ಪುಟ-121, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1996)

ಮತ್ತೊಂದೆಡೆ, ಪವಿತ್ರ ಪ್ರವಾದಿ(ಸ) ರ ಮನೆಗೆ ಮುತ್ತಿಗೆ ಹಾಕಿದ ಮಕ್ಕಾದ ಖುರೈಷಿಗಳನ್ನು ಅಲ್ಲಿಂದ ಹಾದು ಹೊಗುತ್ತಿದ್ದ ಒಬ್ಬ ವ್ಯಕ್ತಿಯು ಅವರನ್ನು ಕಂಡು ನೀವು ಏಕೆ ಇಲ್ಲಿ ನಿಂತಿದ್ದೀರಿ? ಎಂದು ಕೇಳಿದನು. ಅದಕ್ಕೆ ಅವನು ನಾನು ಪ್ರವಾದಿ ಮುಹಮ್ಮದ್(ಸ) ಅವರು ಬೀದಿಗಳಲ್ಲಿ ನಡೆದುಕೊಂಡು ಹೋಗುವುದನ್ನು ನೋಡಿದ್ದೇನೆ ಎಂದು ಆ ವ್ಯಕ್ತಿ ಹೇಳಿದನು, ನಂತರ ಅವರೆಲ್ಲರು ಆ ವ್ಯಕ್ತಿಯನ್ನು ಅಪಹಾಸ್ಯ ಮಾಡಿದರು ಮತ್ತು ಅವರು ತನ್ನ ಹಾಸಿಗೆಯಲ್ಲಿಯೇ ಇದ್ದಾರೆ ಮತ್ತು ನಾವು ಅವರನ್ನು ನಿರಂತರವಾಗಿ ಗಮನಿಸುತ್ತಿದ್ದೇವೆ ಎಂದು ಹೇಳಿದರು. ನಂತರ ತಡರಾತ್ರಿ ತನ್ನ ಪೂರ್ವ ನಿಯೋಜಿತ ಯೋಜನೆಯಂತೆ ಒಮ್ಮೆಲೇ ಒಳಗೆ ಹೋಗಿ ಚಾದರ್ ತೆಗೆದು ಮಲಗಿದ್ದ ವ್ಯಕ್ತಿಯನ್ನು ನೋಡಿದಾಗ ಅದು ಹಝ್ರತ್ ಅಲಿ ಎಂದು ತಿಳಿಯಿತು. ಅವರನ್ನು ಕೇಳಲಾಯಿತು, "ಮುಹಮ್ಮದ್(ಸ) ಎಲ್ಲಿ? ಎಂದು" ಅದಕ್ಕೆ ಅವರು ಎಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರು. ಮುಶ್‌ರಿಕರು ಅವರನ್ನು ಥೀಮಾರಿ ಹಾಕಿ ಥಳಿಸಿ ಕೆಲಕಾಲ ಸೆರೆವಾಸದ ನಂತರ ಬಿಡುಗಡೆ ಗೊಳಿಸಿದರು.

ಆದಾಗ್ಯೂ, ಈ ವರದಿಯ ಪ್ರಕಾರ, ಅವರು ಹಝ್ರತ್ ಅಲಿ(ರ) ಅವರನ್ನು ಖಂಡಿಸಿದರು ಮತ್ತು ಹೊಡೆದರು ಮತ್ತು ಕೋಪಗೊಂಡು ಅದೇ ಕೋಪದ ಸ್ಥಿತಿಯಲ್ಲಿ ಅಲ್ಲಿಂದ ಹಿಂದಿರುಗಿ ಮಕ್ಕಾದ ಬೀದಿಗಳಲ್ಲಿ ಮತ್ತು ಮನೆಗಳಲ್ಲಿ ಅವರನ್ನು ಹುಡುಕಲು ಪ್ರಾರಂಭಿಸಿದರು. (ತಾರಿಖ್-ಉಲ್-ಖಾಮಿಸ್, ಸಂಪುಟ-2, ಪುಟ-10, ದಾರ್ ಅಲ್-ಕಿತಾಬ್ ಅಲ್-ಅಲಮಿಯಾ ಬೈರುತ್ 2009 ರಿಂದ ಪ್ರಕಟಿಸಲಾಗಿದೆ)

ಅದೇ ಸಮಯದಲ್ಲಿ, ಅವರು ಹಝ್ರತ್ ಅಬೂಬಕರ್(ರ) ಅವರ ಮನೆಗೆ ಬಂದರು. ಅನಂತರ ಹಝ್ರತ್ ಅಸ್ಮಾ(ರ)ರೊಡನೆ ಇದರ ಬಗ್ಗೆ ಪ್ರಶ್ನಿಸುವ ವೇಳೆ ಅಬೂಜಹಲ್ ಅಸ್ಮಾರ ಕೆನ್ನೆಗೆ ಹೊಡೆದರು. ಅದರಿಂದ ಅವರ ಕಿವಿಯೋಲೆ ತುಂಡಾಯಿತು ಮತ್ತು ಅವರೆಲ್ಲರೂ ಕೋಪದ ಸ್ಥಿತಿಯಲ್ಲಿ ಹಿಂತಿರುಗಿದರು.
(ಅಲ್-ಸಿರತ್ ಅಲ್-ನಬವಿಯಾ ಇಬ್ನ್ ಹಿಶಾಮ್, ಪುಟ-344, ದಾರ್ ಅಲ್-ಕಿತಾಬ್ ಅಲ್-ಅಲಮಿಯಾ ಬೈರುತ್ 2001 ರಿಂದ ಪ್ರಕಟಿಸಲಾಗಿದೆ)

ಮಕ್ಕಾವನ್ನು ತನಿಖೆ ಮಾಡುವುದರಲ್ಲಿ ವಿಫಲವಾದ ನಂತರ, ಪರಿಶೋಧಕರನ್ನು ಮಕ್ಕಾದ ಸುತ್ತಲೂ ಕಳುಹಿಸಲಾಯಿತು. ಮಕ್ಕಾದ ಮುಖ್ಯಸ್ಥ ಉಮಯ್ಯ ಬಿನ್ ಖಲಫ್ ಸ್ವತಃ ತನ್ನ ಸಹಚರರೊಂದಿಗೆ ಪರಿಣಿತ ಪತ್ತೇದಾರಿಯನ್ನು ಕರೆದೊಯ್ದನು ಮತ್ತು ಈ ಪತ್ತೇದಾರಿ ನಿಜವಾಗಿಯೂ ಪರಿಣಿತ ಪತ್ತೇದಾರಿ ಎಂಬುದರಲ್ಲಿ ಸಂದೇಹವಿಲ್ಲ. ಇವರ ಕೈಚಳಕಕ್ಕೆ ಎಳ್ಳೇ ಹೊಗಳಿದರೂ ಸಾಲದು ಏಕೆಂದರೆ ಕೇವಲ ಆತನು ಮಾತ್ರ ಪ್ರವಾದಿ(ಸ.ಅ)ರವರ ಹೆಜ್ಜೆಗುರುತುಗಳನ್ನು ಒಂದೊಂದಾಗಿ ಕಂಡು ಹಿಡಿದು ಸೌರ್ ಗುಹೆಯ ಬಾಯಿಯ ತನಕ ತಲುಪಿಸಿದನು. ಮುಹಮ್ಮದ್ ರವರ ಹೆಜ್ಜೆಗುರುತುಗಳು ಇಲ್ಲಿಯ ತನಕ ಮಾತ್ರ ಕಾಣಿಸುತ್ತಿದೆ ಇಲ್ಲಿಂದೆ ಮುಂದೆ ಅವರು ಹೋಗಲಿಲ್ಲ ಎಂದು. ಅಲ್ಲಮ ಬಲಾಜಾರಿ ಈ ಪರಿಶೋಧಕನ ಹೆಸರು ಅಲ್-ಕಮಾಹ್ ಇಬ್ನ್ ಕುರ್ಜ್ ಎಂದು ಉಲ್ಲೇಖಿಸಿದ್ದಾರೆ ಮತ್ತು ಮಕ್ಕಾ ವಿಜಯದ ಸಂದರ್ಭದಲ್ಲಿ ಅವರು ಇಸ್ಲಾಂಗೆ ಮತಾಂತರಗೊಂಡಿದ್ದಾರೆ ಎಂದು ಬರೆದಿದ್ದಾರೆ. ಅವರು ಸೌರ್ ಗುಹೆಯ ಬಾಯಿಯಲ್ಲಿ ನಿಂತು ಮಾತನಾಡುತ್ತಿದ್ದರು, ಆ ಇಬ್ಬರು ವಲಸಿಗರು ಒಂದೇ ಗುಹೆಯಲ್ಲಿ ಅಡಗಿಕೊಂಡಿದ್ದು ಮಾತ್ರವಲ್ಲ, ಅವರು ಇವರ ಮಾತುಗಳನ್ನು ಸಹ ಕೇಳುತ್ತಿದ್ದರು, ಹಝ್ರತ್ ಅಬೂಬಕರ್(ರ) ಹೇಳುತ್ತಾರೆ ನಾನು ನಾನು ಅವರ ಪಾದಗಳನ್ನು ಸಹ ನೋಡುತ್ತಿದ್ದೆ ಮತ್ತು ಅಲ್ಲಾಹನಆಣೆ! ಅವರಲ್ಲಿ ಒಬ್ಬನಾದರು ಒಳಗೆ ಇಣುಕಿ ನೋಡಿದರೆ ನಾವು ಸಿಕ್ಕಿಬೀಳುತ್ತಿದ್ದೆವು ಆದರೆ ಈ ಅಪಾಯ ಮತ್ತು ವಿಪತ್ತಿನ ಸಮಯದಲ್ಲಿ, ಈ ಇಬ್ಬರು ಒಬ್ಬಂಟಿಯಾಗಿರಲಿಲ್ಲ, ಆದರೆ ಅವರೊಂದಿಗೆ ಮೂರನೆಯವನು ಆಕಾಶ ಮತ್ತು ಭೂಮಿಯ ಮೇಲೆ ಅಧಿಕಾರವನ್ನು ಹೊಂದಿರುವ ಮತ್ತು ಸರ್ವಶಕ್ತನಾಗಿದ್ದ ಅಲ್ಲಾಹನು ಇದ್ದನು. (ಸಬ್ಲುಲ್ ಹುದಾವರ್‍ರಶ್ಶಾದ್, ಸಂಪುಟ-3, ಪುಟ-241, ದಾರ್ ಅಲ್-ಕುತುಬ್ ಅಲ್-ಇಲ್‌ಮಿಯಾ 1993) (ಸಹೀಹ್ ಬುಖಾರಿ, ಕಿತಾಬ್ ಫಝಾಎಲುಸ್ಸಹಾಬ(ಸ), ವರದಿ ಸಂಖ್ಯೆ-3653)

ಒಂದು ಕಡೆ ಪತ್ತೇದಾರರು ಬರುವ ಮೊದಲೇ ತನ್ನ ಪವಾಡ ಸದೃಶ ಶಕ್ತಿಯಿಂದ ಮರ ನೆಡಲಾಯಿತು, ಒಂದು ಜೇಡವು ಗುಹೆಯ ಪ್ರವೇಶದ್ವಾರದಲ್ಲಿ ಬಲೆಯನ್ನು ಹೆಣೆದಿತ್ತು ಮತ್ತು ಪಾರಿವಾಳಗಳ ಒಂದು ಜೋಡಿ ಕೂಡನ್ನು ಕಟ್ಟಿ ಮೊಟ್ಟೆಗಳನ್ನು ಹಾಕಿತ್ತು. ಇದು ವರದಿಯದಲ್ಲಿದೆ. (ಅಲ್-ಮವಾಹಿಬ್ ಅಲ್-ಲುದ್ನಿಯಾ, ಸಂಪುಟ-1, ಪುಟಗಳು_292-293, ಅಲ್-ಮುಕ್ತಾಬ್ ಅಲ್-ಇಸ್ಲಾಮಿ ಬೈರುತ್ 2004 ರಿಂದ ಪ್ರಕಟಿಸಲಾಗಿದೆ)

ಅದೇನೇ ಇರಲಿ, ಆ ನಂತರ ಅಲ್ಲಾಹನು ಪ್ರವಾದಿ(ಸ.ಅ) ರನ್ನು ಹೇಗೆ ಸಾಂತ್ವನಗೊಳಿಸುತ್ತಾನೆ ಅಥವಾ ಈ ಎಲ್ಲಾ ವಿಳಯಗಳನ್ನು ನೋಡಿದ ನಂತರ ಅಲ್ಲಾಹನ ಆಜ್ಞೆಯಿಂದ ಹಝ್ರತ್ ಅಬೂಬಕರ್(ರ) ಅವರನ್ನು ಹೇಗೆ ಸಮಾಧಾನಪಡಿಸಿದರು? ಇದನ್ನು ಮುಂದಿನ ಖುತ್‌ಬಗಳಲ್ಲಿ ಉಲ್ಲೇಖಿಸಲಾಗುವುದು, ಇನ್‌ಶಾಅಲ್ಲಾಹ್.

******************

*(ಪುಟ ಸಂಖ್ಯೆ **06ರ** ಉಳಿದ ಭಾಗ)*

ಸೌಭಾಗ್ಯವನ್ನು ಪಡೆದಿದ್ದರು. ತಬ್ಲೀಗ್ ಮಾಡುವ ಆವೇಶ ಅವರಿಗೆ ಇತ್ತು. ನಿತ್ಯವೂ ಹೊಸ ಮಾರ್ಗಗಳನ್ನು ಹುಡುಕಿ ಮಾಡುತ್ತಿದ್ದರು. ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ಮಾಡಿದ್ದರು. ದಿವಂಗತರು ಪತ್ನಿಯನ್ನಲ್ಲದೆ ಇಬ್ಬರು ಪುತ್ರರನ್ನು ಮತ್ತು ಮೂವರು ಪುತ್ರಿಯರನ್ನು ಅಗಲಿರುವರು.

ಮುಂದಿನ ಜನಾಝ ಜಲ್ಸ ಸಾಲಾನ ಆಫೀಸಿನ ಉದ್ಯೋಗಿಯಾಗಿದ್ದ ಸನ್ಮಾನ್ಯ ಮಿಯಾ ರಫೀಖ್ ಅಹ್ಮದ್ ಸಾಹಿಬ್‌ರದ್ದಾಗಿದೆ. ಕೆಲವು ದಿನಗಳ ಹಿಂದೆ 87ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.** ಅವರ ತಂದೆಯ ಹೆಸರು ಬಶೀರ್ ಅಹ್ಮದ್ ಸಾಹಿಬ್ ಎಂದಾಗಿತ್ತು. ಪಾಕಿಸ್ತಾನ ಸ್ಥಾಪನೆಗೆ ಮುಂಚಿತವಾಗಿಯೇ ಖಾದಿಯಾನಿನಿಂದ ಹಿಜ್ರತ್ ಮಾಡಿ ಕೋಯ್ಟ ಬಂದು ನೆಲೆಸಿದ್ದರು. ಕೋಯ್ಟದ ಅಮೀರ್ ಜಮಾಅತ್ ಆಗಿ ಸೇವೆ ಸಲ್ಲಿಸಲು ಅವರ ತಂದೆಗೆ ಸೌಭಾಗ್ಯ ಲಭಿಸಿತ್ತು. ಮಿಯಾ ರಫೀಕ್ ಸಾಹಿಬ್‌ರ ಕುಟುಂಬದಲ್ಲಿ ಅಹ್ಮದಿಯ್ಯತ್ತಿನ ಪ್ರವೇಶ ಅವರ ತಾತರಾದ ಮತ್ತು ಹಝ್ರತ್ ಮಸೀಹ್ ಮೌಊದ್‌ರ(ಅ) ಸಹಾಬಿಯಾದ ಹಝ್ರತ್ ಡಾಕ್ಟರ್ ಅಬ್ದುಲ್ಲಾಹ್ ಸಾಹಿಬ್‌ರ ಮೂಲಕ ಆಗಿತ್ತು. 1960ರಲ್ಲಿ ಮಿಯಾ ರಫೀಕ್ ಸಾಹಿಬ್‌ರು ಇಂಜಿನಿಯರಿಂಗ್ ಕಾಲೇಜ್ ಲಾಹೋರ್‌ನಿಂದ ಮೆಕಾನಿಕಲ್ ಇಂಜಿನಿಯರಿಂಗ್‌ನಲ್ಲಿ ಬಿ.ಎಸ್.ಸಿ. ಮಾಡಿದರು. ಅನಂತರ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿದ್ದರು. ಅನಂತರ ತನ್ಜಾನಿಯಗೆ ಹೋದರು. ಹತ್ತು ವರ್ಷಗಳಷ್ಟು ಕಾಲ ತನ್ಜಾನಿಯದಲ್ಲಿ ಕಳೆದರು. ಕೆಲವು ಕಾಲ ಅಲ್ಲಿ ಕೆಲಸ ಮಾಡುವುದಲ್ಲದೇ ಕಲಿಸುತ್ತಲೂ ಇದ್ದರು. ತನ್ಜಾನಿಯದಲ್ಲೂ ಅವರಿಗೆ ಸೆಕ್ರಟರಿ ಮಾಲ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. 1986ರಲ್ಲಿ ಅವರು ವಖ್ಫೇ ಆರ್ಝಿಯಾಗಿ ಜಲ್ಸ ಸಾಲಾನದ ಆಫೀಸಲ್ಲಿ ಸೇವೆ ಸಲ್ಲಿಸಲು ಶುರುಮಾಡಿದರು. ಅನಂತರ 1987ರಲ್ಲಿ ನಿಯಮಿತವಾಗಿ ಜಲ್ಸ ಸಾಲಾನ ಆಫೀಸಲ್ಲಿ ಉದ್ಯೋಗಿಯಾಗಿ ಕೆಲಸ ಮಾಡಲು ಶುರುಮಾಡಿದರು. 1989ರಲ್ಲಿ ಜೀವಿತ ವಖ್ಫ್ ಮಾಡಿ ಜಲ್ಸ ಸಾಲಾನ ರಬ್ವದ ಆಫೀಸಲ್ಲಿ ಟೆಕ್ನಿಕಲ್ ವಿಭಾಗದಲ್ಲಿ ಟೆಕ್ನಿಕಲ್ ವಿಷಯದ ನಾಝಿಂ ಆಗಿ ಸೇವೆ ಸಲ್ಲಿಸಲು ಶುರುಮಾಡಿದರು. ಮರಣದ ವರೆಗೂ ಇದೇ ಸೇವೆಯಲ್ಲಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) ಅವರ ವೈವಾಹಿಕ ಸಂಬಂಧವನ್ನು ಮಾಡಿಸಿದ್ದರು. ಹಝ್ರತ್ ಮೌಲಾನ ಅಬುಲ್ ಅತಾ ಸಾಹಿಬ್‌ರು ಅವರ ನಿಕಾಹ್ ನಡೆಸಿದ್ದರು. ಅವರಿಗೆ ಅಲ್ಲಾಹನು ಮೂವರು ಪುತ್ರಿಯರನ್ನು ಮತ್ತು ಒಬ್ಬ ಪುತ್ರನನ್ನು ದಯಪಾಲಿಸಿದ್ದಾನೆ.

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 27 January 2022, Issue No. 04

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

ಅವರ ಪುತ್ರ ಹೇಳುತ್ತಾರೆ: ಜಮಾಅತಿನ ಬಗ್ಗೆ ಎಂದಾದರೂ ಎಲ್ಲಾದರೂ ತಪ್ಪಾದ ಮಾತನ್ನು ಯಾರಾದರೂ ಹೇಳಿದರೆ, ತಕ್ಷಣವೇ ತಡೆಯುತ್ತಿದ್ದರು. ಅವರಿಗೆ ಖಿಲಾಫತಿನೊಂದಿಗೆ ಅಪರಿಮಿತವಾದ ಪ್ರೀತಿಯಿತ್ತು. ಒಮ್ಮೆ ಮನೆಯ ಒಬ್ಬ ಸದಸ್ಯನೋ ಮನೆಗೆ ಬಂದ ಅತಿಥಿಯೋ ಯಾರೋ ಒಬ್ಬರು ಅವರೊಡನೆ ಹೀಗೆ ಹೇಳಿದರು: ನಿಮಗೆ ಜಮಾಅತಿನ ವತಿಯಿಂದ ಲಭಿಸಿರುವ ಕ್ವಾರ್ಟರ್ ಬಹಳ ಸಣ್ಣದು. ನೀವು ಹೇಳುವುದಾದರೆ ನಿಮಗೆ ಇದಕ್ಕಿಂತ ದೊಡ್ಡದು ಸಿಗಬಹುದು. ಅದಕ್ಕೆ ಉತ್ತರಿಸುತ್ತಾ ಅವರು ಹೇಳಿದರು: ನನ್ನನ್ನು ಜಮಾಅತ್ ಟೆಂಟಿನಲ್ಲಿ ಇರಿಸಿದ್ದರೂ ನಾನು ಅಲ್ಲಿ ಇರಲು ತಯಾರಿದ್ದೇನೆ. ನಾನು ಬೇಡಿಕೆ ಇರಿಸುವುದಿಲ್ಲ. ಅವರು ಕೆಲವು ಬಡವರಿಗೆ ರಹಸ್ಯವಾಗಿ ಸಹಾಯ ಮಾಡುತ್ತಿದ್ದರು ಎಂದು ಅವರ ಮರಣದ ನಂತರ ನಮಗೆ ಗೊತ್ತಾಯಿತು ಎಂದು ಅವರ ಕಿರಿಯ ಮಗನು ಹೇಳುತ್ತಾನೆ. ತಹಜ್ಜುದ್ ನಮಾಝ್ ನಿಯತವಾಗಿ ನಿರ್ವಹಿಸುತ್ತಿದ್ದರು. ಮಗನು ಹೇಳುತ್ತಾನೆ: ಅವರಿಗೆ ಪವಿತ್ರ ಖುರ್‌ಆನಿನೊಂದಿಗೆ ಪ್ರೇಮವಿತ್ತು. ಮೃದು ಹೃದಯಿ, ಸೌಮ್ಯವಾಗಿ ಮಾತನಾಡುವವರು, ಪ್ರಾಮಾಣಿಕ, ಸತ್ಯಸಂಧರಾಗಿದ್ದರು. ಅನೇಕ ಉನ್ನತ ವೈಶಿಷ್ಟ್ಯಗಳನ್ನು ಹೊಂದಿದ್ದರು. ತಂದೆಯಲ್ಲಿ ಖಿಲಾಫತಿನೊಂದಿಗೆ ಅನುಸರಣೆ ಮತ್ತು ಪ್ರಾಮಾಣಿಕತೆಯ ಹಾಗು ವಫ಼ನ್ನು ನಿಭಾಯಿಸುವ ಅಸಾಮಾನ್ಯವಾದ ಆವೇಶವಿತ್ತು.

ಅದನ್ನು ನಾನು ಕೂಡ ನೋಡಿದ್ದೇನೆ. ಅವರು ಅತ್ಯಂತ ಸಭ್ಯ ವ್ಯಕ್ತಿಯಾಗಿದ್ದರು. ಬಹಳ ವಿನಯದಿಂದ ಪ್ರತಿಯೊಂದು ಕೆಲಸವನ್ನು ಮಾಡುತ್ತಿದ್ದರು. ನಿಷ್ಠೆಯಿಂದ ಬೈಅತಿನ ಹಕ್ಕನ್ನು ಈಡೇರಿಸುವವರಾಗಿದ್ದರು.

ಜಮಾಅತಿನ ಹಣವನ್ನು ಹೇಗೆ ಉಳಿತಾಯ ಮಾಡುವುದು ಎಂಬುದರ ಪ್ರಯತ್ನ ಮಾಡುತ್ತಿದ್ದರು. ಹೇಗೆ ಕನಿಷ್ಠ ಹಣದಿಂದ ಹೆಚ್ಚಿನ ಪ್ರಯೋಜನ ಪಡೆಯುವುದು ಎಂಬುದರ ಪ್ರಯತ್ನ ಮಾಡುತ್ತಿದ್ದರು. ಅವರು ರೊಟ್ಟಿ ಮಾಡುವ ಕೆಲವು ಮಿಶನ್‌ಗಳನ್ನು ಸಹ ಡಿಸೈನ್ ಮಾಡಿದ್ದರು. ಅದಕ್ಕಾಗಿ ಅವರು ರಬ್ವದಲ್ಲಿ ಸಾಕಷ್ಟು ಕೆಲಸಗಳನ್ನು ಮಾಡಿದ್ದಾರೆ. ಕಷ್ಟತೆ ಮತ್ತು ಚಿಂತೆಯ ಸಮಯದಲ್ಲಿ ಸದಾ ಸಹನೆ ಮತ್ತು ಧೈರ್ಯದಿಂದ ಇರುತ್ತಿದ್ದರು. ಪ್ರತಿಯೊಂದು ಕೆಲಸವನ್ನು ಬಹಳ ಪ್ರಾಮಾಣಿಕವಾಗಿ ಮತ್ತು ಉತ್ಸಾಹದಿಂದ ಮಾಡುತ್ತಿದ್ದರು.

ಮುಂದಿನ ಜನಾಝ಼ ಅಮೇರಿಕದ ಮಾಜಿ ಜಮಾಅತ್ ಅಮೀರ್ ಆದ ಸನ್ಮಾನ್ಯ ಇಹ್ಸಾನುಲ್ಲಾಹ್ ಝ಼ಫರ್ ಸಾಹಿಬ್‌ರ ಪತ್ನಿಯಾದ ಖಾನಿತ ಝ಼ಫರ್ ಸಾಹಿಬ್‌ರದ್ದಾಗಿದೆ. ಕೆಲವು ದಿನಗಳ ಹಿಂದೆ ಕಾರ್ ಆಕ್ಸಿಡೆಂಟ್‌ನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. 1941ರಲ್ಲಿ ಅವರ ಜನನವಾಗಿತ್ತು. ನಿವೃತ್ತ ಡಿಸಿಶನ್ ಜಡ್ಜ್ ಆದ ಚೌಧರಿ ಅಲ್‌ಝ಼ುಮ ಅಲಿ ಸಾಹಿಬ್ ಅವರ ತಂದೆಯಾಗಿದ್ದರು. ಚೌಧರಿ ಫಖೀರ್ ಮುಹಮ್ಮದ್ ಸಾಹಿಬ್ ಅವರ ತಾತರಾಗಿದ್ದರು. ಪಾರ್ಟಿಶನಿನ ಕೂಡಲೇ ಅವರಿಗೆ ನಾಝ಼ಿರ್ ಉಮೂರೆ ಆಮ್ಮ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತು. ಅನೇಕ ಉದಾತ್ತ ಗುಣಗಳನ್ನು ಹೊಂದಿದ್ದರು ಮತ್ತು ಹಸನ್ಮುಖಿ ಮಹಿಳೆಯಾಗಿದ್ದರು. ಖ಼ಿಲಾಫತಿನೊಂದಿಗೆ ಸದಾ ನಿಷ್ಠೆಯ ಸಂಬಂಧವನ್ನು ಹೊಂದಿದ್ದರು. ಅದನ್ನು ಅವರು ಪ್ರಕಟಿಸುತ್ತಿದ್ದರು. ದಿವಂಗತರಿಗೆ ಪವಿತ್ರ ಖುರ್‌ಆನಿನೊಂದಿಗೆ ಬಹಳ ಪ್ರೇಮವಿತ್ತು. ಹಝ಼್ರತ್ ಪೈಗಂಬರ್(ಸ) ಮತ್ತು ಹಝ಼್ರತ್ ಮಸೀಹ್ ಮೌಊದ್‌ರೊಂದಿಗೆ ಬಹಳ ವಿಶ್ವಾಸವಿತ್ತು. ತನ್ನ ಮಕ್ಕಳಲ್ಲೂ ಇದೇ ಪ್ರೇಮ ಮತ್ತು ವಿಶ್ವಾಸವನ್ನು ಉಂಟುಮಾಡಲು ಪ್ರಯತ್ನಿಸಿದರು. ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ಮಾಡಿದ್ದರು. ದಿವಂಗತರು ಪತಿಯನ್ನಲ್ಲದೆ ಇಬ್ಬರು ಪುತ್ರಿಯರನ್ನು ಅಗಲಿರುವರು. ಒಬ್ಬ ಯುವ ಮಗನು ಸಹ ಇದ್ದನು. ಅವನು ಕೆಲವು ವರ್ಷಗಳಿಗೆ ಮುಂಚೆ ಅಪಘಾತದಲ್ಲಿ ಮೃತಪಟ್ಟನು. ಬಹಳ ಸಹನೆಯಿಂದ ಅದರ ದುಃಖವನ್ನು ಇವರು ಸಹಿಸಿದ್ದರು.

ಇನಾಮುಲ್ ಹಖ಼್ ಕೌಸರ್ ಸಾಹಿಬ್ ಮುರಬ್ಬಿ ಬರೆಯುತ್ತಾರೆ: ಪವಿತ್ರ ಖುರ್‌ಆನಿನ ಕ್ಲಾಸುಗಳಲ್ಲಿ ನಿಯತವಾಗಿ ಹಾಜರಾಗುತ್ತಿದ್ದರು. ಬಹಳ ದೂರದಿಂದ ಯಾತ್ರೆ ಮಾಡಿ ಬರುತ್ತಿದ್ದರು. ಪಿ.ಎಚ್.ಡಿ ಮಾಡಿ ಡಾಕ್ಟರೇಟ್ ಪಡೆದಿದ್ದರು. ಆದರೆ ಬಹಳ ಸರಳ ಸ್ವಭಾವಿಯಾಗಿದ್ದರು. ಯಾವುದೇ ರೀತಿಯ ಜಂಬ ಅಥವಾ ತೋರಿಕೆ ಅವರಲ್ಲಿ ಇರಲಿಲ್ಲ. ದರಿದ್ರರ ಮತ್ತು ನಿರ್ಗತಿಕರ ಬಗ್ಗೆ ಬಹಳ ಕಾಳಜಿ ವಹಿಸುತ್ತಿದ್ದರು. ಮುಬಲ್ಲಿಗ್‌ರೊಂದಿಗೆ ವಾತ್ಸಲ್ಯವುಳ್ಳ ತಾಯಿಯ ಹಾಗೆ ವರ್ತಿಸುತ್ತಿದ್ದರು. ಅವರೊಂದಿಗೆ ಬಹಳ ಗೌರವಾದರದೊಂದಿಗೆ ಇರುತ್ತಿದ್ದರು. ಬಹಳ ವಿನಯದಿಂದ ಎಲ್ಲ ಕೆಲಸಗಳನ್ನು ಮಾಡುತ್ತಿದ್ದರು. ಪಾದರಕ್ಷೆಗಳನ್ನು ಅದರ ಸ್ಥಳದಲ್ಲಿ ಇರಿಸಲು ಲಜ್ನ ಸದಸ್ಯರೊಡನೆ ಹೇಳುತ್ತಿದ್ದರು. ಅವರು ಇರಿಸದಿದ್ದರೆ ಸ್ವತಃ ಎತ್ತಿ ಇರಿಸುತ್ತಿದ್ದರು. ಅದಲ್ಲದೆಯೂ ಮಸೀದಿಯ ಸ್ವಚ್ಛತೆ ಇತ್ಯಾದಿ ಕೆಲಸಗಳನ್ನು ಕೂಡ ಬಹಳ ವಿನಯದಿಂದ ಮಾಡುತ್ತಿದ್ದರು. ಅಹಂಕಾರ ಅಥವಾ ತೋರಿಕೆ ಕಿಂಚಿತ್ತೂ ಅವರಲ್ಲಿ ಇರಲಿಲ್ಲ. ಬಹಳ ಸರಳವಾದ ವಸ್ತ್ರಗಳನ್ನು ಧರಿಸುತ್ತಿದ್ದರು. ಬಹಳ ಉತ್ತಮ ರೀತಿಯಲ್ಲಿ ವರ್ತಿಸುತ್ತಿದ್ದರು. ಖಿಲಾಫತಿನ ವತಿಯಿಂದ ಹೇಳಲಾಗುವ ಎಲ್ಲ ಯೋಜನೆಗಳಿಗೆ ಸನ್ನದ್ಧರಾಗಿ ಇರುತ್ತಿದ್ದರು.

ಅಲ್ಲಾಹನು ಈ ಎಲ್ಲ ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದೊಂದಿಗೆ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳಿಗೂ ಅವರ ಹೆಜ್ಜೆಗುರುತುಗಳ ಮೇಲೆ ನಡೆಯಲು ಸೌಭಾಗ್ಯ ನೀಡಲಿ.

***************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ನಿರ್ಮಾಸಿತು. ಮತ್ತೊಮ್ಮೆ ಖಾದಿಯಾನಿನ ನಿವಾಸಿಗಳು ಮಸೀಹ್ ಮೌಊದ್(ಅ) ರವರ ಅತಿಥಿಗಳ ಆಗಮನ ಮತ್ತು ಅವರನ್ನು ಸ್ವಾಗತಿಸಲು ಸಂಭ್ರಮದಿಂದ ತಮ್ಮ ತಮ್ಮ ಮನೆ ಮತ್ತು ವಠಾರಗಳ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಸಿಕೊಂಡರು. ಮತ್ತು ತಮ್ಮ ತಮ್ಮ ನೆಲೆಯಲ್ಲಿ ಜಲ್ಸದ ಸಿದ್ಧತೆ ಮಾಡತೊಡಗಿದರು. ಸಾಮೂಹಿಕ ವಖಾರೆ ಅಮಲ್ ಮೂಲಕ ಖಾದಿಯಾನನ್ನು ಸ್ವಚ್ಛಗೊಳಿಸಲಾಯಿತು. ಜಲ್ಸದ ಕೆಲ ದಿನಗಳ ಮೊದಲೇ ವಿದ್ಯುತ್ ವಿಭಾಗ ವತಿಯಿಂದ ಮೊಹಲ್ಲದ ಗಲ್ಲಿಗಳಲ್ಲಿ ಮತ್ತು ರಸ್ತೆಗಳಲ್ಲಿ Tubelights ಮೂಲಕ ಪ್ರಕಾಶಗೊಳಿಸಿದರು ಬಹಿಶ್ತಿ ಮಖ್ಬರ, ದಾರುಲ್ ಮಸೀಹ್, ಮಸ್ಜಿದ್ ಮುಬಾರಕ್, ಮಸ್ಜಿದ್ ಆಕ್ಸಾ ಹಾಗೂ ಮಿನಾರತುಲ್ ಮಸೀಹ್ ಅನ್ನು ಸಣ್ಣ ಸಣ್ಣ ವಿದ್ಯುತ್ ಬಲ್ಬುಗಳಿಂದ ಮದುಮಗಳ ಹಾಗೆ ಶೃಂಗರಿಸಲಾಯಿತು. ಮಸೀಹ್ ಮೌಊದ್(ಅ) ರವರ ಈ ಆಧ್ಯಾತ್ಮಿಕ ಪಟ್ಟಣ ತನ್ನ ಆಂತರಿಕ ಮಿಂಚಿನ ಜೊತೆ ಜೊತೆಯಲ್ಲಿ ಬಾಹ್ಯವಾಗಿಯೂ ಮಿಂಚತೊಡಗಿತ್ತು.

**ವೀಕ್ಷಕ ಕಾರ್ಯಕರ್ತರು ಹಾಗೂ ಜಲ್ಸ ವ್ಯವಸ್ಥೆಗಳು**

ದಿನಾಂಕ: 21 ಡಿಸೆಂಬರ್ 2021 ಮಂಗಳವಾರ ಸುಮಾರು ಹತ್ತು ಮುಕ್ಕಾಲು ಗಂಟೆ ಸಮೀಪ ಜಲ್ಸ ಸ್ಥಳ 'ಬುಸ್ತಾನ್ ಅಹ್ಮದ್" ನಲ್ಲಿ ಹುಝೂರ್ ಅನ್ವರ್(ಅಬಿಅ) ರವರ ಪ್ರತಿನಿಧಿ ಮಾನ್ಯ ಮೌಲಾನಾ ಮುಹಮ್ಮದ್ ಇನಾಮ್ ಘೋರಿ ಸಾಹಿಬ್‌ರವರ ಅಧ್ಯಕ್ಷತೆಯಲ್ಲಿ ಮೇಲ್ವಿಚಾರಕರ ಹಾಗೂ ಕಾರ್ಯಕರ್ತರ ಒಂದು ಸಭೆ ಜರುಗಿತು. **ಅಹಲಂ ವ ಸಹಲಂ ವ ಮರ್‌ಹಬಾ** ಎಂಬ ಸ್ವಾಗತ ಘೋಷಣೆಗಳು ಹುಝೂರ್ ಅನ್ವರ್(ಅಬಿಅ) ರವರ ಪ್ರತಿನಿಧಿ ಸಭೆಗೆ ಆಗಮಿಸಿದೊಡನೆ ಮೊಳಗ ತೊಡಗಿತು. ಅವರು ಮೊದಲ ಜಲ್ಸ ಸಾಲಾನದ ವಿವಿಧ ವಿಭಾಗದ ಬ್ಯಾನರ್‌ಕೆಳಗೆ ನಿಂತಿದ್ದ ಆಯೋಜಕರು, ವ್ಯವಸ್ಥಾಪಕರು ಹಾಗೂ ಕಾರ್ಯಕರ್ತರನ್ನು ಭೇಟಿಯಾದರು. ಕಾರ್ಯಕ್ರಮವು ಪವಿತ್ರ ಖುರ್‌ಆನ್‌ನ ಪಾರಾಯಣದೊಂದಿಗೆ ಪ್ರಾರಂಭವಾಯಿತು. ಅದನ್ನು ಲುಖ್ಮಾನ್ ಅಹ್ಮದ್ ತಖಿ ಅವರು ನಿರ್ವಹಿಸಿ ಅದರ ಅನುವಾದ ಪ್ರಸ್ತುತಪಡಿಸಿದರು. ಆನಂತರ ಮೌಲಾನಾ ಮುಹಮ್ಮದ್ ಇನಾಮ್ ಘೋರಿ ಸಾಹಿಬ್‌ರವರು ಸಭೆಯುನ್ನು ಉದ್ದೇಶಿಸಿ ಮಾತನಾಡುತ್ತಾ ಹೇಳಿದರು. ಅಲ್ಹಮ್ದುಲಿಲ್ಲಾಹ್ ಎರಡು ವರ್ಷಗಳ ನಂತರ ಅಲ್ಲಾಹನ ಅನುಗ್ರಹದಿಂದ ಜಲ್ಸ ಸಾಲಾನ ಖಾದಿಯಾನ್ ಆಯೋಜಿಸಲಾಗುತ್ತಿದೆ ದೈಹಿಕವಾಗಿ ಈ ಜಲ್ಸದಲ್ಲಿ ಹಾಜರಿ ಮಿತಿಯಲ್ಲಿರುತ್ತದೆ. ಆದರೂ Live Streaming ಮೂಲಕ ದೇಶದಾದ್ಯಂತ ಜಲ್ಸ ಆಲಿಸಬಹುದಾಗಿದೆ. ನೋಡಬಹುದಾಗಿದೆ. ಅವರು ಸಮ್‌ಇ ವ ಬಸರಿ ವಿಭಾಗವನ್ನು ಗಮನಿಸಿ ಸಲಹೆ ನೀಡಿದರು. Live Streaming ಮೂಲಕ ದೇಶದಾದ್ಯಂತ ಜಲ್ಸ ತೋರಿಸಬೇಕಾಗಿರುವುದು ಆಲಿಸಬೇಕಾಗಿರುವುದು ನಮ್ಮ ಹೊಣೆಯಾಗಿದೆ. ಆದುದರಿಂದ ಇದರ ಕಡೆ ವಿಶೇಷ ಗಮನ ಹರಿಸುವುದು ಅಗತ್ಯವಾಗಿದೆ. ಅವರು ಈ ದೈವಿಕ ಜಲ್ಸದ ಪ್ರಾಮುಖ್ಯತೆ ಹಾಗೂ ಕಾರುಣ್ಯಗಳ ಬಗ್ಗೆ ಬೆಳಕು ಚೆಲ್ಲಿದರು. ಜಲ್ಸ ಸಾಲಾನಾದ ಕಾರ್ಯವನ್ನು ಉತ್ತಮ ರೀತಿಯಲ್ಲಿ ನೆರವೇರಿಸಲು, ಅದರ ಸೇವೆಗೈಯುವ ಕಾರ್ಯಕರ್ತರಿಗೆ ಅವರ ಕರ್ತವ್ಯಗಳ ಬಗ್ಗೆ ತಿಳಿ ಹೇಳಿದರು. ಅವರು ಎಲ್ಲ ಕಾರ್ಯಕರ್ತರಿಗೆ ಪೂರ್ಣ ಶ್ರಮವಹಿಸಿ ತಮ್ಮ ಕರ್ತವ್ಯವನ್ನು ಅರಿತು ಕಾರ್ಯವೆಸಗುವಂತೆ ಸಲಹೆ ನೀಡಿದರು. ರಕ್ಷಣಾ ಕಾರ್ಯಗಳ ಕೆಲ ಮುಖ್ಯ ವಿಚಾರಗಳ ಬಗ್ಗೆ ಮಾರ್ಗದರ್ಶನ ನೀಡಿದರು. ಸಾಮೂಹಿಕ ನಮಾಝ್ ನಿರ್ವಹಣೆಯಲ್ಲಿ ಯಾವುದೇ ಆಲಸ್ಯ ಆಗದಂತೆ ನೋಡಿಕೊಳ್ಳಲು ನಿರ್ದೇಶನ ನೀಡಿದರು. ಕೊನೆಯಲ್ಲಿ ಅವರು ಸಯ್ಯದ್‌ನಾ ಹುಝೂರೆ ಅನ್ವರ್(ಅಬಿಅ) ರವರ ಕೆಲ ನುಡಿಗಳ ಮೂಲಕ ಜಲ್ಸಕ್ಕೆ ಆಗಮಿಸುವ ಹಝ್‌ರತ್ ಮಸೀಹ್ ಮೌಊದ್(ಅ) ರವರ ಅತಿಥಿಗಳ ಸತ್ಕಾರದ ಕುರಿತು ಹಾಗೂ ಅದರ ಮಹತ್ವ ವಿವರಿಸಿಕೊಟ್ಟರು. ಅವರೊಂದಿಗೆ ಅತ್ಯಂತ ಆದರ ವಿನಯದಿಂದ ವರ್ತಿಸಲು ಉಪದೇಶ ಮಾಡಿದರು. ಅಂತಿಮವಾಗಿ ಎಲ್ಲ ಕಾರ್ಯಕರ್ತರಿಗೆ ದುಆ ಮಾಡಲು ಒತ್ತು ನೀಡಿದರು. ಕೊನೆಗೆ ಅವರು ಅಲ್ಲಾಹನು ಈ ಜಲ್ಸಾ ಎಲ್ಲ ರೀತಿಯಲ್ಲಿ ಯಶಸ್ವಿಗೊಳ್ಳಲು ಮತ್ತು ಅನುಗ್ರಹಿಸಲು ದುಆ ಮಾಡಿಸಿದರು. ಅದರೊಂದಿಗೆ ಈ ಸಭೆ ಮುಕ್ತಾಯವಾಯಿತು. ನಂತರ ಅವರು ಎಲ್ಲ ವಸತಿಗಳನ್ನು ವೀಕ್ಷಿಸಿದರು ಮತ್ತು ಅವಶ್ಯ ಸಲಹೆಗಳನ್ನು ನೀಡಿದರು.

**(ಮುಂದುವರಿಯುವುದು)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.